

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮಾರ್ಚ್ 3 ಸೋಮವಾರ 2025

ಸಂಪುಟ: 45 | ಸಂಚಿಕೆ: 313 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಇಂದಿನಿಂದ ವಿಧಾನಮಂಡಲ ಬಜೆಟ್ ಅಧಿವೇಶನ

● ಮಾ.7ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಬಜೆಟ್ ಮಂಡನೆ ● ಮಾ.21ರವರೆಗೆ ನಡೆಯಲಿರುವ ಅಧಿವೇಶನ



ಬೆಂಗಳೂರು, ಮಾ.2– ಕರ್ನಾಟಕ ವಿಧಾನಮಂಡಲದ ಅಧಿವೇಶನ ಸೋಮವಾರದಿಂದ (ಮಾ.3) ಆರಂಭವಾಗಲಿದ್ದು, ಮಾ.21ರ ತನಕ ನಡೆಯಲಿದೆ. ಮಾ.7ರಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ದಾಖಲೆಯ 16ನೇ ಬಜೆಟ್ ಹಾಗೂ ಮುಖ್ಯಮಂತ್ರಿ ಆಗಿ 9ನೇ ಬಜೆಟ್ ಮಂಡನೆ ಮಾಡಲಿದ್ದಾರೆ. ಮಾ.7ರಂದು ಸಿಎಂ ಸಿದ್ದರಾಮಯ್ಯನವರು ಸಚಿವ ಸಂಪುಟ ಸಭೆ ನಡೆಸಿ ಬಜೆಟ್‌ಗೆ ಅನುಮೋದನೆ ಪಡೆದುಕೊಂಡ ಬಳಿಕ ವಿಧಾನ ಸಭೆಯಲ್ಲಿ ಬಜೆಟ್ ಮಂಡನೆ ಮಾಡಲಿದ್ದಾರೆ.

ನಾಳೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಶನಿವಾರ ಮತ್ತು ಭಾನುವಾರ ಹೊರತುಪಡಿಸಿ 14 ದಿನ ಬಜೆಟ್ ಅಧಿವೇಶನ ಕಲಾಪಗಳು ನಡೆಯಲಿವೆ. ಮಾರ್ಚ್ 4ರಿಂದ 6ರವರೆಗೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯಲಿದೆ.

ಸಿಎಂ ಸಿದ್ದರಾಮಯ್ಯ ಅವರು ಮೊಣಕಾಲು ನೋವಿನ ಸಮಸ್ಯೆಯಿಂದ ಬಳಲುತ್ತಿದ್ದು, ಅಧಿವೇಶನಕ್ಕೆ ಆಗಮಿಸುವ ಸಲುವಾಗಿ ವಿಧಾನಸೌಧದ ಪೂರ್ವ ದ್ವಾರದ ಬಳಿ ಪ್ರತ್ಯೇಕ ರ್‍ಯಾಂಪ್ ವ್ಯವಸ್ಥೆ ಮಾಡಲಾಗಿದೆ. ಬಜೆಟ್ ದಿನ ಕುಳಿತುಕೊಂಡೇ ಅವರು ಬಜೆಟ್ ಭಾಷಣ ಓದಲಿದ್ದಾರೆ. ಸಿಎಂ ಸಿದ್ದರಾಮಯ್ಯನವರು ಮಂಡಿಸುವ ಬಜೆಟ್ ಅನ್ನು ಸರ್ಕಾರದ ವಿಧಾನಸಭೆ ಅಧಿವೇಶನದ ವೆಬ್ ಪೋರ್ಟಲ್‌ನಲ್ಲಿ ಲೈವ್ ವೀಕ್ಷಿಸಬಹುದು. ■5ನೇ ಪುಟಕ್ಕೆ

ರಾಜ್ಯಪಾಲರಿಗೆ ನಿರಂತರವಾಗಿ ಅಪಮಾನ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಸದನದಲ್ಲಿ ಪ್ರತಿಭಟನೆ

ಬೆಂಗಳೂರು, ಮಾ.2– ರಾಜ್ಯಪಾಲರಿಗೆ ನಿರಂತರವಾಗಿ ಅಪಮಾನ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಅಧಿವೇಶನದ ಮೊದಲ ದಿನ ಪ್ರತಿಭಟಿಸಲಾಗುವುದು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ತಿಳಿಸಿದರು.



ಬೆಂಗಳೂರಿನಲ್ಲಿಂದು ಮಾತಾಡಿದ ಅವರು, ಕಾಂಗ್ರೆಸ್ ಸರ್ಕಾರ ರಾಜ್ಯಪಾಲರಿಗೆ ನಿರಂತರವಾಗಿ ಅಪಮಾನ ಮಾಡುತ್ತಿದೆ. ಒಂದು ಕಡೆ ಅಪಮಾನ ಮಾಡಿದರೆ, ಮತ್ತೊಂದು ಕಡೆ ಅವರಿಂದಲೇ ಸರ್ಕಾರಕ್ಕೆ ಮೆಚ್ಚುಗೆ ಹೇಳುವ ಮಾತನ್ನು ಆಡಿಸಲಾಗುತ್ತಿದೆ. ಇದನ್ನು ವಿರೋಧಿಸಿ ಬಿಜೆಪಿಯಿಂದ ಮಾ.3 ರಂದು ಪ್ರತಿಭಟಿಸಲಾಗುವುದು ಎಂದರು. ರಾಜ್ಯದಲ್ಲಿ ಅಭಿವೃದ್ಧಿ ■5ನೇ ಪುಟಕ್ಕೆ

ಸಿಎಂ ಸಿದ್ದರಾಮಯ್ಯರಿಗಾಗಿ ವಿಶೇಷ ರ್‍ಯಾಂಪ್



ಮಂಡಿ ಚಿಪ್ಪು ನೋವಿನಿಂದ ಬಳಲುತ್ತಿರುವ ಸಿಎಂ ಸಿದ್ದರಾಮಯ್ಯ ಅವರಿಗೆ ವಿಧಾನಸೌಧದಲ್ಲಿ ವಿಶೇಷ ರ್‍ಯಾಂಪ್ ಸಿದ್ಧಗೊಳ್ಳುತ್ತಿದೆ. ಕಳೆದ ಅನೇಕ ದಿನಗಳಿಂದ ಮಂಡಿ ಚಿಪ್ಪು ನೋವಿನಿಂದ ಸಿಎಂ ಬಳಲುತ್ತಿದ್ದಾರೆ. ವೈದ್ಯರು ಆರು ವಾರಗಳ ವಿಶ್ರಾಂತಿಗೆ ಸೂಚಿಸಿರುವ ಹಿನ್ನೆಲೆಯಲ್ಲಿ ಅವರಿಗೆ ನಡೆದಾಡಲು ಸಾಧ್ಯವಾಗುತ್ತಿಲ್ಲ.

ಮಾ.7 ರಂದು ಸಿಎಂ ಸಿದ್ದರಾಮಯ್ಯ 16 ನೇ ಬಜೆಟ್ ಮಂಡನೆ ಮಾಡುತ್ತಿದ್ದು, ಅವರಿಗೆ ವಿಧಾನಸೌಧಕ್ಕೆ ಆಗಮಿಸಲು ಅನುಕೂಲ ಆಗಲಿ ಎಂದು ರ್‍ಯಾಂಪ್ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಸಿದ್ದರಾಮಯ್ಯನವರು ಈ ಬಾರಿ ಕುಳಿತುಕೊಂಡು ಬಜೆಟ್ ಪ್ರತಿ ಓದುವ ಸಾಧ್ಯತೆಯಿದೆ.

ಐಸಿಸಿ ಚಾಂಪಿಯನ್ಸ್ ಟ್ರೋಫಿ-2025

ವರುಣ್ ಚಕ್ರವರ್ತಿ ಸ್ಪಿನ್ ಮೋಡಿ: ಕಿವೀಸ್ ವಿರುದ್ಧ ಭಾರತಕ್ಕೆ ಜಯ

ಸೆಮೀಸ್‌ನಲ್ಲಿ ಆಸ್ಟ್ರೇಲಿಯಾ ಭಾರತದ ಎದುರಾಳಿ



ದುಬೈ, ಮಾ.2– ವರುಣ್ ಚಕ್ರವರ್ತಿ ಸೇರಿದಂತೆ ಸ್ಪಿನ್ನರ್‌ಗಳ ಕರಾರುವಾಕ್ ಬೌಲಿಂಗ್ ನೆರವಿನಿಂದ ಚಾಂಪಿಯನ್ಸ್ ಟ್ರೋಫಿಯ 'ಎ' ಗುಂಪಿನ ಅಂತಿಮ ಪಂದ್ಯದಲ್ಲಿ ಭಾರತ, ನ್ಯೂಜಿಲೆಂಡ್ ವಿರುದ್ಧ 44 ರನ್‌ಗಳ ಭರ್ಜರಿ ಜಯ ಗಳಿಸಿದೆ. ಆ ಮೂಲಕ ಅಜೇಯವಾಗಿ ಸೆಮಿಫೈನಲ್ ಪ್ರವೇಶಿಸಿರುವ ಭಾರತ ಮಾ.4ರಂದು ನಡೆಯುವ ಮೊದಲ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಕಾದಾಡಲಿದೆ.

ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 249 ರನ್ ಗಳಿಸಿತು.

250 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ನ್ಯೂಜಿಲೆಂಡ್, ವರುಣ್ ಚಕ್ರವರ್ತಿ, ಕುಲ್ದೀಪ್ ಯಾದವ್ ಅವರ ಮಾಂತ್ರಿಕ ಸ್ಪಿನ್ ದಾಳಿಗೆ ಸಿಲುಕಿ 45.3 ಓವರ್‌ಗಳಲ್ಲಿ 205 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿ 6 ರನ್ ಗಳಿಸಿದ್ದ ರಚಿನ್ ರವೀಂದ್ರ ಅವರಿಗೆ ಹಾರ್ದಿಕ್ ಪಾಂಡ್ಯ ಪೆವಿಲಿಯನ್ ಹಾದಿ ತೋರಿಸಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ವಿಲ್ ಯಂಗ್ ಕೂಡ 22 ರನ್ ಗಳಿಸಿ ವರುಣ್ ಚಕ್ರವರ್ತಿಗೆ ವಿಕೆಟ್ ಒಪ್ಪಿಸಿದರು. ಉಳಿದಂತೆ ನಂತರ ಬಂದ ಡ್ಯಾರಿಯಲ್ ಮಿಚೆಲ್ 17, ಟಾಮ್ ಲಾಥಮ್ 14, ಗ್ಲೆನ್ ಫಿಲಿಪ್ಸ್ 12, ಮಿಚೆಲ್ ಸ್ಯಾಂಟ್ನರ್ 28 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಕ್ರೀಸ್‌ನಲ್ಲಿ ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶನ ■5ನೇ ಪುಟಕ್ಕೆ

11 ರನ್ ಗಳಿಸಿ ಔಟ್ ಆದರೂ ಮತ್ತೊಂದು 'ವಿರಾಟ್' ವಿಶ್ವ ದಾಖಲೆ

ದುಬೈ, ಮಾ.2– ದುಬೈನಲ್ಲಿ ಚಾಂಪಿಯನ್ಸ್ ಟ್ರೋಫಿಯ ಭಾರತ–ನ್ಯೂಜಿಲ್ಯಾಂಡ್ ಪಂದ್ಯ ನಡೆಯುತ್ತಿದ್ದು, ಪಾಕ್ ವಿರುದ್ಧ ಶತಕ ದಾಖಲಿಸಿ 3 ವಿಶ್ವ ದಾಖಲೆ ನಿರ್ಮಿಸಿದ್ದ ಕೊಹ್ಲಿ ಈ ಪಂದ್ಯದಲ್ಲಿ ಮತ್ತೊಂದು ದಾಖಲೆ ಸೃಷ್ಟಿಸಿದ್ದಾರೆ.



ಈ ಪಂದ್ಯದಲ್ಲಿ ವಿರಾಟ್ ಕೊಹ್ಲಿ 11 ರನ್ ಗಳಿಸಿ ಔಟ್ ಆಗಿದ್ದಾರೆ. ಆದರೂ ಸಹ ವಿರಾಟ್ ಕೊಹ್ಲಿ ಹೊಸ ದಾಖಲೆಗೆ ತಮ್ಮ ಹೆಸರು ಸೇರಿಸಿದ್ದಾರೆ. ವಿರಾಟ್ ಕೊಹ್ಲಿ ಈ ದಾಖಲೆ ನಿರ್ಮಿಸಿರುವ 7ನೇ ಭಾರತೀಯ ಕ್ರಿಕೆಟ್ ಎಂಬ ಕೀರ್ತಿಗೂ ಭಾಜನರಾಗಿದ್ದಾರೆ.

ಇಂದಿನ ಪಂದ್ಯದ ದಾಖಲೆಯ ಮೂಲಕ ಕೊಹ್ಲಿ ಸಚಿನ್ ತೆಂಡೂಲ್ಕರ್, ಎಂಎಸ್ ಧೋನಿ, ರಾಹುಲ್ ದ್ರಾವಿಡ್, ಮೊಹಮ್ಮದ್ ಅಜರುದ್ದೀನ್, ಸೌರವ್ ಗಂಗೂಲಿ, ಯುವರಾಜ್ ಸಿಂಗ್ ಸಾಲಿಗೆ ಸೇರ್ಪಡೆಯಾಗಿದ್ದಾರೆ.

ಈ ಪಂದ್ಯದ ವೇಳೆ ಕೊಹ್ಲಿ, ಏಕದಿನ ಕ್ರಿಕೆಟ್‌ನಲ್ಲಿ ವೇಗವಾಗಿ 14,000 ರನ್ ಗಳಿಸಿದ ಸಚಿನ್ ತೆಂಡೂಲ್ಕರ್ ಅವರ ದಾಖಲೆಯನ್ನು ಮುರಿದಿದ್ದರು. ಭಾರತ–ನ್ಯೂಜಿಲ್ಯಾಂಡ್ ಪಂದ್ಯ ವಿರಾಟ್ ಕೊಹ್ಲಿಗೆ 300ನೇ ಒಡಿಐ ಪಂದ್ಯವಾಗಿದ್ದು, 300 ರ ಲೆಜೆಂಡರಿ ಕ್ಲಬ್ ಪ್ರವೇಶಿಸಿದ್ದಾರೆ.

ಹೀರೋಗಳು ಝೀರೋ ಆಗಿದ್ದಾರೆ.. ಗುಂಪುಗಾರಿಕೆ, ಜಾತಿ ರಾಜಕಾರಣ ಬಿಟ್ಬಿಡಿ

ಕಾಂಗ್ರೆಸ್ ನಾಯಕರಿಗೆ ಡಿಕೆಶಿ ಎಚ್ಚರಿಕೆ

ಉಡುಪಿ, ಮಾ.2– ಗುಂಪುಗಾರಿಕೆ ಮಾಡಿದ ಹೀರೋಗಳು ಝೀರೋ ಆಗಿದ್ದಾರೆ. ಝೀರೋಗಳು ಹೀರೋ ಆಗಿದ್ದಾರೆ. ಜಾತಿ ಮೇಲೆ ರಾಜಕಾರಣ ಮಾಡೋದನ್ನು ಬಿಟ್ಬಿಡಿ. ಎಲ್ಲರೂ ಒಂದಾಗಿ ಕೆಲಸ ಮಾಡಿ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಚಾಟಿ ಬೀಸಿದ್ದಾರೆ.




ಉಪಮುಖ್ಯಮಂತ್ರಿಯಾದ ನಂತರ ಡಿ.ಕೆ.ಶಿವಕುಮಾರ್ ಮೊದಲ ಬಾರಿಗೆ ಉಡುಪಿ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಭೇಟಿ ಕೊಟ್ಟಿದ್ದಾರೆ. ಮೊದಲ ಭೇಟಿಯಲ್ಲೇ ಕಾಂಗ್ರೆಸ್ ನಾಯಕರಿಗೆ ಖಡಕ್ ವಾರ್ನಿಂಗ್ ಮಾಡಿದ್ದಾರೆ. ಉಡುಪಿಯಲ್ಲಿ 5ಕ್ಕೆ ಐದು ಸೋಲಿಗೆ ಕಾರಣ ಏನು? ಡಿ.ಕೆ.ಶಿವಕುಮಾರ್ ಬಣ ಅಥವಾ ಇನ್ಯಾವುದೋ ನಾಯಕರ ಬಣ ಮಾಡಬೇಡಿ. ಎಲ್ಲರದ್ದೂ ಒಂದೇ ಬಣ, ಅದು ಕಾಂಗ್ರೆಸ್ ಬಣ. ಜಿಲ್ಲಾ ಕಾಂಗ್ರೆಸ್ ಮುಂದಿನ ಮೂರು ತಿಂಗಳಲ್ಲಿ ಎಲ್ಲಾ ಸರಿ ಆಗಬೇಕು. ಪಕ್ಷ ಸಂಘಟನೆ ಮಾಡಬೇಕು. ಇಲ್ಲವಾದರೆ ಎಲ್ಲವನ್ನು ಬದಲಾವಣೆ ಮಾಡಬೇಕಾಗುತ್ತದೆ ಎಂದಿದ್ದಾರೆ.

ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ತತ್ವದಡಿ ಕೆಲಸ ಮಾಡಿ. ಕೆಲ ಸಚಿವರ ನೇತೃತ್ವದಲ್ಲಿ ಒಂದು ಕೋರ್ ಟೀಮ್ ರಚನೆ ಮಾಡುತ್ತೇನೆ. ಸರ್ಕಾರ ಮತ್ತು ಪಕ್ಷ ಜೊತೆಯಾಗಿ ಕೆಲಸ ಮಾಡುವ ಟೀಮ್ ಅದು. ಸರ್ಕಾರದ ಯೋಜನೆಗಳನ್ನು ಜನತೆಗೆ ■5ನೇ ಪುಟಕ್ಕೆ

ಡಿಕೆಶಿ ಸಿಎಂ ಆಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ

● ಇದು ತೀರ್ಮಾನ ಆಗಿರುವ ವಿಚಾರ ● ಮಾಜಿ ಸಿಎಂ ಎಂ.ವೀರಪ್ಪ ಮೊಯ್ಲಿ ಸ್ಫೋಟಕ ಹೇಳಿಕೆ

ಉಡುಪಿ, ಮಾ.2– ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಡಾ. ಎಂ. ವೀರಪ್ಪ ಮೊಯ್ಲಿ ಸ್ಫೋಟಕ ಹೇಳಿಕೆ ನೀಡಿದ್ದಾರೆ.



ಇಂದು ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ ನಡೆದ 'ಕಾಂಗ್ರೆಸ್ ಕುಟುಂಬುತ್ಸವ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಡಿ.ಕೆ.ಶಿವಕುಮಾರ್‌ಗೆ ಪ್ರಥಮ ಬಾರಿ ಎಂಎಲ್‌ಎ ಟಿಕೆಟ್ ಕೊಡಿಸಿದ್ದು ನಾನು. ಇವತ್ತು ಡಿ.ಕೆ.ಶಿವಕುಮಾರ್ ಯಶಸ್ವಿ ನಾಯಕರಾಗಿ ಕರ್ನಾಟಕದಲ್ಲಿ ಮೂಡಿ ಬಂದಿದ್ದಾರೆ. ಅಷ್ಟೇ ಅಲ್ಲ, ಅವರು ಸದ್ಯದಲ್ಲೇ ಮುಖ್ಯಮಂತ್ರಿಯಾಗಲಿದ್ದಾರೆ. ಇದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ ಎಂದು ಭವಿಷ್ಯ ನುಡಿದರು.

ಡಿಕೆಶಿ ಕಾರ್ಕಳ ಗೊಮ್ಮಟೇಶ್ವರನಂತೆ ಬೆಳೆಯಲಿ: ಕಾರ್ಕಳ ಗೊಮ್ಮಟೇಶ್ವರನ ಪುಣ್ಯಭೂಮಿಯಾಗಿದೆ. ಡಿ.ಕೆ.ಶಿವಕುಮಾರ್ ಗೊಮ್ಮಟೇಶ್ವರನ ಹಾಗೆ ಬೆಳೆಯಲಿ. ಅವರು ಕೆಪಿಸಿಸಿ ಅಧ್ಯಕ್ಷರಾಗಿ ಪಕ್ಷ ಸಂಕಷ್ಟದಲ್ಲಿದ್ದಾಗ ಸಂಚಲನ ಮೂಡಿಸಿದವರು. ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಹೋರಾಟ ಮಾಡಿದ ಧೀಮಂತ ನಾಯಕರಾಗಿದ್ದಾರೆ. ಪಕ್ಷಕ್ಕೆ ಒಳ್ಳೆಯ ನಾಯಕತ್ವ ಕೊಟ್ಟಿದ್ದಾರೆ, ಸಂಘಟನೆ ಮಾಡಿದ್ದಾರೆ. ಹೇಳಿಕೆಗಳು ಬರಬಹುದು, ಹೋಗಬಹುದು ಆದರೆ ನೀವು (ಡಿಕೆಶಿ)ಮುಖ್ಯಮಂತ್ರಿಯಾಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಡಿಸಿಎಂ ಡಿಕೆ ಶಿವಕುಮಾರ ಸಮ್ಮುಖದಲ್ಲಿ ಹಾಡಿ ಹೊಗಳಿದರು.

ಸಿಎಂ ಹುದ್ದೆ ಯಾರೋ ಕೊಡೋ ವರ ಅಲ್ಲ: ಯಾರೂ ಆತಂಕ ಪಡಬೇಕಾದ ಅವಶ್ಯಕತೆ ಇಲ್ಲ. ಟೀಕೆ ಮಾಡುವವರು ವೈಯಕ್ತಿಕ ತೃಪ್ತಿಗೆ ■5ನೇ ಪುಟಕ್ಕೆ

ರಕ್ತದಲ್ಲಿ ಬರೆದು ಕೊಡ್ತೀನಿ, ಡಿಸೆಂಬರ್ ಒಳಗೆ ಡಿಕೆಶಿ ಮುಖ್ಯಮಂತ್ರಿ ಆಗ್ತಾರೆ

ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್


ದಾವಣಗೆರೆ, ಮಾ.2– ರಕ್ತದಲ್ಲಿ ಬೇಕಾದರೆ ಬರೆದು ಕೊಡ್ತೀನಿ, ಡಿಸೆಂಬರ್‌ನೊಳಗೆ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗೇ ಆಗುತ್ತಾರೆ ಎಂದು ಚನ್ನಗಿರಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಶಿವಗಂಗಾ ಬಸವರಾಜ್ ಸ್ಫೋಟಕ ಹೇಳಿಕೆ ನೀಡಿದ್ದಾರೆ.



ದಾವಣಗೆರೆಯ ತಮ್ಮ ನಿವಾಸದಲ್ಲಿ ಮಾತನಾಡಿದ ಅವರು, ಪಕ್ಷಕ್ಕಾಗಿ ಡಿ.ಕೆ.ಶಿವಕುಮಾರ್ ಸಾಕಷ್ಟು ದುಡಿದಿದ್ದಾರೆ. 80 ಶಾಸಕರು ಗೆಲ್ಲಲು ಡಿ.ಕೆ.ಶಿವಕುಮಾರ್ ಅವರ ಪಾತ್ರ ಇದೆ. ಅಲ್ಲದೇ ಲೋಕಸಭೆ ಕ್ಷೇತ್ರದಲ್ಲಿ ಈ ಬಾರಿ 9 ಸ್ಥಾನ ಗೆಲ್ಲಲು ಅವರ ಪಾತ್ರ ಹೆಚ್ಚಿದೆ. ಆದ್ದರಿಂದ ಅವರು ಸಿಎಂ ಆಗೇ ಆಗುತ್ತಾರೆ. ಮುಂದೆ ಅವರು ಏನೇ ನಿರ್ಧಾರ ತೆಗೆದುಕೊಂಡರೂ ಅದಕ್ಕೆ ನಾವು ಬದ್ಧರಾಗಿರುತ್ತೇವೆ ಈ ಡಿಸೆಂಬರ್‌ನಿಂದ ಮುಂದಿನ 5 ವರ್ಷ ಅವರೇ ಸಿಎಂ ಆಗಿರುತ್ತಾರೆ. ಅಂದರೆ ಏಳೂವರೆ ವರ್ಷ ಅವರೇ ಸಿಎಂ ಆಗಿರುತ್ತಾರೆ ಎಂದರು.

ಸಚಿವ ಕೆ.ಎನ್. ರಾಜಣ್ಣ ವಿರುದ್ಧ ಕಿಡಿಕಾರಿದ ಅವರು, ರಾಜಣ್ಣನವರ ಹೇಳಿಕೆಯಿಂದ ಪಕ್ಷಕ್ಕೆ, ಸರ್ಕಾರಕ್ಕೆ ಭಾರಿ ಮುಜುಗರ ಆಗುತ್ತಿದೆ. ಹೈಕಮಾಂಡ್ ಇದನ್ನು ಗಮನಿಸಿ ಕಠಿಣ ಕ್ರಮ ಕೈಗೊಳ್ಳಬೇಕು. ಪಕ್ಷಕ್ಕಿಂತ ಯಾರೂ ದೊಡ್ಡವರಲ್ಲ. ರಾಜಣ್ಣ ಮೇಲೆ ಕ್ರಮ ಕೈಗೊಂಡರೆ ಎಲ್ಲಾ ಸರಿ ಹೋಗುತ್ತದೆ ಎಂದು ಹೇಳಿದರು.

3ನೇ ವರ್ಷದ ಪುಣ್ಯಸ್ಮರಣೆ




ನೀವು ಕಣ್ಮರೆಯಾಗಿ 3 ವರ್ಷ ಕಳೆದರೂ, ನಿಮ್ಮ ನೆನಪು ಶಾಶ್ವತ, ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ ಕುಟುಂಬಸ್ಥರು ಹಾಗೂ ಸಿಬ್ಬಂದಿಗಳು.
ಗಜಮುಖ್ ಸೆಕ್ಯೂರಿಟಿ - ಮೈಸೂರು

ಅರಮಣಮಾಡ ಸನ್ನಿ
(ಎ.ಕೆ. ಅಯ್ಯಪ್ಪ)
ನಿಧನ: 02.03.2022

ಮೈಸೂರಿನ ಬನ್ನಿಮಂಟಪದಲ್ಲಿ ನೂತನ ಬಸ್ ನಿಲ್ದಾಣ ನಿರ್ಮಾಣ ಪ್ರಕ್ರಿಯೆ ಆರಂಭ

● ಪ್ರತಿಷ್ಠಿತ ಕಂಪನಿಗಳಿಂದ ಟೆಂಡರ್ ಸಲ್ಲಿಕೆ ● ಟ್ರಾಫಿಕ್ ಸರ್ವೆ ಪ್ರಗತಿ ● 2028 ಕ್ಕೆ ಬಸ್ ನಿಲ್ದಾಣ ಲೋಕಾರ್ಪಣೆ



ಡಿಪಿಆರ್‌ನಲ್ಲಿ ಲಗತ್ತಿಸಿರುವ ಬನ್ನಿಮಂಟಪ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಪಾರಂಪರಿಕ ಶೈಲಿಯ ನೀಲನಕ್ಷೆ.

ಮೈಸೂರು, ಮಾ.2(ಬಿಎಲ್‌ಯು)– ನಗರದ ಹೃದಯ ಭಾಗದಲ್ಲಿ ವಾಹನ ದಟ್ಟಣೆ ಕಡಿಮೆ ಮಾಡುವ ನಿಟ್ಟಿನಲ್ಲಿ ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣವನ್ನು ಬನ್ನಿಮಂಟಪಕ್ಕೆ ಸ್ಥಳಾಂತರಿಸಲು ನಿರ್ಧರಿಸಿರುವ ಸರ್ಕಾರ ನೂತನ ಬಸ್ ನಿಲ್ದಾಣದ ನಿರ್ಮಾಣಕ್ಕೆ ಟೆಂಡರ್, ಟ್ರಾಫಿಕ್ ಸರ್ವೆ ಸೇರಿದಂತೆ ಹಲವು ಪ್ರಕ್ರಿಯೆಗಳನ್ನು ವೇಗಗತಿಯಲ್ಲಿ ಆರಂಭಿಸಿದೆ.

ನೂತನ ಬಸ್ ನಿಲ್ದಾಣಕ್ಕೆ ಡಿಪಿಆರ್ (ಸಮಗ್ರ ಯೋಜನಾ ವರದಿ) ಹಾಗೂ ವಿನ್ಯಾಸ ಸಿದ್ಧಪಡಿಸಲಾಗಿದ್ದು, 127 ಕೋಟಿ ರೂ.ಗಳಿಗೆ ಟೆಂಡರ್ ಕರೆಯಲಾಗಿತ್ತು. ಫೆಬ್ರವರಿ 28 ರಂದು ಟೆಂಡರ್ ಸಲ್ಲಿಕೆಗೆ ಕೊನೆಯ ದಿನವಾಗಿತ್ತು. ಹಲವು ಪ್ರತಿಷ್ಠಿತ ಕಂಪೆನಿಗಳು ಟೆಂಡರ್ ಸಲ್ಲಿಸಿವೆ ಎನ್ನಲಾಗಿದ್ದು, ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿರುವ ಟೆಂಡರ್ ಅನ್ನು ವಾರ ಅಥವಾ ಹದಿನೈದು ದಿನದಲ್ಲಿ ಕೆಎಸ್‌ಆರ್‌ಟಿಸಿಯ ಉನ್ನತ ಅಧಿಕಾರಿಗಳು ತೆರೆಯಲಿದ್ದಾರೆ. ಯಾವ ಕಂಪೆನಿ ಕಡಿಮೆ ಮೊಬಲಗು ದಾಖಲಿಸಿರುತ್ತದೆ ಹಾಗೂ ಪಾರಂಪರಿಕ ಶೈಲಿಯ ಬಸ್ ನಿಲ್ದಾಣ ನಿರ್ಮಾಣದಲ್ಲಿ ಪರಿಣತಿ ಹೊಂದಿದೆ ಎಂಬುದನ್ನು ಪರಿಗಣಿಸಿ ಅಂತಹ ಕಂಪೆನಿಗೆ ನಿಯಮಾನುಸಾರ ಟೆಂಡರ್ ನೀಡಲಾಗುತ್ತದೆ.

ಟೆಂಡರ್ ಪಡೆದ ಕಂಪೆನಿ 30 ತಿಂಗಳಲ್ಲಿ ಬಸ್ ನಿಲ್ದಾಣ ನಿರ್ಮಾಣ ಕಾರ್ಯ ಪೂರ್ಣಗೊಳಿಸಲು ಷರತ್ತು ವಿಧಿಸಲಾಗಿದ್ದು, 2028ಕ್ಕೆ ಹೊಸ ಬಸ್ ನಿಲ್ದಾಣ ಲೋಕಾರ್ಪಣೆ ಮಾಡಲು ಸರ್ಕಾರ ಯೋಜನೆ ರೂಪಿಸಿದೆ ಎನ್ನಲಾಗಿದೆ. ಬನ್ನಿಮಂಟಪದಲ್ಲಿ ಕೆಎಸ್‌ಆರ್‌ಟಿಸಿಗೆ ಸೇರಿದ 61 ಎಕರೆಯಲ್ಲಿ 14 ಎಕರೆಯನ್ನು ಮಾತ್ರ ನೂತನ ಬಸ್ ನಿಲ್ದಾಣಕ್ಕೆ ಬಳಸಿಕೊಳ್ಳಲಾಗುತ್ತದೆ.

ಬಸ್‌ಗಳ ರಿಪೇರಿ ಗ್ಯಾರೇಜ್, ಅಧಿಕಾರಿಗಳಿಗೆ ವಸತಿ ಗೃಹ ಸೇರಿದಂತೆ ಹಲವು ಆಧುನಿಕ ಸೌಕರ್ಯಗಳನ್ನು ನೂತನ ಬಸ್ ನಿಲ್ದಾಣದಲ್ಲಿ ಕಲ್ಪಿಸಲಾಗುತ್ತದೆ.

ಮೈಸೂರು ಪಾರಂಪರಿಕ ನಗರಗಳ ತವರೂರು. ಈ ಹಿನ್ನೆಲೆ ಬನ್ನಿಮಂಟಪದ ನೂತನ ಬಸ್ ನಿಲ್ದಾಣವನ್ನು ಪಾರಂಪರಿಕ ಶೈಲಿಯಲ್ಲೇ ನಿರ್ಮಾಣ ಮಾಡುವಂತೆ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೆ ಆದೇಶ ನೀಡಿದ್ದಾರೆ. ಐದು ಅಂತಸ್ತಿನ ಬಸ್ ನಿಲ್ದಾಣ ವಿಶಾಲವಾಗಿರುತ್ತದೆ. ನೆಲಅಂತಸ್ತಿನಲ್ಲಿ ವಾಹನಗಳ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. 11 ಸಾವಿರ ಚದರ ಮೀಟರ್ ವ್ಯಾಪ್ತಿಯ ವಾಹನ ನಿಲುಗಡೆ ಸ್ಥಳದಲ್ಲಿ ಎರಡು ಸಾವಿರ ದ್ವಿಚಕ್ರ ವಾಹನ ಹಾಗೂ 500 ಕಾರುಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗುತ್ತಿದೆ. ಅಲ್ಲದೆ ಹೋಟೆಲ್, ಅಂಗಡಿಗಳು, ವಿಶ್ರಾಂತಿ ಕೊಠಡಿ, ಶೌಚಾಲಯ ನಿರ್ಮಾಣ ■5ನೇ ಪುಟಕ್ಕೆ

ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯಲ್ಲಿ ಟೆಂಡರ್ ಸಲ್ಲಿಕೆ

ನೂತನ ಬಸ್ ನಿಲ್ದಾಣ ನಿರ್ಮಾಣ ಸಂಬಂಧ ಟೆಂಡರ್ ಸಲ್ಲಿಸಲು ಫೆಬ್ರವರಿ 28 ಕೊನೆಯ ದಿನವಾಗಿತ್ತು. ಜಾಗತಿಕ ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರ ಕಂಪನಿಗಳು ಕೆಎಸ್‌ಆರ್‌ಟಿಸಿಯ ಕೇಂದ್ರ ಕಚೇರಿಯಲ್ಲಿ ಟೆಂಡರ್ ಸಲ್ಲಿಸಿವೆ. ಈ ತಿಂಗಳಾಂತ್ಯದಲ್ಲಿ ಯಾವ ಕಂಪೆನಿ ಗುತ್ತಿಗೆ ಪಡೆಯುತ್ತದೆ ಎಂಬುದು ನಿರ್ಧಾರವಾಗುತ್ತದೆ. ನೂತನ ಬಸ್ ನಿಲ್ದಾಣ ಪಾರಂಪರಿಕ ಶೈಲಿಯಲ್ಲಿದ್ದು, ಯಾವ ರೀತಿ ಇದು ನಿರ್ಮಾಣವಾಗುತ್ತದೆ ಎಂಬುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಿವರಿಸಿ ಹೇಳಲಾಗಿದೆ. ಒಟ್ಟು 127 ಕೋಟಿ ರೂಗಳ ಈ ಯೋಜನೆಗೆ ರಾಜ್ಯ ಸರ್ಕಾರ 67 ಕೋಟಿ ರೂ. ನೀಡಲಿದ್ದು, ಕೆಎಸ್‌ಆರ್‌ಟಿಸಿ ಶೇ.10 ರಷ್ಟು ಅಂದರೆ ಸುಮಾರು 14 ಕೋಟಿ ರೂ. ನೀಡಲಿದೆ. ಉಳಿದ ಹಣವನ್ನು ಡೈರೆಕ್ಟರೇಟ್ ಆಫ್ ಅರ್ಬನ್ ಲ್ಯಾಂಡ್ ಟ್ರಾನ್ಸ್‌ಪೋರ್ಟ್ (ಡಿಯುಎಲ್‌ಟಿ) ನೀಡಲಿದೆ.

-ಶ್ರೀನಿವಾಸ್, ವಿಭಾಗೀಯ ನಿಯಂತ್ರಣಾಧಿಕಾರಿ, ಮೈಸೂರು.

ಧನ ಗಣಪತಿ ಫೈನಾನ್ಸ್
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ, ಉಳಿದ ಹಣ ತಕ್ಷಣ ಕೊಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ 9200
8884864444

ಸ್ಕಂದ ಗೋಲ್ಡ್ ಕಂಪನಿ
(ಗಿರವಿ ಚಿನ್ನಾಭರಣ ಖರೀದಿ)
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ, ಇಂದಿನ ಆನ್‌ಲೈನ್ ಬೆಲೆಗೆ ತೆಗೆದುಕೊಂಡು ಉಳಿದ ಹಣವನ್ನು ತಕ್ಷಣ ಕೊಡುತ್ತೇವೆ.
(T&C Applicable)
ಒಂದು ಗ್ರಾಂ ಚಿನ್ನಕ್ಕೆ 8650
8050804575

ಮೈಸೂರು ಮಿತ್ರ

ಸೋಮವಾರ 3 ಮಾರ್ಚ್ 2025

ಹಾಸನ ಮಿತ್ರ

ವಿಜಯ ಶಾಲೆಯಲ್ಲಿ ಗ್ರಹಗಳ ಗ್ರಾಂಡ್ ಪರೇಡ್ ವೀಕ್ಷಣೆ



ವಿಜಯ ಶಾಲೆಯಲ್ಲಿ ವಿದ್ಯಾರ್ಥಿಗಳು ಆಕಾಶ ವೀಕ್ಷಣೆ ಮಾಡಿದರು.

ಹಾಸನ: ನಗರದ ವಿಜಯ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ ಪ್ರಯುಕ್ತ ವಿದ್ಯಾರ್ಥಿಗಳು ಆಕಾಶ ವೀಕ್ಷಿಸಿದರು.

ರೋಟರಿ ಮಿಡ್‌ಟೌನ್ ಹಾಸನ, ವಿಜಯ ಇಂಟರಾಕ್ಟ್ ಕ್ಲಬ್ ಹಾಗೂ ವಿಜಯ ಸ್ಟೆಮ್ ಕ್ಲಬ್ ಸದಸ್ಯರ ಸಹಯೋಗದೊಂದಿಗೆ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಲಾಯಿತು.

ಆಕಾಶಕಾಯಗಳ ವೀಕ್ಷಣೆ ಮೂಲಕ ನಮ್ಮ ಬ್ರಹ್ಮಾಂಡದ ಅದ್ಭುತಗಳು ಪ್ರತಿಯೊಬ್ಬ ವೀಕ್ಷಕರಲ್ಲಿ ಕುತೂಹಲ ಮೂಡಿಸಿತು. ಭಾರತ ಜ್ಞಾನ ವಿಜ್ಞಾನ ಸಮಿತಿ ಉಪಾಧ್ಯಕ್ಷ ಅಹಮದ್ ಹಗರೆ, ವಿಜ್ಞಾನ ರಹಸ್ಯಗಳ ಬಗ್ಗೆ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ತಿಳಿಸಿಕೊಟ್ಟರು.

ಗ್ರಹಗಳ ಚಲನೆ, ರಾಶಿಗಳ ಗುರುತಿಸುವಿಕೆ ಮತ್ತು ಈ ಬಾರಿಯ ಗ್ರಹಗಳ ವಿಶೇಷ ಪರೇಡ್ ಬಗ್ಗೆ ನೇರವಾಗಿ ಆಕಾಶಕಾಯಗಳನ್ನು ತೋರಿಸಿ, ವಿವರಿಸಿದರು. ಅಖಿಲೇಶ್ ಪಾಟೀಲ್ ಟೆಲಿಸ್ಕೋಪ್ ಮೂಲಕ ಗ್ರಹಗಳ ಪರೇಡ್ ನೋಡಲು ನೆರವಾದರು. ಕಾರ್ಯಕ್ರಮದಲ್ಲಿ ಶಾಲಾ ಶೈಕ್ಷಣಿಕ ಮುಖ್ಯಸ್ಥೆ ಶ್ರೀಲಕ್ಷ್ಮಿ, ಪ್ರಾಂಶುಪಾಲರಾದ ನಂದೀಶ, ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರು ಹಾಜರಿದ್ದರು.

ನಾಳೆ ಬೆಂಗಳೂರಲ್ಲಿ ವೀರಶೈವ ಲಿಂಗಾಯತ ಮಹಾಸಂಗಮ ಸಭೆ



ಹಾಸನ: ಬೆಂಗಳೂರು ಅರಮನೆ ಮೈದಾನದಲ್ಲಿರುವ ಗಾಯಿತ್ರಿ ವಿಹಾರದಲ್ಲಿ ಮಾ.4ರಂದು ಬೆಳಗ್ಗೆ 10.30ಕ್ಕೆ ರಾಜ್ಯ ಮಟ್ಟದ ವೀರಶೈವ ಲಿಂಗಾಯತ ಸಮಾಜದ ಮಹಾಸಂಗಮ ಸಭೆ ನಡೆಯಲಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್ ತಿಳಿಸಿದರು.

ಸಮಾಜದ ಮುಖಂಡರೂ ಆದ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ನೇತೃತ್ವದಲ್ಲಿ ಸಭೆ ನಡೆಯಲಿದೆ. ಸಭೆಯಲ್ಲಿ ವೀರಶೈವ ಲಿಂಗಾಯತ ಸಮಾಜದ ಮುಖಂಡರು, ವಿವಿಧ ಮಠದ ಮಠಾಧೀಶರು ಒಳಗೊಂಡಂತೆ ವೀರಶೈವ ಲಿಂಗಾಯತ ಸಂಘಟನೆ ವಿಚಾರಗಳನ್ನು ಒಳಗೊಂಡ ವಿಚಾರಗಳನ್ನು ಚರ್ಚಿಸಲಾಗುವುದು ಎಂದರು.

ಹಾಸನ ಜಿಲ್ಲೆಯ ವೀರಶೈವ ಲಿಂಗಾಯತ ಸಮುದಾಯದ ಮುಖಂಡರು, ವಿವಿಧ ಸಂಘ ಸಂಸ್ಥೆಯವರು, ಸಮಾಜದ ಚಿಂತಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಶಿವಕುಮಾರ್ ಮನವಿ ಮಾಡಿದರು. ಮಾಹಿತಿಗೆ ಮೊ. 94482 20850 ಸಂಪರ್ಕಿಸಬಹುದು ಎಂದರು.

ನಾಳೆಯಿಂದ ಮೈಸೂರಲ್ಲಿ ನಮ್ಮ ಕರ್ನಾಟಕ ಸೇನೆಯಿಂದ ಪ್ರತಿಭಟನೆ

ಮೈಸೂರು, ಮಾ.2(ಜಿಎ)–ಚಾಲಕರ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಮಾ.4ರಿಂದ 6ರವರೆಗೆ ಮೈಸೂರು ಡಿಸಿ ಕಚೇರಿ ಮುಂಭಾಗ ಉಪವಾಸ ಸತ್ಯಾಗ್ರಹ ನಡೆಸಲು ನಮ್ಮ ಕರ್ನಾಟಕ ಸೇನೆ ಸಂಘಟನೆ ನಿರ್ಧರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಜಿ. ಮುರುಗನ್ ಈ ವಿಷಯ ತಿಳಿಸಿ, ಮೈಸೂರು ನಗರದಲ್ಲಿ ನೂರಾರು ವೈಟ್ ಬೋರ್ಡ್ ವಾಹನಗಳನ್ನು ಬಾಡಿಗೆ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ. ಇದರಿಂದಾಗಿ ಆಟೋ, ಕ್ಯಾಬ್ ಚಾಲಕರಿಗೆ ದೊಡ್ಡ ಸಂಕಷ್ಟ ಎದುರಾಗಿದ್ದು, ಅಂತಹ ವಾಹನಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಇದೇ ಮಾ.4ರಂದು ಮೈಸೂರು–ಬೆಂಗಳೂರು ರಸ್ತೆಯ ಮಣಿಪಾಲ್ ಆಸ್ಪತ್ರೆ ಬಳಿಯಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಬೃಹತ್ ವಾಹನ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಅಂದಿನಿಂದ ಮಾ.6ರವರೆಗೆ ಡಿಸಿ ಕಚೇರಿ ಆವರಣದಲ್ಲಿ ಶಾಮಿಯಾನ ಹಾಕಿಕೊಂಡು ಕಪ್ಪು ಬಾವುಟ ಪ್ರದರ್ಶಿಸಿ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ. ಈ ವೇಳೆ ವೈಟ್ ಬೋರ್ಡ್ ಮತ್ತು ಎಲೆಕ್ಟ್ರಿಕ್ ಬೈಕ್, ಕಾರುಗಳನ್ನು ಟ್ಯಾಕ್ಸಿಯಾಗಿ ಬಳಸುವುದನ್ನು ನಿಲ್ಲಿಸಬೇಕು, ಆಟೋರಿಕ್ಷಾ ಚಾಲನೆ ಮಾಡಲು ಅಥವಾ ಕೊಂಡುಕೊಳ್ಳಲು ಚಾಲನಾ ಪರವಾನಗಿ ಜೊತೆಗೆ ಬ್ಯಾಡ್ಜ್ ಕಡ್ಡಾಯಗೊಳಿಸಬೇಕು, ಮೈಸೂರು ನಗರದ ಆಟೋರಿಕ್ಷಾಗಳು ಮತ್ತು ಕ್ಯಾಬ್‌ಗಳ ಆನ್‌ಲೈನ್ ದರವನ್ನು ಸರ್ಕಾರದ ಮಾರ್ಗಸೂಚಿ ಅನ್ವಯ ಪರಿಷ್ಕರಿಸಬೇಕು ಎಂಬಿವೇ ಮೊದಲಾದ ಬೇಡಿಕೆ ಈಡೇರಿಕೆಗೆ ಆಗ್ರಹಿಸಲಾಗುವುದು. ಈಡೇರದಿದ್ದಲ್ಲಿ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.


ಸುದ್ದಿಗೋಷ್ಠಿಯಲ್ಲಿ ಸಾಯಿಬಾಬ ನಾಗರಾಜ್, ಮಹೇಂದ್ರ, ಪಿ.ವಿನಾಯಕ, ಪ್ರಧಾನ ಕಾರ್ಯದರ್ಶಿ ನಾಗರಾಜ್, ಧನರಾಜ್, ಶಿಲ್ಪಾ ಉಪಸ್ಥಿತರಿದ್ದರು.

ಸಚಿವ ಡಾ.ಹೆಚ್.ಸಿ.ಮಹದೇವಪ್ಪಗೆ ಅಭಿನಂದನೆ...



ಮೈಸೂರಿನ ಹಾಪ್‌ಕಾಮ್ಸ್‌ಗೆ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಹೊಸಹುಂಡಿ ರಘು ಅವರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಭೇಟಿಯಾಗಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಕೋಟೆ ಶಿವಣ್ಣ, ಬಿ.ಪಿ.ಬೋರೇಗೌಡ, ಟಿ.ಅಣ್ಣೇಗೌಡ, ನಗರ್ಲೆ ಸರ್ವೇಶ್, ಚಂದ್ರೇಗೌಡ, ಶ್ರೀನಿವಾಸ್, ವೈ.ಜಿ.ಮಹೇಂದ್ರ, ಮಹಾದೇವ ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು.

ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ 'ಬೇಲಿ ಹೂ' ಚಿತ್ರ ಆಯ್ಕೆ



ಮೈಸೂರು,ಮಾ.2– ಬೆಂಗಳೂರು 16ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಕನ್ನಡ ವಿಭಾಗದ (ಇಂಡಿಯನ್ ಕ್ಯಾಟಗರಿ) 14 ಸಿನಿಮಾಗಳಲ್ಲಿ 'ಬೇಲಿ ಹೂ' ಚಿತ್ರವು ಆಯ್ಕೆಯಾಗಿದೆ. ಈ ಮೂಲಕ ಅಂತರರಾಷ್ಟ್ರೀಯ ಭಾರತೀಯ ಚಲನಚಿತ್ರಗಳ ವಿಭಾಗದಲ್ಲಿ ಆಯ್ಕೆಗೊಂಡಿರುವ ಏಕೈಕ ಕನ್ನಡ ಚಿತ್ರ 'ಬೇಲಿ ಹೂ'. ಈ ಚಿತ್ರವು ಮಾರ್ಚ್ 8ರವರೆಗೆ ಬೆಂಗಳೂರಿನ ಓರಾಯನ್ ಮಾಲ್‌ನಲ್ಲಿ ಪ್ರದರ್ಶನಗೊಳ್ಳಲಿದೆ.

ಇಂದಿನಿಂದ ಕೌಶಲ ಅಭಿವೃದ್ಧಿ ಕಾರ್ಯಕ್ರಮ

ಮೈಸೂರು,ಮಾ.2–ಮೈಸೂರಿನ ಶಾರದಾ ವಿಲಾಸ ಫಾರ್ಮಸಿ ಕಾಲೇಜು, ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ, ನವದೆಹಲಿ, ಕರ್ನಾಟಕ ರಾಜ್ಯ ಫಾರ್ಮಸಿ ಕೌನ್ಸಿಲ್ ಸಹಯೋಗದೊಂದಿಗೆ ಮಾ.3ರಿಂದ 7ರವರೆಗೆ ರಿಟೇಲ್ ಫಾರ್ಮಸಿ ಮ್ಯಾನೇಜ್‌ಮೆಂಟ್ ಮತ್ತು ಸೇಲ್ಸ್ ಕುರಿತು ಕೌಶಲ ಅಭಿವೃದ್ಧಿ ತರಬೇತಿ ಆಯೋಜಿಸಲಾಗಿದೆ.

ಮಾ.3ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಶಾರದಾ ವಿಲಾಸ ಫಾರ್ಮಸಿ ಕಾಲೇಜಿನ ಪ್ರೊ.ಚಿನ್ನಸ್ವಾಮಿ ಶೆಟ್ಟಿ ಕಾನ್ಫರೆನ್ಸ್ ಹಾಲ್‌ನಲ್ಲಿ ನಡೆಯಲಿರುವ ಕಾರ್ಯಕ್ರಮವನ್ನು ರಾಜ್ಯ ಫಾರ್ಮಸಿ ಕೌನ್ಸಿಲ್ ಉಪಾಧ್ಯಕ್ಷ ಡಿ.ಎ.ಗುಂಡೂರಾವ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಆರ್.ದಿನೇಶ್ ಭಾಗವಹಿಸಲಿದ್ದಾರೆ. ರಾಜ್ಯ ಫಾರ್ಮಸಿ ಕೌನ್ಸಿಲ್ ಇಸಿ ಸದಸ್ಯ ವೀರ್ ನಾರಾಯಣಗೌಡ ಭಾಗವಹಿಸಲಿದ್ದಾರೆ.

ಶಾರದಾ ವಿಲಾಸ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಹನುಮಂತಾಚಾರ್ ಜೋಶಿ ಅಧ್ಯಕ್ಷತೆ ವಹಿಸಲಿದ್ದಾರೆ.

ಜಿಎಸ್‌ಟಿ ಪದ್ಧತಿಯಿಂದ ದೇಶದ ಆರ್ಥಿಕತೆಯಲ್ಲಿ ಸ್ಥಿರತೆ

ಔಷಧಿ ವ್ಯಾಪಾರಿಗಳಿಗೆ ಜಿಎಸ್‌ಟಿ ತೆರಿಗೆ ವ್ಯವಸ್ಥೆ ಕುರಿತ ಕಾರ್ಯಾಗಾರದಲ್ಲಿ ಜಿಎಸ್‌ಟಿ ವಿಭಾಗದ ಉಪ ಆಯುಕ್ತ ಗಿರಿಧರ್ ಅಭಿಮತ



ಮೈಸೂರಿನ ಬನ್ನಿಮಂಟಪದ ಜೆಎಸ್‌ಎಸ್ ಫಾರ್ಮಸಿ ಕಾಲೇಜು ಸಭಾಂಗಣದಲ್ಲಿ ಔಷಧಿ ವ್ಯಾಪಾರಿಗಳಿಗಾಗಿ ಆಯೋಜಿಸಿದ್ದ ಜಿಎಸ್‌ಟಿ ತೆರಿಗೆ ಪದ್ಧತಿ ಕುರಿತ ಕಾರ್ಯಾಗಾರವನ್ನು ಜಿಎಸ್‌ಟಿ ವಿಭಾಗದ ಉಪ ಆಯುಕ್ತ ಗಿರಿಧರ್ ಉದ್ಘಾಟಿಸಿದರು.

ಮೈಸೂರು, ಮಾ.2(ಎಂಟಿವೈ)– ದೇಶದ ಆರ್ಥಿಕತೆಯು ಜಿಎಸ್‌ಟಿ ಪದ್ಧತಿಯಿಂದ ಸುಸ್ಥಿರತೆ ಮತ್ತು ಸದೃಢತೆಯನ್ನು ಪಡೆದುಕೊಂಡಿದ್ದು, ವ್ಯಾಪಾರಿಗಳು ಗ್ರಾಹಕರಿಂದ ಸಂಗ್ರಹಿಸಿದ ತೆರಿಗೆಯನ್ನು ಕ್ರಮಬದ್ಧವಾಗಿ ಜಿಎಸ್‌ಟಿ ಪೋರ್ಟಲ್‌ಗೆ ಅಪ್ಲೋಡ್ ಮಾಡುವಂತೆ ಜಿಎಸ್‌ಟಿ ವಿಭಾಗದ ಉಪ ಆಯುಕ್ತ ಗಿರಿಧರ್ ಸಲಹೆ ನೀಡಿದ್ದಾರೆ.

ಮೈಸೂರಿನ ಬನ್ನಿಮಂಟಪದ ಜೆಎಸ್‌ಎಸ್ ಫಾರ್ಮಸಿ ಕಾಲೇಜು ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ರಿಜಿಸ್ಟರ್ಡ್ ಫಾರ್ಮಸಿಸ್ಟ್ ಅಸೋಸಿಯೇಷನ್, ಇಂಡಿಯನ್ ಫಾರ್ಮಸ್ಯುಟಿಕಲ್ ಅಸೋಸಿಯೇಷನ್, ಮೈಸೂರು ನಗರ ಮತ್ತು ಜಿಲ್ಲಾ ಚಿಲ್ಲರೆ ಔಷಧಿ ವ್ಯಾಪಾರಿಗಳ ಸಂಘ ಹಾಗೂ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ಔಷಧಿ ವ್ಯಾಪಾರಿಗಳಿಗೆ ಜಿಎಸ್‌ಟಿ ತೆರಿಗೆ ವ್ಯವಸ್ಥೆ ಕುರಿತು ಆಯೋಜಿಸಿದ್ದ ಅರಿವಿನ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಿಎಸ್‌ಟಿ ತೆರಿಗೆ ನೀತಿಯು ಸರಳವಾಗಿದೆ. ಅನಗತ್ಯವಾಗಿ ಗೊಂದಲಕ್ಕೊಳಗಾಗದೆ ಗ್ರಾಹಕರಿಂದ ಸಂಗ್ರಹಿಸಿದ ತೆರಿಗೆಯ ಮಾಹಿತಿಯನ್ನು ಕ್ರಮಬದ್ಧವಾದ ರೀತಿಯಲ್ಲಿ ಜಿಎಸ್‌ಟಿ ಪೋರ್ಟಲ್‌ಗೆ ಅಪ್ಲೋಡ್ ಮಾಡಬೇಕು. ದೇಶದ ಆರ್ಥಿಕತೆಯು ಜಿಎಸ್‌ಟಿ ತೆರಿಗೆ ಪದ್ಧತಿಯ ಅನುಷ್ಠಾನದಿಂದ ಸುಸ್ಥಿರತೆ ಮತ್ತು ಸದೃಢತೆಯನ್ನು ಪಡೆದುಕೊಂಡಿದೆ. ಯಾವುದೇ ಕ್ಷೇತ್ರದ ವ್ಯಾಪಾರಸ್ಥರು ವ್ಯಾಪಾರವನ್ನು ನಡೆಸುವುದರ ಜೊತೆಗೆ ಜಿಎಸ್‌ಟಿ ನೀತಿ ನಿಬಂಧನೆಗಳ ಬಗ್ಗೆ ಸಾಮಾನ್ಯ ತಿಳುವಳಿಕೆಯನ್ನು ಪಡೆಯುವುದು ಅತ್ಯವಶ್ಯಕ ಎಂದರು.

ಇಂಡಿಯನ್ ಫಾರ್ಮಸ್ಯುಟಿಕಲ್ ಅಸೋಸಿಯೇಷನ್ ಅಧ್ಯಕ್ಷೆ ಡಾ.ಎಸ್.ಎನ್. ಮಂಜುಳಾ ಮಾತನಾಡಿ, ಮೈಸೂರು ವಿಭಾಗದ ಇಂಡಿಯನ್ ಫಾರ್ಮಾಸ್ಯುಟಿಕಲ್ ಸಂಘವು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕ್ಯಾನ್ಸರ್ ಕಾಯಿಲೆಯ ಬಗ್ಗೆ ಜಾಗೃತಿ ಹಾಗೂ ಅರಿವನ್ನು ಮೂಡಿಸುವ ಕೆಲಸವನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಇತ್ತೀಚಿನ ದಿನಗಳಲ್ಲಿ ವಿಶೇಷವಾಗಿ ಮಹಿಳೆಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಸರ್ವೈಕಲ್ ಕ್ಯಾನ್ಸರ್ ಮತ್ತು ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿಯನ್ನು ಮೂಡಿಸುತ್ತಿದೆ ಎಂದು ತಿಳಿಸಿದರು.

ಮೈಸೂರು ನಗರ ಮತ್ತು ಜಿಲ್ಲಾ ಚಿಲ್ಲರೆ ಔಷಧಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಎಂ.ರಾಜು ಮಾತನಾಡಿ, ಔಷಧಿ ವ್ಯಾಪಾರಿಗಳು ಹಲವಾರು ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಸಂಘವು ಔಷಧಿ ವ್ಯಾಪಾರಿಗಳಿಗೆ ನೈತಿಕ ಸ್ಥೈರ್ಯ ಹಾಗೂ ಆತ್ಮವಿಶ್ವಾಸವನ್ನು ನೀಡುವ ಮೂಲಕ ಔಷಧಿ ವ್ಯಾಪಾರಿಗಳಿಗೆ ಬೆಂಬಲವಾಗಿ ನಿಂತಿದೆ. ಇತ್ತೀಚಿನ ವರ್ಷಗಳಲ್ಲಿ ಆನ್ಲೈನ್ ಮೆಡಿಸಿನ್ ಸೇಲ್ಸ್ ಮತ್ತು ಚೈನ್ ಮೆಡಿಕಲ್ ಸ್ಟೋರ್ಸ್‌ಗಳ ಹಾವಳಿ ಹೆಚ್ಚಾಗಿದೆ. ಅನಾರೋಗ್ಯಕರ ಪೈಪೋಟಿಯಿಂದ ಚಿಲ್ಲರೆ ಔಷಧಿ ವ್ಯಾಪಾರಿಗಳು ಸಂಕಷ್ಟಕ್ಕೀಡಾಗಿದ್ದು, ದಿನೇ ದಿನೇ ವ್ಯಾಪಾರವು ಕ್ಷೀಣಿಸುತ್ತಿರುವುದರ ಪರಿಣಾಮ ಔಷಧಿ ವ್ಯಾಪಾರಿಗಳು ಆತಂಕಕ್ಕೀಡಾಗಿದ್ದಾರೆ. ಇಂತಹ ಸಂಕಷ್ಟದ ಸಮಯದಲ್ಲಿ ಸರ್ಕಾರ ಔಷಧಿ ವ್ಯಾಪಾರಿಗಳ ಬಲವರ್ಧನೆ ಹಾಗೂ ಹಿತರಕ್ಷಣೆಗೆ ಧಾವಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಪ್ರಮೋದ್ ಕುಮಾರ್, ಕರ್ನಾಟಕ ರಾಜ್ಯ ರಿಜಿಸ್ಟರ್ಡ್ ಫಾರ್ಮಸಿಸ್ಟ್ ಅಸೋಸಿಯೇಷನ್ ಅಧ್ಯಕ್ಷ ಡಾ.ಕೌಶಿಕ್ ದೇವ್ರಾಜ್ ಮಾತನಾಡಿದರು.

ಎಂಟಿಆರ್ ಅಂಡ್ ಕಂಪನಿಯ ಚಾರ್ಟರ್ಡ್ ಅಕೌಂಟೆಂಟ್ಸ್‌ಗಳಾದ ತೇಜಸ್ವಿನಿ, ಮಂಜು, ಮಹೇಶ್ ಔಷಧಿ ವ್ಯಾಪಾರಿಗಳಿಗೆ ಜಿಎಸ್‌ಟಿ ತೆರಿಗೆ ವ್ಯವಸ್ಥೆ ಕುರಿತು ಮಾಹಿತಿ ಹಾಗೂ ಸಾಮಾನ್ಯ ಜ್ಞಾನವನ್ನು ನೀಡಿದರು.

ಜಿಎಸ್‌ಟಿ ತೆರಿಗೆ ನೀತಿಗೆ ಪೂರಕವಾಗಿ ವ್ಯಾಪಾರಿಗಳು ಅನುಸರಿಸಬೇಕಾದ ಕ್ರಮಗಳು ಹಾಗೂ ಮಾರ್ಗಸೂಚಿಗಳ ಬಗ್ಗೆ ವಿವರಿಸಿದರು. ಕಾರ್ಯಕ್ರಮದಲ್ಲಿ ಮೈಸೂರು ನಗರ ಮತ್ತು ಜಿಲ್ಲಾ ಚಿಲ್ಲರೆ ಔಷಧಿ ವ್ಯಾಪಾರಿಗಳ ಸಂಘದ ಕಾರ್ಯದರ್ಶಿ ಅರುಣ್ ಸಿ.ಕೆ. ವಂದನಾರ್ಪಣೆ ಮಾಡಿದರೆ, ಶಿಲ್ಪಾ ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು.

ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಯ ನೇಮಕಾತಿಗಳ ವಯೋಮಿತಿ ಹೆಚ್ಚಳಕ್ಕೆ ಆಗ್ರಹಿಸಿ ಕರವೇ ಪ್ರತಿಭಟನೆ



ಪೊಲೀಸ್ ಕಾನ್‌ಸ್ಟೇಬಲ್‌ಗಳ ಹುದ್ದೆಯ ನೇಮಕಾತಿ ವಯೋಮಿತಿಯನ್ನು ಹೆಚ್ಚಳ ಮಾಡುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಮೈಸೂರು, ಮಾ.2(ಬಿಎಲ್‌ಯು)– ಪೊಲೀಸ್ ಕಾನ್‌ಸ್ಟೇಬಲ್‌ಗಳ ಹುದ್ದೆಯ ವಯೋಮಿತಿಯನ್ನು ಹೆಚ್ಚಳ ಮಾಡುವಂತೆ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ದೇಶದ ಹಲವು ರಾಜ್ಯಗಳಲ್ಲಿ ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಯ ವಯೋಮಿತಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಮತ್ತು ಸಾಮಾನ್ಯ ವರ್ಗಕ್ಕೆ ಒಂದೊಂದು ರೀತಿ ಇದೆ. ಆದರೆ ಕರ್ನಾಟಕದಲ್ಲಿ 27 ವರ್ಷ ಮಾತ್ರ ಇದೆ. ಆದ್ದರಿಂದ ಪೊಲೀಸ್ ಕಾನ್‌ಸ್ಟೇಬಲ್‌ಗಳ ನೇಮಕಾತಿ ವಯೋಮಿತಿ ಹೆಚ್ಚಿಸಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ನಜರ್‌ಬಾದ್ ಪೊಲೀಸ್ ಸ್ಟೇಷನ್ ವೃತ್ತದಿಂದ ನೂತನ ಡಿಸಿ ಕಚೇರಿವರೆಗೆ ಮೆರವಣಿಗೆಯಲ್ಲಿ ತೆರಳಿ ಡಿಸಿಗೆ ಮನವಿ ಪತ್ರ ಸಲ್ಲಿಸಿದರು. ವೇದಿಕೆ ಜಿಲ್ಲಾಧ್ಯಕ್ಷ ಪ್ರವೀಣ್ ಕುಮಾರ್, ನಗರಾಧ್ಯಕ್ಷ ಲೋಕೇಶ್ ಕುಮಾರ್, ಕಾಂತರಾಜು, ಸುನಂದ್ ಪ್ರಸಾದ್, ಅಶ್ವಿನ್‌ಗೌಡ, ಚಂದ್ರಶೇಖರ್, ರಫೀಕ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಉತ್ತಮ ಹವ್ಯಾಸಗಳು ಓದಿನಷ್ಟೇ ಮುಖ್ಯ

ಮೈಸೂರು ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕ ಜಿ.ಹರೀಶ್



ವಿದ್ಯಾರ್ಥಿಗಳಿಗೆ ಫಿಲಾಟೆಲಿ ಖಾತೆಯ ಕಾರ್ಡ್, ಅಂಚೆ ಚೀಟಿ ವಿತರಿಸಲಾಯಿತು.

ಮೈಸೂರು, ಮಾ.2– ವಿದ್ಯಾರ್ಥಿಗಳು ಉತ್ತಮ ಹವ್ಯಾಸಗಳನ್ನು ಮೈಗೂಡಿಸಿಕೊಳ್ಳುವುದು ಓದಿನಷ್ಟೇ ಮುಖ್ಯ ಎಂದು ಮೈಸೂರು ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕ ಜಿ.ಹರೀಶ್ ತಿಳಿಸಿದರು.

ಬೋಗಾದಿಯ ದೀಪಾ ಶಾಲೆಯಲ್ಲಿ ಫಿಲಾಟೆಲಿ ಕ್ಲಬ್ ಅನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಫಿಲಾಟೆಲಿ ಹವ್ಯಾಸ ಒಂದು ಉತ್ತಮ ಹವ್ಯಾಸವಾಗಿದ್ದು, ಮಕ್ಕಳಲ್ಲಿ ಜ್ಞಾನ, ಕೌಶಲಗಳನ್ನು ವೃದ್ಧಿಸುತ್ತದೆ ಎಂದರು. ಫಿಲಾಟೆಲಿ ಕ್ಲಬ್‌ನ ಸದಸ್ಯ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ, ಫಿಲಾಟೆಲಿ ಖಾತೆಯ ಕಾರ್ಡ್ ಹಾಗೂ ಅಂಚೆ ಚೀಟಿಗಳನ್ನು ವಿತರಿಸಿದರು. ಶಾಲೆಯ ಮುಖ್ಯೋಪಾಧ್ಯಾಯ ಬಾಬು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಅಂಚೆ ವಿಭಾಗದ ಮಾರುಕಟ್ಟೆ ವ್ಯವಸ್ಥಾಪಕ ಡಾ.ಸುರೇಶ್‌ಕುಮಾರ್, ಫಿಲಾಟೆಲಿ, ಅಂಚೆ ವ್ಯವಹಾರಗಳು ಪ್ರಮೋಟರ್ ಚಂದ್ರಶೇಖರ್, ಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಉಚಿತವಾಗಿ ಕೊಟ್ಟ ವಸ್ತುವಿನ ಬೆಲೆ ತಿಳಿಯುವುದಿಲ್ಲ

ಆಕಾಶವಾಣಿ ಹಿರಿಯ ಉದ್ಘೋಷಕ ಪ್ರಭುಸ್ವಾಮಿ ಮಳಿಮಠ ಅಭಿಪ್ರಾಯ



ಮೈಸೂರಿನ ಕುವೆಂಪುನಗರದ ಕಲಾ ಸುರುಚಿಯಲ್ಲಿ ಭಾನುವಾರ ದಿವಂಗತ ಎಂ.ಎಸ್.ಕೆ.ಪ್ರಭು ರಚಿತ ಬಕಾಸುರ್ ನಾಟಕ ಕೃತಿಯನ್ನು ಮೈಸೂರು ಆಕಾಶವಾಣಿ ಹಿರಿಯ ಉದ್ಘೋಷಕ ಪ್ರಭುಸ್ವಾಮಿ ಮಳಿಮಠ ಬಿಡುಗಡೆ ಮಾಡಿದರು.

ಮೈಸೂರು, ಮಾ.2(ಬಿಎಲ್‌ಯು)– ಉಚಿತವಾಗಿ ಯಾವುದೇ ವಸ್ತು ನೀಡಿದರೂ ಅದರ ಬೆಲೆ ತಿಳಿಯುವುದಿಲ್ಲ ಎಂಬುದನ್ನು ಮಹಾಭಾರತದ ಪ್ರಸಂಗಗಳೇ ಹೇಳುತ್ತವೆ ಎಂದು ಮೈಸೂರು ಆಕಾಶವಾಣಿಯ ಹಿರಿಯ ಉದ್ಘೋಷಕ ಪ್ರಭುಸ್ವಾಮಿ ಮಳಿಮಠ ಹೇಳಿದರು.

ಮೈಸೂರಿನ ಕುವೆಂಪುನಗರದ ಕಲಾ ಸುರುಚಿಯಲ್ಲಿ ದಿವಂಗತ ಎಂ.ಎಸ್.ಕೆ. ಪ್ರಭು ಅವರ ಹೆಸರಾಂತ ನಾಟಕ ಬಕ ಕೃತಿ ರಚನೆಗೆ 50ರ ಸಂಭ್ರಮದ ನೆನಪಿನಲ್ಲಿ ಹಿಂದಿ ಅನುವಾದಿತ ಕೃತಿ ಬಕಾಸುರ್ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಪುಸ್ತಕ ಕುರಿತಂತೆ ಹಲವು ವಿಚಾರಗಳನ್ನು ಮಂಡಿಸಿದರು.

ಮಹಾಭಾರತದ ಹಲವು ವಿಚಾರಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಪ್ರಸ್ತುತ ಸನ್ನಿವೇಶವನ್ನು ಈ ನಾಟಕ ಬಿಂಬಿಸುತ್ತದೆ. ಈಗಿನ ರಾಜಕಾರಣಿಗಳಲ್ಲಿರುವ ಸ್ವಾರ್ಥತೆ ಮಹಾಭಾರತದ ಕಾಲದಲ್ಲೂ ಇತ್ತು ಎಂಬುದನ್ನು ಪ್ರಭು ಅವರು ತಮ್ಮ ಬರಹದಲ್ಲಿ ಉಲ್ಲೇಖಿಸಿದ್ದಾರೆ ಎಂದು ಹೇಳಿದರು.

ಮಕ್ಕಳನ್ನು ಬೆಳೆಸುವ ಕುಂತಿಯ ತಾಯಿತನದ ಮಮತೆ ಸೇರಿದಂತೆ ಹಲವು ವಿಚಾರಗಳನ್ನು ಈ ಪುಸ್ತಕದಲ್ಲಿ ಅನಾವರಣಗೊಳಿಸಿದ್ದಾರೆ ಎಂದು ತಿಳಿಸಿದರು.

ಮಾರುಕಟ್ಟೆಯ ಏಕಸ್ವಾಮ್ಯತೆ ಮಹಾಭಾರತದ ಕಾಲದಲ್ಲೆ ಇತ್ತು ಎಂಬುದನ್ನು ತಿಳಿಸಿರುವ ಪ್ರಭು ಅವರು, ರೈತರ ಬವಣೆ, ಮಧ್ಯವರ್ತಿಗಳ ಹಾವಳಿ, ಬಡಜನರ ಅಸಹಾಯಕತೆ ಸೂಚ್ಯವಾಗಿ ಹೇಳಿದ್ದಾರೆ.

ಯಾವುದೇ ಒಂದು ಸಾಧನೆ ಮಾಡಬೇಕಾದರೆ ಗುರಿ ಮತ್ತು ಗುರು ಇರಬೇಕು ಎಂಬುದನ್ನು ಪುಸ್ತಕದ ಲೇಖಕ ಪ್ರಭು ಮನದಟ್ಟು ಮಾಡಿದ್ದಾರೆ ಎಂದು ಪ್ರಭುಸ್ವಾಮಿ ತಿಳಿಸಿದರು.

ಬಿ.ಎಸ್.ವಿನಯ್ ನಾಟಕ ವಾಚನ ಮಾಡಿದರು, ಡಾ.ಮೈಥಿಲಿ ಪುಸ್ತಕದ ಅನುವಾದ ಕುರಿತು ಅಭಿಪ್ರಾಯ ಮಂಡಿಸಿದರು. ಸೋಮಶೇಖರ್ ಹಾಗೂ ರವಿ ಶಂಕರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

03.03.2025 ಸೋಮವಾರ, ಮಳೆ ನಕ್ಷತ್ರ: ಶತಭಿಷ, 19.02.2025 ರಿಂದ 03.03.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ :** ಗುರು ವೈಭವೋತ್ಸವ–2025, ಬೆಳಗ್ಗೆ 7 ಗಂಟೆಗೆ, ಶ್ರೀ ಮಹಾಮೃತ್ಯುಂಜಯಸಹಿತ ನಕ್ಷತ್ರ ಹೋಮ, ಸ್ಥಳ: ಮಠದ ಪ್ರಾಂಗಣ, ಸುಬ್ಬರಾಯನಕೆರೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ, ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಇಸುಬು ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ :** ಶ್ರೀ ರಾಘವೇಂದ್ರ ಸ್ವಾಮಿಗಳ ಪಟ್ಟಾಭಿಷೇಕ ಹಾಗೂ ವರ್ಧಂತಿ ಮಹೋತ್ಸವ, ಬೆಳಗ್ಗೆ 6.30ರಿಂದ ಶ್ರೀ ವೇದವ್ಯಾಸ ಅಷ್ಟಾಕ್ಷರ ಮಂತ್ರ ಮಹಾಯಾಗ ಹಾಗೂ ಮೃತ್ಯುಂಜಯ ಹೋಮ, ಸ್ಥಳ: ಮಠದ ಪ್ರಾಂಗಣ, ಜಯಲಕ್ಷ್ಮೀಪುರಂ.

■ **ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ :** ಚುನಾಯಿತ ಯುವ ಕಾಂಗ್ರೆಸ್ ಪದಾಧಿಕಾರಿಗಳ ಸಭೆ, ಅಭಿನಂದನೆ, ಸ್ಥಳ: ಕಾಂಗ್ರೆಸ್ ಭವನ, ರೈಲ್ವೆ ನಿಲ್ದಾಣದ ಹತ್ತಿರ, ಬೆಳಗ್ಗೆ 11.30ಕ್ಕೆ

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಅರಿವು ಸಂಸ್ಥೆ:** ಸಂಸ್ಥೆಯ 13ನೇ ವರ್ಷದ ವಾರ್ಷಿಕೋತ್ಸವ ಅಂಗವಾಗಿ ಗೋ ಸಂರಕ್ಷಣಾ ಜಾಗೃತಿ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಬಸಳ್ಳಿ ಹುಂಡಿ ದಾಸೋಹ ಮಠದ ಶ್ರೀ ಬಸವರಾಜು ಸ್ವಾಮೀಜಿ, ಮಡಿವಾಳ ಮಠದ ಶ್ರೀ ಅಡವಿಸ್ವಾಮಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕಲ್ಯಾಣ ಮಂಡಳಿಯ ರಾಜ್ಯ ಅಧ್ಯಕ್ಷ ಎಸ್.ಕೆ.ಮಿತ್ತಲ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಮಾಜಿ ಕಾರ್ಪೊರೇಟರ್ ಮಾ.ವಿ.ರಾಮಪ್ರಸಾದ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ಸ್ಥಳ: ಕೃಷ್ಣನ ದೇವಸ್ಥಾನ, ನಂಜುಮಳಿಗೆ, ಬೆಳಗ್ಗೆ 11 ಗಂಟೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಅಧ್ಯಯನ ಹಾಗೂ ವಿಸ್ತರಣಾ ಕೇಂದ್ರ :** ಸರಣಿ ಉಪನ್ಯಾಸ ಮಾಲಿಕೆ ಹಾಗೂ ಮಹಾಮನೆ ಪ್ರಾರಂಭೋತ್ಸವ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಸ್ಥಳ: ಮಹಾಮನೆ, ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಅಧ್ಯಯನ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ, ಮಧ್ಯಾಹ್ನ 2.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ 190ನೇ ಜನ್ಮದಿನೋತ್ಸವ, ಆಶ್ರಮದ ವಾರ್ಷಿಕೋತ್ಸವ–2025, ಸಂಜೆ 5.30ರಿಂದ ಸಂಧ್ಯಾರತಿ, 5.45ರಿಂದ ಗದಗ–ವಿಜಯಪುರ ರಾಮಕೃಷ್ಣ–ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿರ್ಭಯಾನಂದ ಸರಸ್ವತಿ ಅವರಿಂದ ಪ್ರವಚನ, ವಿಷಯ: ಸ್ವಾಮಿ ವಿವೇಕಾನಂದ– ಸಾರ್ವತ್ರಿಕ ಆದರ್ಶ, ಸ್ಥಳ: ಆಶ್ರಮದ ಆವರಣ, ಯಾದವಗಿರಿ.

■ **ನಾದರಂಗ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ:** ರಂಗ ಸಂಭ್ರಮ ನಾಟಕೋತ್ಸವ–2024–25, ಸಂಜೆ 6.45ಕ್ಕೆ, ಉದ್ಘಾಟನೆ: ಮೈಸೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಅಧ್ಯಕ್ಷತೆ: ಕದಂಬ ರಂಗವೇದಿಕೆ ಅಧ್ಯಕ್ಷ ಡಾ.ರಾಜಶೇಖರ ಕದಂಬ, ಸಂಜೆ 7ಕ್ಕೆ, ಮೈಸೂರಿನ ಶ್ರೀ ಗುರುಕುಲ ಶಾಲೆಯಿಂದ ಕೋ.ಚನ್ನಬಸಪ್ಪ ಅವರ 'ಅಮ್ಮನ ಕರೆ' ಜಾನಪದ ನಾಟಕ, ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ–ಮುತ್ತುರಾಜ್, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಆಧಾರ ಶಿಲೆ, ಮೈಸೂರು ಸುತ್ತಲಿನ ಪ್ರಾಗೈತಿಹಾಸಿಕ ತಾಣಗಳ ಪರಿಚಯ ಮಾಲಿಕೆ. ಪ್ರಸ್ತುತಿ: ಡಾ.ರಾಮದಾಸ್ ರೆಡ್ಡಿ, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸದಾಶಿವ ಪಾಟೀಲ್, ಶಾಂತಲಾ ವಟ್ಟಂ, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50–ರೈತರಿಗೆ ಸಲಹೆ, 7.15–ಭರವಸೆ ಹೊನಲು, ವೈದ್ಯರ ಕಿವಿಮಾತು, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ) ಬಹುಮುಖ ಪ್ರತಿಭೆಯ ಹಿರಿಯ ವಿದ್ವಾಂಸರು ಹಾಗೂ ಕವಿಗಳು ಆದ ಡಾ.ಸಿ.ಪಿ.ಕೃಷ್ಣಕುಮಾರ್ ಅವರೊಂದಿಗೆ ಜಿ.ಕೆ.ರವೀಂದ್ರಕುಮಾರ್ ಅವರು ನಡೆಸಿದ್ದ ಸಂವಾದದ ಮೊದಲ ಭಾಗ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ರಾಘವೇಂದ್ರ, ಹಾಡುಗಾರಿಕೆ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ, ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್ ಬಿ., 12.05–ವನಿತಾ ವಿಹಾರ, 12.35–ದೇವರನಾಮ–ಇಂದ್ರಾಣಿ ಅನಂತರಾಮ್, 12.45–ನಮ್ಮ ಆರೋಗ್ಯ–ವಿಶ್ವ ಬೊಜ್ಜುತನ ಜಾಗೃತಿ ದಿನದ ಸಂದರ್ಭದಲ್ಲಿ ಬೊಜ್ಜುತನ, ಕಾರಣಗಳು ಮತ್ತು ಚಿಕಿತ್ಸೆ ಕುರಿತು ಎಂಡೋಕ್ರೈನಾಲಜಿ ಮತ್ತು ಡಯಾಬಿಟಿಸ್ ತಜ್ಞರಾದ ಡಾ.ಲಕ್ಷ್ಮೀ ನಾಗೇಂದ್ರ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, ಪ್ರಧಾನಮಂತ್ರಿ ಸುರಕ್ಷಾ ಭೀಮಾ ಯೋಜನೆ ಕುರಿತು ಮಾಹಿತಿ, 1.20–ಭಾವಗೀತೆಗಳು–ಅಮೂಲ್ಯ ಎಂ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ.ಎಸ್.ವಿಜಯ ರಾಘವನ್, ವೀಣಾವಾದನ, 4.00–ಮಹಿಳಾರಂಗ, ನಾನು ನನ್ನ ಕಂಪನಿ ಬೀಟೆ ಮರ ಬಳಸಿ ಕರಕುಶಲ ವಸ್ತುಗಳನ್ನು ತಯಾರಿಸುವ ಜ್ಯೋತಿ ಅವರೊಂದಿಗೆ ಮಾತುಕತೆ, ಪ್ರಸ್ತುತಿ: ಸಹನಾ, 4.45–ಹಿಂದಿ ಪಾಠ, ಪ್ರಸ್ತುತಿ: ಡಾ.ಮಾಧವಿ ಭಂಡಾರಿ, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ: ರೈತರಿಗೆ ಬ್ಯಾಂಕಿನಿಂದ ದೊರೆಯುವ ಸೌಲಭ್ಯಗಳನ್ನು ಕುರಿತು ಸಂವಾದ. ಭಾಗವಹಿಸುತ್ತಾರೆ, ಮೈಸೂರಿನ ಕರ್ನಾಟಕ ಬ್ಯಾಂಕ್ ಪ್ರಾದೇಶಿಕ ಕಚೇರಿಯ ಸಹಾಯಕ ಮಹಾಪ್ರಬಂಧಕರಾದ ಡಾ.ಟಿ.ಆರ್.ಅರುಣ್ ಮತ್ತು ಕೃಷಿ ಅಧಿಕಾರಿ ಆರ್.ಚಂದನಾ, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45–ವಿಧಾನಮಂಡಲದಲ್ಲಿ ಇಂದು, 8.00–ಯುವವಾಣಿ–ಇತ್ತೀಚೆಗೆ ಜರುಗಿದ ಮೈಸೂರು ವಿಶ್ವವಿದ್ಯಾಲಯದ 105ನೇ ಘಟಿಕೋತ್ಸವದಲ್ಲಿ ಎಂ.ಕಾಂ ವಿಷಯದಲ್ಲಿ ಪ್ರಥಮ rankನೊಂದಿಗೆ 3 ಚಿನ್ನದ ಪದಕ ಹಾಗೂ ನಗದು ಪುರಸ್ಕಾರ ಗಳಿಸಿದ ಮೈಸೂರಿನ ಸಂಜನಾ ಪ್ರಭು. ಎಸ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಬಾಲಮುರಳಿಕೃಷ್ಣ, ಹಾಡುಗಾರಿಕೆ, 10.00–ರೂಪಕ–ಹರಿಯನ್ನರಸಿದ ವನಿತೆಯರು, ರಚನೆ ಮತ್ತು ಪ್ರಸ್ತುತಿ–ಡಾ.ಸುಕನ್ಯಾ ಪ್ರಭಾಕರ್, 10.30–ಸವಿನೆನಪು.

ಮೈಸೂರು ಮಿತ್ರ

ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯು ಪರೀಕ್ಷೆ

ಸಮರ್ಪಕ ಬಸ್ ವ್ಯವಸ್ಥೆ ಕಲ್ಪಿಸುವಂತೆ ಸಂಸದ ಯದುವೀರ್ ಆಗ್ರಹ



ಮೈಸೂರು, ಮಾ.2(ಎಸ್‌ಬಿಡಿ)– ದ್ವಿತೀಯ ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಹಿನ್ನೆಲೆಯಲ್ಲಿ ಸಮರ್ಪಕವಾಗಿ ಬಸ್ ವ್ಯವಸ್ಥೆ ಕಲ್ಪಿಸುವಂತೆ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಆಗ್ರಹಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ದ್ವಿತೀಯ ಪಿಯು ಪರೀಕ್ಷೆಗಳು ನಡೆಯುತ್ತಿವೆ. ಮಾ.21ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಆರಂಭವಾಗುತ್ತದೆ. ಈ ಪರೀಕ್ಷೆಗಳು ವಿದ್ಯಾರ್ಥಿಗಳ ಜೀವನದ ಪ್ರಮುಖ ಘಟ್ಟ. ಬಹುತೇಕ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ಹೋಗಿಬರಲು ಕೆಎಸ್‌ಆರ್‌ಟಿಸಿ ಬಸ್‌ಗಳನ್ನೇ ಅವಲಂಬಿಸಿದ್ದಾರೆ. ಆದ್ದರಿಂದ ಪರೀಕ್ಷೆ ಮುಗಿಯುವವರೆಗೂ ಯಾವುದೇ ತೊಂದರೆಯಾಗದಂತೆ ಸಮರ್ಪಕ ಬಸ್ ಸಂಚಾರ ವ್ಯವಸ್ಥೆ ಕಲ್ಪಿಸಬೇಕು ಎಂದು ಸಾರಿಗೆ ಸಂಸ್ಥೆಯನ್ನು ಒತ್ತಾಯಿಸಿದ್ದಾರೆ.

ನಿಗದಿತ ಸಮಯಕ್ಕೆ ಬಸ್‌ಗಳು ನಿಲ್ದಾಣಕ್ಕೆ ಬರುತ್ತಿಲ್ಲ. ನಿಗದಿತ ಸಮಯಕ್ಕೆ ಬಂದರೂ ಜನಸಂದಣಿ ಇರುತ್ತದೆ ಎಂಬ ಕಾರಣದಿಂದ ನಿಲುಗಡೆ ನೀಡುವುದಿಲ್ಲ. ಇದರಿಂದ ಪರೀಕ್ಷಾ ಕೇಂದ್ರಗಳಿಗೆ ತಡವಾಗಿ ಹೋಗುವಂತಾಗಿದೆ ಎಂದು ಹಲವು ವಿದ್ಯಾರ್ಥಿಗಳು ದೂರಿದ್ದಾರೆ. ಈ ಬಗ್ಗೆ ಸಾರಿಗೆ ಸಂಸ್ಥೆ ಅಧಿಕಾರಿಗಳು ಗಮನಹರಿಸಬೇಕು. ಸಮಯ ಪಾಲನೆ ಹಾಗೂ ನಿಗದಿತ ಸ್ಥಳದಲ್ಲಿ ನಿಲುಗಡೆಗೆ ಸಿಬ್ಬಂದಿಗೆ ಸೂಚನೆ ನೀಡಬೇಕು. ಈ ಸಂಬಂಧ ಕೆಲ ಅಧಿಕಾರಿಗಳೊಂದಿಗೆ ಮಾತನಾಡಿದ್ದು, ಸಮರ್ಪಕ ಸೇವೆ ಕಲ್ಪಿಸುವ ಭರವಸೆ ನೀಡಿದ್ದಾರೆ. ಆದರೂ ಎಲ್ಲಾ ಕಡೆಯಲ್ಲೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಬಸ್ ಸೇವೆ ಕಲ್ಪಿಸಬೇಕು. ಪರೀಕ್ಷಾ ಕೇಂದ್ರಗಳಿಗೆ ನಿಗದಿತ ಸಮಯಕ್ಕೆ ಹೋಗಿ, ನಿರಾತಂಕವಾಗಿ ಪರೀಕ್ಷೆ ಬರೆಯಲು ಅನುವು ಮಾಡಿಕೊಡಬೇಕು. ಸಾಧ್ಯವಾದರೆ ಅವಶ್ಯಕತೆ ಇರುವ ಮಾರ್ಗಗಳಲ್ಲಿ ಹೆಚ್ಚುವರಿ ಬಸ್ ಸಂಚಾರಕ್ಕೆ ಕ್ರಮ ವಹಿಸಬೇಕು ಎಂದು ತಿಳಿಸಿದ್ದಾರೆ.

ಕಾರಿನ ಗಾಜು ಒಡೆದು 6 ಲಕ್ಷ ರೂ. ಕಳವು

ಮೈಸೂರು, ಮಾ.2(ಎಸ್‌ಬಿಡಿ)– ಕಾರಿನ ಗಾಜು ಒಡೆದು, ಸೀಟ್ ಕವರ್‌ನಲ್ಲಿದ್ದ 6 ಲಕ್ಷ ಹಣವನ್ನು ಕಳ್ಳತನ ಮಾಡಿರುವ ಘಟನೆ ಮೈಸೂರಿನ ದಕ್ಷಿಣ ಉಪನೋಂದಣಾಧಿಕಾರಿಗಳ ಕಚೇರಿ ಸಮೀಪ ನಡೆದಿದೆ.

ತಿ.ನರಸೀಪುರದ ಹೆಳವರಹುಂಡಿ ನಿವಾಸಿ, ಗುತ್ತಿಗೆದಾರ ಎನ್.ಕುಮಾರಸ್ವಾಮಿ ಅವರ ಗ್ರ್ಯಾಂಡ್ ಐ10 ಕಾರಿನ ಹಿಂಭಾಗದ ಕಿಟಕಿ ಒಡೆದು, ಸೀಟ್ ಕವರ್‌ನಲ್ಲಿಟ್ಟಿದ್ದ ಹಣವನ್ನು ಖದೀಮರು ಕಳವು ಮಾಡಿದ್ದು, ಈ ಸಂಬಂಧ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇತ್ತೀಚೆಗೆ ಕುಮಾರಸ್ವಾಮಿ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ತೊಡಗಿದ್ದರು. ಮೈಸೂರು ನಗರ ಹಾಗೂ ಜಿಲ್ಲೆಯ ವಿವಿಧೆಡೆ ಜಮೀನು ಮತ್ತು ನಿವೇಶನಗಳ ಮಾರಾಟ ಹಾಗೂ ಖರೀದಿಯಲ್ಲಿ ಮಧ್ಯಸ್ಥಿಕೆ ವಹಿಸುತ್ತಿದ್ದರು. ಹಾಗೆಯೇ ಜಮೀನು ವ್ಯಾಪಾರ ಸಂಬಂಧ ಫೆ.27ರಂದು ನೋಂದಣಿಗಾಗಿ ದಕ್ಷಿಣ ಉಪನೋಂದಣಾಧಿಕಾರಿಗಳ ಕಚೇರಿ ಬಳಿ ಬಂದಿದ್ದರು. ಆ ವೇಳೆ ಜಮೀನು ಖರೀದಿಸಿದ್ದವರು ಅದರ ಮಾಲೀಕರಿಗೆ ನೀಡಬೇಕಿದ್ದ 6 ಲಕ್ಷ ಹಣವನ್ನು ಕುಮಾರಸ್ವಾಮಿ ಅವರಿಗೆ ನೀಡಿದ್ದರು. ಆ ಹಣವನ್ನು ತಮ್ಮ ಕಾರಿನ ಸೀಟ್ ಕವರ್‌ನಲ್ಲಿಟ್ಟು, ಉಪನೋಂದಣಾಧಿಕಾರಿ ಕಚೇರಿಯೊಳಗೆ ಹೋಗಿದ್ದರು.

ನೋಂದಣಿ ಕಾರ್ಯ ಮುಗಿದ ಬಳಿಕ ಕಾರಿನ ಬಳಿ ಬಂದು, ಒಳಗೆ ಕುಳಿತುಕೊಂಡಾಗ ಹಿಂಭಾಗದ ಸೀಟ್ ಮೇಲೆ ಗಾಜಿನ ಚೂರುಗಳು ಬಿದ್ದಿದ್ದವು. ಏನಾಗಿದೆ ಎಂದು ನೋಡಿದಾಗ ಕಿಟಕಿಯ ಗಾಜು ಒಡೆದಿತ್ತು. ಗಾಬರಿಯಿಂದ ಸೀಟ್ ಕವರ್ ಪರಿಶೀಲಿಸಿದಾಗ ಅದರಲ್ಲಿದ್ದ 6 ಲಕ್ಷ ಹಣ ಕಳುವಾಗಿತ್ತು ಎಂದು ಕುಮಾರಸ್ವಾಮಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಪಡುವಾರಹಳ್ಳಿಯಲ್ಲಿ ಶ್ರೀ ಜೋಡಿ ಮಾರಮ್ಮ ಜಾತ್ರೆಯ ಸಂಭ್ರಮ





ಪಡುವಾರಹಳ್ಳಿ ಶ್ರೀ ಜೋಡಿ ಮಾರಮ್ಮ ದೇವಸ್ಥಾನದಲ್ಲಿರುವ ಮಾರಮ್ಮನ ವಿಗ್ರಹಗಳಿಗೆ ಹೂವಿನ ಅಲಂಕಾರ ಮಾಡಿರುವುದು. ಮತ್ತೊಂದು ಚಿತ್ರದಲ್ಲಿ ದೇವಸ್ಥಾನದ ಆವರಣದಲ್ಲಿ ಬಾಳೆಗೊನೆ ಕಟ್ಟಿಸುವ ಮೂಲಕ ಭಕ್ತರು ಹರಕೆ ತೀರಿಸಿರುವುದನ್ನು ಕಾಣಬಹುದು.



ವಡ್ಡಬಾಯಿ ಆಚರಣೆಯಲ್ಲಿ ವಿವಿಧ ವೇಷಧಾರಿಗಳಾಗಿರುವ ಪುರುಷರು.

ಮೈಸೂರು,ಮಾ.2(ಪಿಎಂ)– ಮೈಸೂರಿನ ಪಡುವಾರಹಳ್ಳಿ (ವಿನಾಯಕನಗರ) ಶ್ರೀ ಜೋಡಿ ಮಾರಮ್ಮ ಜಾತ್ರೆಗೆ ವಿದ್ಯುಕ್ತ ಚಾಲನೆ ದೊರೆತಿದ್ದು, ಶನಿವಾರ ಮಧ್ಯರಾತ್ರಿ ಗ್ರಾಮದ ಮಾರಮ್ಮನ ದೇವಸ್ಥಾನದಲ್ಲಿ ವಿವಿಧ ಪೂಜಾ ಕೈಂಕರ್ಯ ನಡೆಯುವುದರೊಂದಿಗೆ ವಡ್ಡಬಾಯಿ ಸೇರಿದಂತೆ ನಾನಾ ಆಚರಣೆಗಳು ನೆರವೇರಿದವು.

ವಡ್ಡಬಾಯಿ ಆಚರಣೆ ದಿನಕ್ಕೂ ಮುನ್ನ ಶುಕ್ರವಾರ ಮಧ್ಯರಾತ್ರಿ ಮಾರಿಗುಡಿಯಲ್ಲಿರುವ ಜೋಡಿ ಮಾರಮ್ಮನ ಶ್ರೀಗಂಧದ ವಿಗ್ರಹಗಳಿಗೆ ಪಂಚಲೋಹದ ಕೊಳಗಗಳ ಧಾರಣೆಯ ವಿಧಿ ವಿಧಾನ ನಡೆಸಲಾಯಿತು. ಆ ಮೂಲಕ ಮೂರು ದಿನಗಳ ಧಾರ್ಮಿಕ ಹಾಗೂ ಸಾಂಸ್ಕೃತಿಕ ವೈಭವ ಮತ್ತು ಭಕ್ತಿ–ಭಾವೈಕ್ಯತೆಯ ಜಾತ್ರಾ ಮಹೋತ್ಸವಕ್ಕೆ ಅದ್ಧೂರಿ ಚಾಲನೆ ದೊರೆಯಿತು. ಶನಿವಾರ ಮಧ್ಯರಾತ್ರಿ ದೇವಸ್ಥಾನದ ಆವರಣದಲ್ಲಿ ವಡ್ಡಬಾಯಿ ಆಚರಣೆಯು ವರ್ಣರಂಜಿತವಾಗಿ ನಡೆಯಿತು.

ಊರಿನ ಹತ್ತಾರು ಮಂದಿ ಪುರುಷರು ವಿವಿಧ ವೇಷಗಳನ್ನು ಧರಿಸಿ ಮಾರಿಗುಡಿಯ ಸುತ್ತಲೂ ಮೂರು ಸುತ್ತು ಪ್ರದಕ್ಷಿಣೆ ಹಾಕಿ ಬಳಿಕ ತಮ್ಮ ವೇಷದ ಸಾಮಗ್ರಿಗಳನ್ನು ಬೆಂಕಿಯಲ್ಲಿ ಸುಟ್ಟು ಹಾಕಿದರು. ನಂತರ ವಡ್ಡಬಾಯಿ ಸಾರುವ ವಿಧಿವಿಧಾನವು ನೆರವೇರಿತು. ಇದಾದ ಬಳಿಕ ದಾರದ ಉಂಡೆ ಎಸೆಯುವ ಪ್ರಕ್ರಿಯೆಯೂ ಸುಗಮವಾಗಿ ಜರುಗಿತು. ನಂತರ 'ಬಲಿ ಅನ್ನ' ಎಸೆಯುವ ಪ್ರಕ್ರಿಯೆ ನಡೆಯಿತು. ದೇವಸ್ಥಾನದಿಂದ ಒಂದೂವರೆ ಕಿ.ಮೀ. ದೂರದಲ್ಲಿ ಬಲಿ ಅನ್ನ ಎಸೆದು ಬರಲಾಯಿತು. ಹೀಗೆ ಎಸೆದ ಬಲಿ ಅನ್ನವನ್ನು ಜೋಡಿ ಮಾರಮ್ಮನ ಪ್ರಸಾದವೆಂದು ಕಾದು ಕುಳಿತು ಆತ್ಮಗಳು ಸ್ವೀಕರಿಸುತ್ತವೆ ಎಂಬ ಪ್ರತೀತಿ ಇದೆ.

> ಪಡುವಾರಹಳ್ಳಿ ಗ್ರಾಮದ ಸುತ್ತಮುತ್ತಲ ಯಾವುದೇ ಗ್ರಾಮದಲ್ಲೂ ಇಲ್ಲಿಯಷ್ಟು ವಿಶೇಷತೆಯಿಂದ ಮಾರಮ್ಮನ ಜಾತ್ರೆ ನಡೆಯುವುದಿಲ್ಲ ಎಂಬುದು ನನ್ನ ಭಾವನೆ. ಏಕೆಂದರೆ ಮಾರಮ್ಮನಿಗೆ ಧಾರಣೆ ಮಾಡಿರುವ ಕೊಳಗ ಎತ್ತುವವರೆಗೂ ಒಟ್ಟು 10 ದಿನಗಳ ಕಾಲ ಜಾತ್ರೆಯು ಅದ್ಧೂರಿಯಾಗಿ ನಡೆಯುತ್ತದೆ. ಜೋಡಿ ಮಾರಮ್ಮ ತಾಯಿ ನಂಬಿದವರಿಗೆ ಒಳ್ಳೆಯದಾಗಿದೆ. ನಮ್ಮ ಗ್ರಾಮದಿಂದ ಹೊರ ಹೋಗಿ ಬದುಕು ಕಂಡುಕೊಂಡವರೂ ಜಾತ್ರೆ ವೇಳೆ ಬಂದು ಮಾರಿಗುಡಿಯಲ್ಲಿ ಮಾರಮ್ಮನ ದರ್ಶನ ಪಡೆದು, ಪೂಜೆ ಸಲ್ಲಿಸುತ್ತಾರೆ. ಬೆಂಗಳೂರು, ಮಂಡ್ಯ ಮೊದಲಾದ ಕಡೆಗಳಿಂದಲ್ಲೂ ಭಕ್ತರು ಜಾತ್ರೆಯ ಸಂದರ್ಭದಲ್ಲಿ ಜೋಡಿ ಮಾರಮ್ಮನ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸುತ್ತಾರೆ.
> -**ಜೆ.ಯೋಗೇಶ್**, ಪಡುವಾರಹಳ್ಳಿ ನಿವಾಸಿ ಮತ್ತು ದಿ ಮೈಸೂರು ಕೋಆಪರೇಟಿವ್ ಬ್ಯಾಂಕ್ ಅಧ್ಯಕ್ಷರು.

ಭಾನುವಾರ ಮಧ್ಯರಾತ್ರಿ ದೇವಸ್ಥಾನ ಆವರಣದಿಂದ ತಂಪಿನ ಮೆರವಣಿಗೆಗೆ ಚಾಲನೆ ನೀಡಲಾಯಿತು. ಅಲಂಕೃತ ಕಳಶ–ಕನ್ನಡಿ ಹೊಂದಿರುವ ಕನ್ನಂಕಾಡಿ ಹೊತ್ತ ಬಾಲಕಿಯರು ಮುಂದೆ ಸಾಗಿದರೆ, ಅವರ ಹಿಂದೆ ತಂಬಿಟ್ಟು ಹೊತ್ತ ಮಹಿಳೆಯರು ಸಾಲಿನಲ್ಲಿ ಸಾಗಿದರು. ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆದು, ಮಾರಿಗುಡಿ ಆವರಣಕ್ಕೆ ಮರಳಿದ ಬಳಿಕ ಗಂಟೆಗೂ ಹೆಚ್ಚು ಕಾಲ ಗುಡಿಯಲ್ಲಿ ಮಾರಮ್ಮನಿಗೆ ಪೂಜಾ ಕೈಂಕರ್ಯ ನಡೆಯುವುದರೊಂದಿಗೆ ಆ ದಿನದ ವಿಧಿವಿಧಾನಕ್ಕೆ ತೆರೆ ಬಿದ್ದಿತು. ಅಲ್ಲದೆ, ಭಾನುವಾರ ಸಂಜೆ ದೇವಸ್ಥಾನದ ಎದುರಿನ ಬಯಲು ರಂಗ ಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು.

ಬಾಯಿ ಬೀಗ ಮೆರವಣಿಗೆ: ಮಾ.3ರಂದು ಸೋಮವಾರ ಮಧ್ಯಾಹ್ನ 3 ಗಂಟೆಗೆ ಬಾಯಿ ಬೀಗದ ಮೆರವಣಿಗೆ ನಡೆಯಲಿದೆ. ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗಿ, ಸಂಜೆ ವೇಳೆಗೆ ದೇವಸ್ಥಾನಕ್ಕೆ ಮರಳಲಿದೆ. ರಾತ್ರಿ 9 ಗಂಟೆಗೆ ದೇವಸ್ಥಾನದ ಆವರಣದಲ್ಲಿ 'ಸಂಪೂರ್ಣ ರಾಮಾಯಣ' ಪೌರಾಣಿಕ ನಾಟಕ ಪ್ರದರ್ಶನ ನಡೆಯಲಿದೆ. ಅಲ್ಲದೆ, ಜಾತ್ರೆ ಪ್ರಯುಕ್ತ ಇನ್ನು ಹಲವು ದಿನಗಳ ಕಾಲ ವಿವಿಧ ಆಚರಣೆಗಳು ನಡೆಯಲಿವೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜೋಡಿ ಮಾರಮ್ಮ ದೇವಸ್ಥಾನದ ಗುಡ್ಡಪ್ಪ ಆರ್.ಶೇಷಾದ್ರಿ, ನಾನು ಈ ಗ್ರಾಮದ ಮೂಲ ನಿವಾಸಿಯಾಗಿದ್ದು, ರೈಲ್ವೆ ಕಾರ್ಯಾಗಾರದಲ್ಲಿ ಉದ್ಯೋಗಿ ಆಗಿದ್ದೇನೆ. ನಮ್ಮ ವಂಶಸ್ಥರು ಮಾರಿಗುಡಿಯಲ್ಲಿ ಪೂಜೆ ಮಾಡುತ್ತಿದ್ದರು. ನಂತರ ನಮ್ಮವರಿಂದ ಈ ಜವಾಬ್ದಾರಿ ಕೈತಪ್ಪಿತ್ತು. ಇದೀಗ 100 ವರ್ಷಗಳ ನಂತರ ನಮ್ಮ ಕುಟುಂಬಕ್ಕೆ ಜವಾಬ್ದಾರಿ ದೊರೆತಿದೆ. ನಂಬಿದರೆ ಕಷ್ಟಕಾಲದಲ್ಲಿ ಜೋಡಿ ಮಾರಮ್ಮ ಕೈಹಿಡಿಯುತ್ತಾಳೆ ಎಂದು ಹೇಳಿದರು.

> ಪಡುವಾರಹಳ್ಳಿ (ವಿನಾಯಕನಗರ) ಗ್ರಾಮಾಭ್ಯುದಯ ಟ್ರಸ್ಟ್ ವತಿಯಿಂದ ವರ್ಷಕ್ಕೊಮ್ಮೆ ಶ್ರೀ ಜೋಡಿ ಮಾರಮ್ಮ ಜಾತ್ರಾ ಮಹೋತ್ಸವ ಅದ್ಧೂರಿಯಾಗಿ ನಡೆಸಿಕೊಂಡು ಬರುತ್ತಿದ್ದೇವೆ. ಸೋಮವಾರ ಹೊರಗಡೆ ಜನ ಬಾರೀ ಸಂಖ್ಯೆಯಲ್ಲಿ ಜೋಡಿ ಮಾರಮ್ಮನ ದರ್ಶನ ಪಡೆಯಲು ಆಗಮಿಸುತ್ತಾರೆ.
> -**ಸೋಮಣ್ಣ**, ಟ್ರಸ್ಟ್ ಖಜಾಂಚಿ

ಜೋಡಿ ಮಾರಮ್ಮನ ಜಾತ್ರೆಯನ್ನು ಯಾವುದೇ ಸಂದರ್ಭದಲ್ಲಿ ನಿಲ್ಲಿಸಬೇಕಾದ ಪ್ರಸಂಗವೇ ಒದಗಿಲ್ಲ. ಕೋವಿಡ್ ಸಂದರ್ಭದಲ್ಲೂ ಜಾತ್ರೆ ನಡೆದಿದೆ. ಅಲ್ಲದೆ, ಅಂದು ಕೋವಿಡ್ ಆತಂಕ ಎದುರಾಗುವ ಬಗ್ಗೆ ಜೋಡಿ ಮಾರಮ್ಮ ಸೂಚನೆ ಕೊಟ್ಟಿದ್ದಳು. ಜಾತ್ರೆಯಲ್ಲಿ ದಾರದ ಉಂಡೆಯನ್ನು ಎಸೆಯುವ ಪದ್ಧತಿ ಇದೆ. ಇದನ್ನು ಎಸೆದಾಗ ಅದು ದೇವಸ್ಥಾನದ ಹಿಂಭಾಗಕ್ಕೆ ಸಲೀಸಾಗಿ ಹೋಗಿ ಬೀಳಬೇಕು. ಇಲ್ಲವಾದರೆ ಏನೋ ಸಮಸ್ಯೆ ಇದೆ ಎಂಬ ಸೂಚನೆ ದೊರೆತಂತೆ. ಕೋವಿಡ್ ಎದುರಾಗುವ ಸಂದರ್ಭದಲ್ಲಿ ದಾರದ ಉಂಡೆ ಸಲೀಸಾಗಿ ಗುಡಿಯ ಹಿಂಭಾಗಕ್ಕೆ ಬಿದ್ದಿರಲಿಲ್ಲ. ಹಾಗಾಗಿ ಅಂದು ಯಾವುದೋ ಸಮಸ್ಯೆ ಎದುರಾಗುವ ಸೂಚನೆ ಸಿಕ್ಕಿತ್ತು ಎಂದರು.

ಧಾರ್ಮಿಕ–ಸಾಂಸ್ಕೃತಿಕ ವೈವಿಧ್ಯತೆ ಈ ಜಾತ್ರೆಯ ವೈಶಿಷ್ಟ್ಯ. ಮಾರಮ್ಮನಿಗೆ ಭಕ್ತಿ ಸಮರ್ಪಿಸಲು ಅನೇಕ ಧಾರ್ಮಿಕ ವಿಧಿವಿಧಾನಗಳು ಶ್ರದ್ಧಾ ಭಕ್ತಿಯಿಂದ ನಡೆಸಲಾಗುತ್ತದೆ. ದೂರದ ಊರುಗಳಿಂದಲೂ ಜಾತ್ರೆ ಸಂದರ್ಭದಲ್ಲಿ ಅಮ್ಮನ ಗುಡಿಗೆ ಭಕ್ತರು ಬಂದು ಪೂಜೆ ಸಲ್ಲಿಸುತ್ತಾರೆ ಎಂದು ತಿಳಿಸಿದರು.

ವಿಶೇಷಚೇತನ ಮಕ್ಕಳ ಫ್ಯಾಷನ್ ಶೋ



ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ 'ವಿಶೇಷ ಚೇತನ ಮಕ್ಕಳ ಫ್ಯಾಷನ್ ಶೋ', 'ತಿರುವು' ಪುಸ್ತಕ ಬಿಡುಗಡೆ ಹಾಗೂ 'ಆದರ್ಶ ಮಹಿಳೆ' ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಿತು.

ಮೈಸೂರು, ಮಾ.2(ಎಂಕೆ)– ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ರೋಟರಿ ಕ್ಲಬ್ ಆಫ್ ಮೈಸೂರ್ ಸ್ಟಾರ್ಸ್, ಆಲ್ ಇಂಡಿಯಾ ಒಬಿಸಿ ರೈಲ್ವೆ ಎಂಪ್ಲಾಯಿಸ್ ಅಸೋಸಿಯೇಷನ್ ವತಿಯಿಂದ ರೀಬಾರ್ನ್ ಫೌಂಡೇಶನ್‌ಗೆ ಧನ ಸಹಾಯಕ್ಕಾಗಿ 'ವಿಶೇಷಚೇತನ ಮಕ್ಕಳ ಫ್ಯಾಷನ್ ಶೋ', 'ತಿರುವು' ಪುಸ್ತಕ ಬಿಡುಗಡೆ ಹಾಗೂ 'ಆದರ್ಶ ಮಹಿಳೆ' ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಭಾನುವಾರ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಮಾತನಾಡಿ, ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ವಿಶೇಷಚೇತನರ ಸಹಾಯಕ್ಕಾಗಿ ಇಂತಹ ಕಾರ್ಯಕ್ರಮಗಳ ಆಯೋಜನೆ ಶ್ಲಾಘನೀಯ. ವಿದ್ಯೆ ಕೊಡುವುದು ಒಂದು ಭಾಗವಾದರೆ, ದಾನದ ಮೂಲಕ ಆರೋಗ್ಯ ನೀಡುವುದು ಮತ್ತೊಂದು ಭಾಗವಾಗಿದೆ. ಭಾರತದಲ್ಲಿ ನೊಂದವರ ಕಷ್ಟಕ್ಕಾಗುವ ದಾನಿಗಳು ಇರುವುದರಿಂದ ನಮ್ಮ ದೇಶದಲ್ಲಿ ಇಂದಿಗೂ ಮಾನವೀಯತೆ. ಒಳ್ಳೆತನ ಎಂಬುದು ಜೀವಂತವಾಗಿದೆ ಎಂದರು.

ನಂತರ ಶ್ರೀನಿಧಿಮೂರ್ತಿ, ಎಂ.ಎಲ್.ಬೀಟಾ, ಪ್ರತಿಮಾ, ಎನ್.ಸರಸ್ವತಿ ಹೊನ್ನಪ್ಪ, ಅನಿತಾ ಪೂವಯ್ಯ, ಜಿ.ವಿ.ಮನೋರಮ ಭಟ್, ಪಿ.ಪುಷ್ಪಲತಾ, ಶಾರದ ಎಸ್.ಮಣಿ, ಡಾ.ಕೆ.ಎನ್.ಸುಷ್ಮಾ, ಡಾ.ಭಾವನ ರಮೇಶ್, ಡಾ.ಕೆ.ಅನುಷಾ ರಾಜ್, ಡಾ.ನೇತ್ರಾವತಿ, ಡಾ.ರೇಣುಕಾ ಬಾಯಿ, ಡಾ.ವಿ.ಎಸ್.ಕಲಾವತಿ ಅವರಿಗೆ ರೋಟರಿ ಮೈಸೂರ್ ಸ್ಟಾರ್ಸ್ ಆದರ್ಶ ಮಹಿಳೆ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ಬಳಿಕ ಬಣ್ಣ ಬಣ್ಣ ವಸ್ತ್ರವಿನ್ಯಾಸದೊಂದಿಗೆ ಕಂಗೊಳಿಸುತ್ತಿದ್ದ ವಿಶೇಷಚೇತನ ಮಕ್ಕಳು ತಮ್ಮದೇ ಆಕರ್ಷಕ ಶೈಲಿಗಳಲ್ಲಿ ಕ್ಯಾಟ್ ವಾಕ್ ಮಾಡುವ ಮೂಲಕ ಫ್ಯಾಷನ್ ಶೋ ನಡೆಸಿಕೊಟ್ಟರು. ಮಕ್ಕಳ ರಂಗು ರಂಗಿನ ನಡಿಗೆಗೆ ನೆರೆದಿದ್ದವರು ಶಿಳ್ಳೆ–ಚಪ್ಪಾಳೆ ಸುರಿಮಳೆಗೈದರು.

ರೋಟರಿ ಜಿಲ್ಲಾ ಗವರ್ನರ್ ವಿಕ್ರಂ ದತ್ತ, ಪ್ರಕಾಶ್ ಕಾರಂತ್, ಯಶಸ್ವಿ ಸೋಮಶೇಖರ್, ವೈಗೋವರ್ಧನ್, ರೋಟರಿ ಜೋನ್–8ರ ಸಹಾಯಕ ಗವರ್ನರ್ ಎಂ.ರಾಜೀವ್, ವಲಯ ಸೇನಾನಿ ಡಾ.ಬಿ.ಚಂದ್ರ, ಹರೀಶ್ ಮತ್ತಿತರರು ಉಪಸ್ಥಿತರಿದ್ದರು.

'ಪಾತಂಜಲ ಯೋಗದರ್ಶನ' ಕೃತಿ ಬಿಡುಗಡೆ

ಮೈಸೂರು, ಮಾ.2(ಎಂಕೆ)– ಹಿರಿಯ ಯೋಗಾಚಾರ್ಯ ವಿ.ಸೋಮಶೇಖರ್ ರಚಿತ ಹಿಮಾಲಯ ಪ್ರತಿಷ್ಠಾನ ಪ್ರಕಟಿಸಿರುವ 'ಪಾತಂಜಲ ಯೋಗದರ್ಶನ' ಕೃತಿಯನ್ನು ಭಾನುವಾರ ಲೋಕಾರ್ಪಣೆಗೊಳಿಸಲಾಯಿತು.



ಹಿರಿಯ ಯೋಗಾಚಾರ್ಯ ವಿ.ಸೋಮಶೇಖರ್ ರಚಿತ 'ಪಾತಂಜಲ ಯೋಗದರ್ಶನ' ಕೃತಿಯನ್ನು ಶಾಸಕ ಟಿ.ಎಸ್.ಶ್ರೀವತ್ಸ ಭಾನುವಾರ ಲೋಕಾರ್ಪಣೆಗೊಳಿಸಿದರು.

ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ನಮೋ ಯೋಗ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ಯೋಗ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಕೃತಿ ಲೋಕಾರ್ಪಣೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ಯೋಗ ನಗರಿ ಎಂದೇ ಗುರ್ತಿಸಿಕೊಂಡಿರುವ ಮೈಸೂರಿಗೆ ದೇಶ–ವಿದೇಶಗಳಿಂದ ಯೋಗಾಭ್ಯಾಸಕ್ಕೆ ಬರುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲಿದೆ. ಇದರಿಂದ ಆಯಾ ಯೋಗ ಶಿಕ್ಷಣ ಕೇಂದ್ರಗಳ ಸುತ್ತ–ಮುತ್ತಲಿನ ಸ್ಥಳೀಯ ನಿವಾಸಿಗಳು ಕೂಡ ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಲು ಸಾಧ್ಯವಾಗುತ್ತಿದೆ. ಮೈಸೂರಿನಲ್ಲಿ ಯೋಗಾಭ್ಯಾಸ ಮಾಡಿದವರು, ರಾಜ್ಯ, ದೇಶ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಭಾರತದ ಮೂಲಕ ಇಡೀ ವಿಶ್ವವೇ ಇಂದು ಯೋಗಾ ದಿನವನ್ನು ಆಚರಿಸುತ್ತಿದೆ. ಜೂನ್ ತಿಂಗಳಿನಲ್ಲಿ ಬರುವ ಅಂತಾ ರಾಷ್ಟ್ರೀಯ ಯೋಗಾ ದಿನಾಚರಣೆಯಂದು ಸ್ವತಃ ಭಾಗವಹಿಸಿ, ಯೋಗಾಭ್ಯಾಸ ಮಾಡಬೇಕು ಎಂದುಕೊಂಡಿದ್ದೇನೆ. ಹಾಗೆಯೇ ಕ್ಷೇತ್ರದ ಎಲ್ಲಾ ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಯೋಗಾ ಹಾಗೂ ಇನ್ನಿತರೆ ವಿಷಯಗಳ ಪುಸ್ತಕಗಳನ್ನು ವಿತರಣೆ ಮಾಡಬೇಕು. ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿ ಮಾಡಬೇಕು ಎಂಬ ಮಹತ್ವದ ಯೋಜನೆ ಹಾಕಿಕೊಂಡಿದ್ದೇನೆ ಎಂದು ತಿಳಿಸಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಯೋಗಾಭ್ಯಾಸದಿಂದ ದೇಹ ಮತ್ತು ಮನಸ್ಸಿನ ಆರೋಗ್ಯ ವೃದ್ಧಿಸುತ್ತದೆ. ವಿಶ್ವದಲ್ಲಿ ಸುಮಾರು ಶೇ.30 ರಷ್ಟು ಜನರು ದೀರ್ಘ ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದು, ಯೋಗಾಭ್ಯಾಸದಿಂದ ಉಸಿರಾಟದ ಸಮಸ್ಯೆ ದೂರಾಗಲಿದೆ. ವಿಶ್ವವೇ ಯೋಗದತ್ತ ಮುಖ ಮಾಡಿರುವುದರಲ್ಲಿ ಭಾರತ ಹಿರಿಮೆ ಇದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಂತರ ಕೃತಿ ಕುರಿತು ಸಂಸ್ಕೃತ ವಿದುಷಿ ಡಾ.ಕೆ.ಲೀಲಾ ಪ್ರಕಾಶ್ ಮಾತನಾಡಿದರು. ಇದೆ ವೇಳೆ ಹಿರಿಯ ಯೋಗಾಚಾರ್ಯ ವಿ.ಸೋಮಶೇಖರ್ ಸನ್ಮಾನಿಸಿ ಗೌರವಿಸಲಾಯಿತು. ನಗರಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್, ಮೈಸೂರು ಯೋಗ ಅಸೋಸಿಯೇಷನ್ ಅಧ್ಯಕ್ಷ ಡಾ.ಸಿ.ರಮೇಶ್ ಶೆಟ್ಟಿ, ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಕೆ.ಜಿ.ದೇವರಾಜ್, ಜಿಲ್ಲಾ ಕಸಾಪ ಉಪಾಧ್ಯಕ್ಷ ಎನ್.ಅನಂತ್, ಮೈಸೂರು ಯೋಗ ಅಸೋಸಿಯೇಷನ್ ಉಪಾಧ್ಯಕ್ಷರಾದ ಆಶಾದೇವಿ, ಎಸ್.ಪಶುಪತಿ ಮತ್ತಿತರರು ಉಪಸ್ಥಿತರಿದ್ದರು.

> ವಿಧಾನಸೌಧದಲ್ಲಿ ನಡೆಯುತ್ತಿರುವ ಪುಸ್ತಕ ಮೇಳದಲ್ಲಿ ಶಾಸಕರಿಗೆ 2 ಲಕ್ಷದವರೆಗೆ ಪುಸ್ತಕ ಖರೀದಿಗೆ ಅವಕಾಶ ವಿದ್ದು, ಕ್ಷೇತ್ರದಲ್ಲಿನ 31 ಸರ್ಕಾರಿ ಶಾಲೆಗಳಿಗೆ ಬರುವ 15 ದಿನದೊಳಗೆ ಪುಸ್ತಕ ನೀಡಲು ಸಿದ್ಧತೆ ನಡೆಸಲಾಗಿದೆ. ಸರ್ಕಾರಿ ಶಾಲೆಯಲ್ಲಿ ಯಾವುದೇ ಕುಂದು ಕೊರತೆಗಳಿದ್ದರೂ ನಿವಾರಿಸಬೇಕು ಎಂಬ ಪ್ರಯತ್ನ ಮಾಡುತ್ತಿದ್ದೇವೆ. ಸಾರ್ವಜನಿಕರ ಸಹಭಾಗಿತ್ವದಲ್ಲಿ ಇದು ಸಾಧ್ಯ.
> - **ಟಿ.ಎಸ್.ಶ್ರೀವತ್ಸ**, ಶಾಸಕ

ಬೆಂಗಳೂರಿನಲ್ಲಿ ಹೆಚ್.ಡಿ.ದೇವೇಗೌಡರ ನೇತೃತ್ವದಲ್ಲಿ ಜೆಡಿಎಸ್ ಮಹತ್ವದ ಸಭೆ

ಪಕ್ಷದ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ. ದೇವೇಗೌಡ ಮತ್ತೆ ಗೈರು

ಬೆಂಗಳೂರು, ಮಾ.2– ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡರು ಹಾಗೂ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಭಾನುವಾರ ಜೆಡಿಎಸ್ ಪಕ್ಷದ ಮಹತ್ವದ ನಡೆಯಿತು.

ಪಕ್ಷದ ದ್ವೈವಾರ್ಷಿಕ ಚುನಾವಣೆ, ಸದಸ್ಯತ್ವ ಅಭಿಯಾನ ಹಾಗೂ ಮುಂಬರುವ ತಾಲೂಕು–ಜಿಲ್ಲಾ ಪಂಚಾಯಿತಿ ಚುನಾವಣೆ, ವಿಧಾನಮಂಡಲ ಕಲಾಪದಲ್ಲಿ ಅನುಸರಿಸಬೇಕಾದ ಕಾರ್ಯತಂತ್ರ ಇತ್ಯಾದಿ ಅಂಶಗಳ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆಸಲಾಯಿತು. ಆದರೆ, ಇಂದಿನ ಸಭೆಯಲ್ಲೂ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಶಾಸಕ ಜಿ.ಟಿ. ದೇವೇಗೌಡ ಗೈರಾಗಿದ್ದರು.

ಸಭೆಯಲ್ಲಿ ರಾಜ್ಯದ ಉದ್ದಗಲಕ್ಕೂ ಪಕ್ಷದ ವತಿಯಿಂದ ಸದಸ್ಯತ್ವ ಅಭಿಯಾನವನ್ನು ಮತ್ತೊಂದು ಹಂತಕ್ಕೆ ತೆಗೆದುಕೊಂಡು ಹೋಗುವ ಬಗ್ಗೆ ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮುಖಂಡರ ಜೊತೆ ತಮ್ಮದೇ ಆದ ಪರಿಕಲ್ಪನೆಗಳನ್ನು ಹಂಚಿಕೊಂಡರು. ಸದಸ್ಯತ್ವ ಅಭಿಯಾನಕ್ಕೆ ಮತ್ತಷ್ಟು ವೇಗ ನೀಡಬೇಕು. ಶಾಸಕರು, ಮಾಜಿ ಶಾಸಕರು, ಹಿರಿಯ ಮುಖಂಡರು, ಎರಡನೇ ಹಂತದ ನಾಯಕರು ಹಾಗೂ ಕಾರ್ಯಕರ್ತರು ದೊಡ್ಡ ಪ್ರಮಾಣದಲ್ಲಿ ಸದಸ್ಯತ್ವ ನೋಂದಣಿ ಅಭಿಯಾನದಲ್ಲಿ ಪಾಲ್ಗೊಳ್ಳಬೇಕು ಎಂದು ಹೇಳಿದರು.

ಇದಕ್ಕೆ ಸ್ಪಂದಿಸಿದ ಮಾಜಿ ಪ್ರಧಾನಿ ದೇವೇಗೌಡ ಹಾಗೂ ಕೇಂದ್ರ ಸಚಿವ ಕುಮಾರಸ್ವಾಮಿ ಅವರು, ಸದಸ್ಯತ್ವ ನೋಂದಣಿಯನ್ನು ಎಲ್ಲಾ ಮುಖಂಡರು ಗಂಭೀರವಾಗಿ ಪರಿಗಣಿಸಬೇಕು. ಸಂಘಟನೆಯ ಬಗ್ಗೆ ಅಸಡ್ಡೆ ಬೇಡ ಎಂದು ಕಿವಿ ಮಾತು ಹೇಳಿದರು. ಹಿಂದೆ ಇಪ್ಪತ್ತಮೂರು ಜಿಲ್ಲೆಗಳು ಇದ್ದವು. ನಾನು ಪ್ರತಿ ಜಿಲ್ಲೆ ತಾಲೂಕಿನಲ್ಲಿ ಪ್ರವಾಸ ಮಾಡಿದ್ದೇನೆ. ಕಷ್ಟಪಟ್ಟು ಪಕ್ಷ ಕಟ್ಟಿದ್ದೇನೆ. ಈಗಲೂ ಓಡಾಟ ಮಾಡುತ್ತಿದ್ದೇನೆ. ಪಕ್ಷ ಕಟ್ಟೋದು ಸುಲಭದ ಕೆಲಸವಲ್ಲ. ಹೀಗಾಗಿ ಯಾರೊಬ್ಬರೂ ಸಂಘಟನೆಯನ್ನು ಲಘುವಾಗಿ ತೆಗೆದುಕೊಳ್ಳುವುದು ಬೇಡ ಎಂದು ಮಾಜಿ ಪ್ರಧಾನಿಗಳು ಮುಖಂಡರಿಗೆ ತಾಕೀತು ಮಾಡಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರಾದ ಸುರೇಶ್ ಬಾಬು, ಬಿ.ಎಂ. ಫಾರೂಕ್, ಜೆಡಿಎಸ್ ರಾಜ್ಯ ಮಹಿಳಾ ಅಧ್ಯಕ್ಷೆ ರಶ್ಮಿ ರಾಮೇಗೌಡ, ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಬಂಡೆಪ್ಪ ಕಾಶೆಂಪೂರ್, ಹೆಚ್.ಕೆ. ಕುಮಾರಸ್ವಾಮಿ, ಮಾಜಿ ಶಾಸಕರಾದ ರಾಜಾ ವೆಂಕಟಪ್ಪ ನಾಯಕ, ಡಾ. ಕೆ.ಅನ್ನದಾನಿ, ಕೆ.ಎ. ತಿಪ್ಪೇಸ್ವಾಮಿ ಮುಂತಾದವರು ಸಭೆಯಲ್ಲಿ ಪಾಲ್ಗೊಂಡರು.

ಆದರೆ ಕೆಲವು ದಿನಗಳಿಂದ ಪಕ್ಷದಿಂದ ಅಂತರ ಕಾಯ್ದುಕೊಂಡಿರುವ ಜಿ.ಟಿ.ದೇವೇಗೌಡ ಇಂದಿನ ಸಭೆಯಲ್ಲೂ ಪಾಲ್ಗೊಳ್ಳಲಿಲ್ಲ. ಈ ಹಿಂದೆ ಜೆಡಿಎಸ್ ನೂತನ ರಾಜ್ಯಾಧ್ಯಕ್ಷ ಆಯ್ಕೆ ವೇಳೆ ನಡೆದ ಸಭೆಯಿಂದಲೂ ಅವರು ದೂರ ಉಳಿದಿದ್ದರು.

ಜ್ಞಾನ ವಿಜ್ಞಾನ ದಿವ್ಯ ದರ್ಶನ ಮೇಳ ಸಂಪನ್ನ

ನಿಮ್ಮ ತಂದೆ-ತಾಯಿಯಲ್ಲಿ ಕಾಶಿ ವಿಶ್ವನಾಥನ ಪ್ರತಿರೂಪ ಕಾಣಬೇಕು: ನಿವೃತ್ತ ಪೊಲೀಸ್ ಅಧಿಕಾರಿ ಶಂಕರ ಎಂ.ಬಿದರಿ



ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯ ಮೈಸೂರು ಘಟಕದ ವತಿಯಿಂದ ಆಯೋಜಿಸಿದ್ದ ಹನ್ನೆರಡು ದಿನಗಳ 'ಜ್ಞಾನ ವಿಜ್ಞಾನ ದಿವ್ಯ ದರ್ಶನ ಮೇಳ'ದ ಸಮಾರೋಪದಲ್ಲಿ ಬೇಲಿಮಠದ ಶ್ರೀ ಶಿವರುದ್ರಸ್ವಾಮೀಜಿ ಮಾತನಾಡಿದರು. ಈ ವೇಳೆ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ರಾಜ್ಯ ಘಟಕದ ಅಧ್ಯಕ್ಷ ಶಂಕರ ಎಂ.ಬಿದರಿ, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ ಉಪಸ್ಥಿತರಿದ್ದರು.

ಮೈಸೂರು, ಮಾ.2(ಎಸ್‌ಪಿಎನ್)– ತ್ರಿಮೂರ್ತಿ ಶಿವಜಯಂತಿ ಮಹೋತ್ಸವದ ಪ್ರಯುಕ್ತ 'ಜ್ಞಾನ ವಿಜ್ಞಾನ ದಿವ್ಯ ದರ್ಶನ ಮೇಳ'ದಲ್ಲಿ ವಾರಣಾಸಿಯ 'ಕಾಶಿ ವಿಶ್ವನಾಥ ಮಂದಿರದ ಮಾದರಿ ಪ್ರತಿರೂಪ', ನವ ಚೈತನ್ಯ ದೇವಿಯರ ದರ್ಶನ, ದ್ವಾದಶ ಜ್ಯೋತಿರ್ಲಿಂಗವನ್ನು ಸಾವಿರಾರು ಮಂದಿ ದರ್ಶನ ಪಡೆಯುವ ಮೂಲಕ ಸಂಪನ್ನಗೊಂಡಿತು.

ಮೈಸೂರು–ಹುಣಸೂರು ರಸ್ತೆಯ ಭಾರತೀಯ ವಿದ್ಯಾಭವನ ಮುಂಭಾಗದಲ್ಲಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯ ಮೈಸೂರು ಘಟಕದ ವತಿಯಿಂದ ಆಯೋಜಿಸಿದ್ದ ಹನ್ನೆರಡು ದಿನಗಳ 'ಜ್ಞಾನ ವಿಜ್ಞಾನ ದಿವ್ಯ ದರ್ಶನ ಮೇಳ' ಭಾನುವಾರ ಭಕ್ತಿಪೂರ್ವಕವಾಗಿ ಸಂಪನ್ನಗೊಂಡಿತು.

ಸಮಾರೋಪದಲ್ಲಿ ಭಾಗವಹಿಸಿದ್ದ ನಿವೃತ್ತ ಪೊಲೀಸ್ ಮಹಾನಿರ್ದೇಶಕರೂ ಆದ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ರಾಜ್ಯ ಘಟಕದ ಅಧ್ಯಕ್ಷ ಶಂಕರ ಎಂ.ಬಿದರಿ ಮಾತನಾಡಿ, ಪರಮಾತ್ಮ ಜಗತ್ತಿನ ಕಣಕಣದಲ್ಲೂ ಇದ್ದಾನೆ. ಪರಮಾತ್ಮ ಇಲ್ಲದ ವಸ್ತು, ಸ್ಥಳಗಳೇ ಇಲ್ಲ. ಹಾಗಾಗಿ ನಿಮ್ಮ ಮನೆಯಲ್ಲಿರುವ ತಂದೆ–ತಾಯಿಯನ್ನೇ ಈಶ್ವರ–ಪಾರ್ವತಿ ಎಂದು ಭಾವಿಸಿ ಪೂಜಿಸುವಂತೆ ಯುವಕರಿಗೆ ಕಿವಿ ಮಾತು ಹೇಳಿದರು.

ನನ್ನ ವೃತ್ತಿ ಜೀವನದಲ್ಲಿ ಅನೇಕ ಕಷ್ಟ–ಸುಖದ ದಿನಗಳಲ್ಲೂ ಕಂಡಿದ್ದೇನೆ. ಒಳ್ಳೆಯ ಸಮಾಜ ನಿರ್ಮಾಣಕ್ಕಾಗಿ ಸಮಾಜ ಘಾತುಕರನ್ನು ಕೊನೆಗಾಣಿಸಿದ್ದೇನೆ. ಈ ವೇಳೆ ನನ್ನ ಜೀವ ಉಳಿದಿರುವುದು ನಿಮ್ಮಂತಹ ಲಕ್ಷಾಂತರ ಮಂದಿಯ ಪ್ರಾರ್ಥನೆಯಿಂದ ಎಂದ ಬಿದರಿ ಅವರು, ವೃತ್ತಿ ಜೀವನದ ಕಠಿಣ ಸಂದರ್ಭದಲ್ಲಿ ನನ್ನ ಮುಂದೆ–ಹಿಂದೆ, ಅಕ್ಕ–ಪಕ್ಕ ಇದ್ದವರೂ ಹತರಾದರೂ ಆದರೆ, ನಾನು ಗಟ್ಟಿಯಾಗಿ ಉಳಿಯಲು ನಿಮ್ಮಂತಹವರು ಪ್ರಾರ್ಥಿಸಿದ ಫಲವಾಗಿ ನಿಮ್ಮ ಮುಂದೆ ಜೀವಂತವಾಗಿದ್ದೇನೆ ಎಂದರೆ ತಪ್ಪಾಗಲಾರದು ಎಂದರು.

ಉತ್ತಮ ಆಧ್ಯಾತ್ಮ ಸೇವೆಗೆ ಬ್ರಹ್ಮಕುಮಾರಿಯರ ಪಾತ್ರವಿದೆ: 'ಜ್ಞಾನ ವಿಜ್ಞಾನ ದಿವ್ಯ ದರ್ಶನ ಮೇಳ'ದಲ್ಲಿ ವಾರಣಾಸಿಯ 'ಕಾಶಿ ವಿಶ್ವನಾಥ ಮಂದಿರದ ಮಾದರಿ ಪ್ರತಿರೂಪ', ನವಚೈತನ್ಯ ದೇವಿಯರ ದರ್ಶನ, ದ್ವಾದಶ ಜ್ಯೋತಿರ್ಲಿಂಗದ ಪ್ರತಿರೂಪವನ್ನು ಸ್ಥಾಪಿಸಿ, ಹನ್ನೆರಡು ದಿನಗಳು ಯಾವುದೇ ದೇಣಿಗೆಯನ್ನು ಸ್ವೀಕರಿಸದೇ ಸಾವಿರಾರು ಮಂದಿಗೆ ದೇವರ ದರ್ಶನ ಮಾಡಿಸಿದ್ದಾರೆ. ಇದರ ಹಿಂದೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿವಿಯ ಮಹಿಳಾ ಸ್ವಾಧಿಗಳ ಶ್ರಮವಿದೆ. ಪ್ರಾಮಾಣಿಕ ದುಡಿಮೆಯಿದೆ ಎಂದು ಬಣ್ಣಿಸಿದರಲ್ಲದೆ, ಈಶ್ವರೀಯ ವಿವಿಯ ಮೈಸೂರು ವಲಯ ಸಂಚಾಲಕರಾದ ರಾಜಯೋಗಿನಿ ಲಕ್ಷ್ಮೀಜಿ ಅವರು ಲಕ್ಷಾಂತರ ಮಂದಿಗೆ ಈ ಮೇಳದ ಮೂಲಕ ಆಧ್ಯಾತ್ಮ ಜಾಗೃತಿಗೊಳಿಸಿರುವುದು ಅಪರಿಮಿತ ಸಾಧನೆ. ನಮ್ಮ ಕಾಯಕದಲ್ಲಿ ದೇವರಿದ್ದಾನೆ ಎಂದು ನಂಬುವುದಾದರೆ, 140 ಕೋಟಿ ಜನರೂ ತಮ್ಮ ದುಡಿಮೆ ಮೂಲಕ ದೈವೀ ಗುಣ ಬೆಳೆಸಿಕೊಳ್ಳಬಹುದು ಎಂದು ಹೇಳಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ಬೇಲಿಮಠದ ಶ್ರೀ ಶಿವರುದ್ರ ಸ್ವಾಮೀಜಿ ಮಾತನಾಡಿ, ಜೀವನದಲ್ಲಿ ಯಾರೂ ಚಿರಂಜೀವಿಗಳಲ್ಲ. ಇಲ್ಲಿಯೇ ಇರಬೇಕೆಂದೂ ಯಾರೂ ಬಂದಿಲ್ಲ. ಒಂದಿಲ್ಲೊಂದು ದಿನ ಈ ಭೂಮಿಯಿಂದ ಜಾಗ ಖಾಲಿ ಮಾಡಲೇಬೇಕು. ಸಾವು ನಿಜವೆಂದ ಮೇಲೆ ಸಾಧನೆಯ ಶರಣರಾಗಿಯೇ ಜೀವ ಬಿಡಬೇಕು ಎಂದು ಅಭಿಪ್ರಾಯಪಟ್ಟರು.

ಮೈಸೂರು ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ಮಾತನಾಡಿ, ಇಡೀ ಜಿಲ್ಲೆಯ ಅಧಿಕಾರಿ, ಸಿಬ್ಬಂದಿಗಳ ಪ್ರತಿನಿಧಿಯಾಗಿ ಬಂದಿದ್ದೇನೆ. ನಾವು ಯಾವುದೇ ಧರ್ಮ, ಜಾತಿ ಎಂಬುದನ್ನು ನೋಡದೆ ಅದರಿಂದ ಹೊರಗಿದ್ದು, ನಾವೆಲ್ಲರೂ ಒಂದೇ. ಆತ್ಮವೇ ದೇಹ ದೇಗುಲ ಎಂಬ ಮನೋಭಾವನೆಯಲ್ಲಿ ಎಲ್ಲರೂ ಇರಬೇಕು ಎಂದು ಕಿವಿಮಾತು ಹೇಳಿದರು. ವೇದಿಕೆಯಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ, ವಿರಾಜಪೇಟೆ ಅರಮೇರಿ ಕಳಂಚೇರಿ ಮಠದ ಶ್ರೀ ಶಾಂತಮಲ್ಲಿಕಾರ್ಜುನ ಮಹಾಸ್ವಾಮೀಜಿ, ನ್ಯಾಯಾಧೀಶರಾದ ಎಸ್.ರೇಖಾ ಸೇರಿದಂತೆ ಈಶ್ವರೀಯ ವಿವಿಯ ಪದಾಧಿಕಾರಿಗಳಿದ್ದರು.

> ನಿವೃತ್ತ ಪೊಲೀಸ್ ಮಹಾನಿರ್ದೇಶಕರಾದ ಶಂಕರ ಎಂ.ಬಿದರಿ ಅವರು, ಸೇವೆಯಲ್ಲಿದ್ದಾಗ ಕಠಿಣ ಸಂದರ್ಭದಲ್ಲಿ ಮಾಡಿರುವ ಕರ್ತವ್ಯ ನಿರ್ವಹಣೆ ಇಂದಿನ ಎಲ್ಲಾ ಅಧಿಕಾರಿ, ಸಿಬ್ಬಂದಿ ವರ್ಗದವರಿಗೆ ಆದರ್ಶ ಪ್ರಾಯವಾಗಿದೆ. ಅವರು ಈ ಜಿಲ್ಲೆಯಲ್ಲಿದ್ದಾಗ ನಿರ್ವಹಿಸಿದ್ದ ಕಠಿಣ ಸಂದರ್ಭವನ್ನು ಎಂದಿಗೂ ಮರೆಯಲಾಗದು. ಪೊಲೀಸ್ ಇಲಾಖೆಯ ಸಾಧಕರ ಪಟ್ಟಿಯನ್ನು ನೆನೆಯುವಾಗ ಅವರ ಹೆಸರು ಹೇಳದೆ ಆ ಪಟ್ಟಿ ಪೂರ್ಣವಾಗುವುದಿಲ್ಲ.
> -**ಪಿ.ಶಿವರಾಜ್**, ಅಪರ ಜಿಲ್ಲಾಧಿಕಾರಿ

ನಕ್ಕರೆ ಅದೇ ಸ್ವರ್ಗ

ಬ್ಯಾಂಕ್ ಮ್ಯಾನೇಜರ್ ಮಲಗಿದ್ದರು....
ಹೆಂಡತಿ : ರೀ ಏಳ್ರೀ... ನಮ್ಮ ಅಪ್ಪ ಅಮ್ಮ ಬಂದಿದ್ದಾರೆ...
ಬ್ಯಾಂಕ್ ಮ್ಯಾನೇಜರ್ : (ನಿದ್ರೆ ಮಂಪರಿನಲ್ಲಿ) ಅವರಿಗೆ ಕ್ಯೂನಲ್ಲಿ ಬರೋಕೇಳು. ಜೊತೆಗೆ ಐಡಿ ಪ್ರೂಫ್ ಇರಲಿ, ಐಡಿ ಇಲ್ಲಂದ್ರೆ ಹೊರಗೆ ಕಳುಹಿಸು

ಮೈಸೂರು ಮಿತ್ರ

ಸೋಮವಾರ, 3 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

'ಬೆಳಗ್ಗೆ ಎದ್ದಾಗ ಯಾರ ತಟ್ಟೆಯಲ್ಲಿ ಅನ್ನ ಇಲ್ಲ, ಅವನು ಭಿಕ್ಷುಕನಲ್ಲ, ಬೆಳಗ್ಗೆ ಎದ್ದಾಗ ಯಾರ ತಲೆಯಲ್ಲಿ ಒಳ್ಳೆಯ ವಿಚಾರಗಳಿಲ್ಲ ಅವರು ಭಿಕ್ಷುಕರು. ಕಾಲಿನಲ್ಲಿ ಬ್ರಾಂಡೆಡ್ ಚಪ್ಪಲಿ ಹಾಕಿಕೊಂಡವರು ದೊಡ್ಡವರಲ್ಲ, ತಲೆಯಲ್ಲಿ ಬ್ರಾಂಡೆಡ್ ವಿಚಾರ ಇದ್ದವರು ದೊಡ್ಡವರಾಗುತ್ತಾರೆ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಊಟ ಬಲ್ಲವನಿಗೆ ರೋಗವಿಲ್ಲ

ನಿಮ್ಮ ಪತ್ರಗಳು

■ ಪೊಲೀಸ್ ತರಬೇತಿ ಶಾಲೆ ಮುಂದೆ ಬಿದ್ದಿರುವ ಗಾಜಿನ ಚೂರು ತೆರವುಗೊಳಿಸಿ

ಮಾನ್ಯರೇ,

ಮೈಸೂರು ನಗರದ ಪೊಲೀಸ್ ಆಯುಕ್ತರ ನಿವಾಸದ ಪಕ್ಕದಲ್ಲಿ ಹಾದು ಹೋಗುವ ರಸ್ತೆಯಾದ ಕೇಂದ್ರೀಯ ವಿದ್ಯಾಲಯದ ರಸ್ತೆಯಲ್ಲಿ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಹಾಗೂ ಪೊಲೀಸ್ ತರಬೇತಿ ಶಾಲೆ ಮುಂದೆ ಸುಮಾರು 3–4 ತಿಂಗಳ ಹಿಂದೆ ಬಹುಶಃ ವಾಹನಗಳು ಅಪಘಾತಕ್ಕೀಡಾಗಿ ವಾಹನದ ಗಾಜಿನ ಚೂರುಗಳು ರಸ್ತೆಯ ಒಂದು ಬದಿಯಲ್ಲಿ ಬಿದ್ದಿದೆ. ಗಾಜಿನ ಚೂರುಗಳು ಬಿದ್ದಿ ರುವ ಸ್ಥಳ ತಿರುವಿನಲ್ಲಿದೆ. ಈ ರಸ್ತೆಯಲ್ಲಿ ಬಹಳ ಜನರು ವಾಯುವಿಹಾರ ಮಾಡುತ್ತಾರೆ. ಉನ್ನತ ಹುದ್ದೆಯಲ್ಲಿರುವ ಪೊಲೀಸರ ವಾಹನಗಳು ಮತ್ತು ಸಾರ್ವಜನಿಕರ ವಾಹನಗಳು, ಕೇಂದ್ರೀಯ ಶಾಲಾ ವಾಹನಗಳು ಸದಾ ಓಡಾಡುತ್ತಿರುತ್ತವೆ. ಒಂದು ವೇಳೆ ವಾಹನದ ಚಕ್ರದ ಟೈರ್‌ಗಳಿಗೆ ಗಾಜಿನ ಚೂರುಗಳು ಚುಚ್ಚಿದರೂ ಅನಾಹುತವಾಗುವ ಸಾಧ್ಯತೆ ಇದೆ. ಪೊಲೀಸ್ ತರಬೇತಿ ಶಾಲೆಯ ಉನ್ನತ ಅಧಿಕಾರಿಗಳು ಸಂಬಂಧಪಟ್ಟವರ ಗಮನಕ್ಕೆ ತರದೇ ಇರುವುದು ಬೇಸರದ ಸಂಗತಿ. ಕಾರಣ ಇಂದು ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ಅಧಿಕಾರಿಗಳಾಗುತ್ತಾರೆ. ತರಬೇತುದಾರರು ಇಂತಹ ವಿಷಯಗಳನ್ನು ಸಾಮಾಜಿಕ ಕಾಳಜಿಯಿಂದ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ತಿಳಿಸಿದರೆ ಮುಂದೆ ಇವರುಗಳಿಗೆ ಕರ್ತವ್ಯದಲ್ಲಿ ಸಾಮಾಜಿಕ ಕಾಳಜಿ ರೂಢಿಸಿಕೊಳ್ಳಬಹುದು. ಈ ಸ್ಥಳದಲ್ಲಿ ಬಿದ್ದಿರುವ ಗಾಜಿನ ಚೂರುಗಳನ್ನು ಮಹಾನಗರ ಪಾಲಿಕೆ ಶೀಘ್ರವಾಗಿ ತೆರವುಗೊಳಿಸುವಂತೆ ಮನವಿ.

–ಎಂ.ಎನ್.ಧರಣಿ ವೆಂಕಟೇಶ್, ಸಾಮಾಜಿಕ ಕಾರ್ಯಕರ್ತ, ಮೈಸೂರು.

■ ಆಹಾರ ತಯಾರಿಕೆ ವೇಳೆ ಪ್ಲಾಸ್ಟಿಕ್ ಬಳಕೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಿ

ಮಾನ್ಯರೆ,

ಕರ್ನಾಟಕ ಸರಕಾರ ಪ್ಲಾಸ್ಟಿಕ್ ಬಳಕೆ ನಿಷೇಧ ಮಾಡಿರುವುದು ಸ್ವಾಗತಾರ್ಹ. ನಿಷೇಧ ತೀರ್ಮಾನ ಕೈಗೊಂಡಿದ್ದರೂ ಕೂಡ ಕೆಲವು ಆಹಾರ ತಯಾರಿಕೆಯಲ್ಲಿ ಪ್ಲಾಸ್ಟಿಕ್ ಬಳಕೆ ಮಾಡುವುದು ಅಲ್ಲಲ್ಲಿ ಕಂಡು ಬರುತ್ತಿದೆ. ಪ್ಲಾಸ್ಟಿಕ್ ಬಳಸಿ ಆಹಾರ ತಯಾರು ಮಾಡುವ ಕ್ರಮ ಕ್ಯಾನ್ಸರ್ ಮಾರಕ ರೋಗಕ್ಕೆ ಹತ್ತಿರವಾಗುತ್ತದೆ ಎಂದು ಗೊತ್ತಿದ್ದರೂ ಕೆಲವರು ಬಳಕೆ ಮಾಡಿ ಆಹಾರ ತಯಾರಿಸುತ್ತಾರೆ. ಬಳಕೆ ಮಾಡಿ ಬಿಸಾಡಿದ ಪ್ಲಾಸ್ಟಿಕ್ ಅನ್ನು ಪ್ರಾಣಿಗಳು ತಿಂದು ಅನಾರೋಗ್ಯಕ್ಕೆ ತುತ್ತಾಗಿರುವುದುಂಟು ಮತ್ತು ಕೆಲವರು ರಸ್ತೆ ಬದಿಯಲ್ಲಿ ಪ್ಲಾಸ್ಟಿಕ್ ಅನ್ನು ಸುಟ್ಟಾಗ ವಿಷಕಾರಿ ಅನಿಲ ಹೊಗೆಯು ಅನಾರೋಗ್ಯವನ್ನು ಉಂಟುಮಾಡುತ್ತದೆ. ಈ ಪ್ಲಾಸ್ಟಿಕ್ ಅನ್ನು ಎಲ್ಲೆಂದರಲ್ಲಿ ಬಿಸಾಡುವುದರಿಂದ ವಾತಾವರಣ ಕಲುಷಿತಗೊಳ್ಳುತ್ತದೆ ಎನ್ನುವುದನ್ನು ಮರೆಯಬಾರದು. ಇದು ಬೇರೆ ವಸ್ತುವಿನಂತೆ ಬೇಗ ಕೊಳೆಯುವುದಿಲ್ಲ. ಒಂದು ಪ್ಲಾಸ್ಟಿಕ್ ಕೊಳೆಯಲು ಎಷ್ಟೋ ವರ್ಷಗಳು ಬೇಕಾಗುತ್ತದೆ ಅಂತ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಇಂತಹ ಮಾರಕವಾದ ಪ್ಲಾಸ್ಟಿಕ್ ಅನ್ನು ಸರ್ಕಾರ ನಿಷೇಧ ಮಾಡಿರುವುದು ಸ್ವಾಗತಾರ್ಹ. ಇದನ್ನು ಬಳಕೆ ಮಾಡುವವರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಲಿ. –ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

■ ವಿಜಯನಗರ 4ನೇ ಹಂತ ಕಸಮುಕ್ತವಾಗಿಸೋಣ

ಮಾನ್ಯರೆ,

ಮೈಸೂರಿನ ವಿಜಯನಗರ 4ನೇ ಹಂತ ಒಂದು ಪ್ರತಿಷ್ಠಿತ ಬಡಾವಣೆ. ಈ ಬಡಾವಣೆಯನ್ನು ವಿಜಯನಗರ 4ನೇ ಹಂತದ ಎಲ್ಲಾ ನಾಗರಿಕರು ಕಸಮುಕ್ತವಾಗಿಸಲು ಪಣ ತೊಡೋಣ. ಪ್ರಸ್ತುತ ವಿಜಯನಗರ 4ನೇ ಹಂತ, ಹೂಟಗಳ್ಳಿ ನಗರಸಭೆಗೆ ಒಳಪಟ್ಟಿದ್ದು, ಈ ಬಡಾವಣೆಯ ನಿರ್ವಹಣೆಯನ್ನು ಹೂಟಗಳ್ಳಿ ನಗರಸಭೆಯೇ ನಿರ್ವಹಿಸುತ್ತಿದೆ. ಪ್ರತಿ ಮೂರು ದಿನಕ್ಕೊಮ್ಮೆ ಹೂಟಗಳ್ಳಿ ನಗರಸಭೆಯ ವಾಹನ ಕಸವನ್ನು ಬೀದಿ ಬದಿಗಳಲ್ಲಿ ಸಂಚರಿಸಿ ಪಡೆಯುತ್ತಿದ್ದಾರೆ. ಇಷ್ಟಿದ್ದರೂ ರಸ್ತೆಗಳಲ್ಲಿ ಕಸ ಎಸೆಯುವುದನ್ನು ಬಡಾವಣೆಯ ಪ್ರಜ್ಞಾವಂತ ನಾಗರಿಕರು ನಿಲ್ಲಿಸಬೇಕು. ಪ್ರಸ್ತುತ ವಿಜಯನಗರ 4ನೇ ಹಂತದ ಎಲ್ಲಾ ರಸ್ತೆಗಳು ಕಸದ ತೊಟ್ಟಿಗಳಾಗಿವೆ. ಎಲ್ಲಾ ಕಡೆಯೂ ಪ್ಲಾಸ್ಟಿಕ್ ಚೀಲಗಳು ಹಾರಾಡುತ್ತಿವೆ. ಅಲ್ಲದೆ ಕಸ ಸಂಗ್ರಹಣೆಗೆ ಹೆಚ್ಚುವರಿ ವಾಹನಗಳ ವ್ಯವಸ್ಥೆ ಮಾಡಿಸುವುದಾಗಿ ಈ ಭಾಗದ ಶಾಸಕರಾದ ಜಿ.ಟಿ.ದೇವೇಗೌಡರು ಆಶ್ವಾಸನೆ ನೀಡಿದ್ದಾರೆ. ಅಂತೆಯೇ ಹೂಟಗಳ್ಳಿ ಪೌರಾಯುಕ್ತರು ಕೂಡ ಎರಡು ತಿಂಗಳಲ್ಲಿ ತ್ವರಿತ ಕಸ ವಿಲೇವಾರಿ ಹಾಗೂ ಬೀದಿ ದೀಪಗಳ ವ್ಯವಸ್ಥೆ ಆಗುವುದಾಗಿ ತಿಳಿಸಿ ಕಸ ವಿಲೇವಾರಿ ಬಗ್ಗೆ ಜನಜಾಗೃತಿ ಮೂಡಿಸುವಂತೆ ಮನವಿ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಬಡಾವಣೆಯ ನಾಗರಿಕರು ಶಾಸಕರು ಹಾಗೂ ಹೂಟಗಳ್ಳಿ ಪೌರಾಯುಕ್ತರಿಗೆ ಸಹಕಾರ ನೀಡೋಣ.

–ಬಿ.ಜಿ.ರಂಗೇಗೌಡ, ವಿಜಯನಗರ 4ನೇ ಹಂತ, ಮೈಸೂರು.

■ ತಂಗುದಾಣಗಳಿಗೆ ಬೆಳಕಿನ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಮೈಸೂರು ನಗರದ ಹಲವು ಪ್ರಯಾಣಿಕರ ತಂಗುದಾಣಗಳಿಗೆ ಬೆಳಕಿನ ಸೌಲಭ್ಯವಿರುವುದಿಲ್ಲ. ಇದರಿಂದಾಗಿ ಮಹಿಳೆಯರು, ಹಿರಿಯ ನಾಗರಿಕರು ಹಾಗೂ ಸಾರ್ವಜನಿಕರು ಭಯದಿಂದ ಕತ್ತಲಿನಲ್ಲಿಯೇ ಬಸ್ಸಿಗಾಗಿ ಕಾಯುವಂತಾಗಿದೆ. ಮೈಸೂರು ಆಕಾಶವಾಣಿ ಪಕ್ಕದ ಯಾದವಗಿರಿ ಅಂಚೆ ಕಚೇರಿಯ ಎಡಭಾಗ ಮತ್ತು ಎದುರಿನ ತಂಗುದಾಣಗಳು, ಮೈಸೂರು ರೈಲ್ವೆ ನಿಲ್ದಾಣದ ತಂಗುದಾಣಗಳು, ದಾಸಪ್ಪ ವೃತ್ತದ ತಂಗುದಾಣಗಳು, ಕೃಷ್ಣರಾಜೇಂದ್ರ ಆಸ್ಪತ್ರೆ ಬಳಿಯಿರುವ ತಂಗುದಾಣಗಳು, ಅಗ್ರಹಾರ ವೃತ್ತದ ತಂಗುದಾಣಗಳು, ಸಿದ್ದಪ್ಪ ವೃತ್ತದ ತಂಗುದಾಣಗಳು, ವಿಶ್ವೇಶ್ವರನಗರ ಗಣಪತಿ ದೇವಸ್ಥಾನದ ತಂಗುದಾಣ, ವಿಶ್ವೇಶ್ವರನಗರದ ಮಹರ್ಷಿ ಪಬ್ಲಿಕ್ ಶಾಲೆಯ ತಂಗುದಾಣ, ಜೆ.ಪಿ.ನಗರದ ಶನೈಶ್ವರಸ್ವಾಮಿ ದೇವಸ್ಥಾನದ ತಂಗುದಾಣ, ಜೆ.ಪಿ.ನಗರದ ಗೊಬ್ಬಳಿಮರ ತಂಗುದಾಣ, ಜೆ.ಪಿ.ನಗರದ ಕವಿತಾಬೇಕರಿ ತಂಗುದಾಣ ಕತ್ತಲೆಯಿಂದ ಕೂಡಿರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಆದಷ್ಟು ಶೀಘ್ರ ಮೇಲ್ಕಂಡ ತಂಗುದಾಣಗಳಿಗೆ ಬೆಳಕಿನ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಬೇಕೆಂದು ಕಳಕಳಿಯ ಮನವಿ.

–ಸಾವಿತ್ರಮ್ಮ, ನಿವೃತ್ತ ಶಿಕ್ಷಕರು, ಯಾದವಗಿರಿ, ಮೈಸೂರು.

ನೀರಿನ ಕೊರತೆ ನೀಗಿಸಲೇಬೇಕಿದೆ...!



ಮೈಸೂರಿನಿಂದ ಬೆಂಗಳೂರಿನವರೆಗೆ ಶರವೇಗದ ಹೆದ್ದಾರಿ ನಿರ್ಮಾಣವಾಗಿದೆ. ನಗರಗಳ ನಡುವಿನ ಅಂತರದಲ್ಲಿ ವ್ಯತ್ಯಾಸ ಇಲ್ಲದಿದ್ದರೂ ಪ್ರಯಾಣದ ಸಮಯ ಉಳಿತಾಯವಾಗಿದೆ. ನಾವು ದೊಡ್ಡ ದೊಡ್ಡ ರಸ್ತೆಗಳನ್ನು, ರೈಲು ಮಾರ್ಗಗಳನ್ನು ಹಾಗೂ ವಾಯುಮಾರ್ಗಗಳನ್ನು ಅಭಿವೃದ್ಧಿಪಡಿಸುವಲ್ಲಿ ಮುಂದಿದ್ದೇವೆ. ಅದೇ ರೀತಿ ಕಾಮಗಾರಿಗಳು ಕ್ಷಿಪ್ರಗತಿಯಲ್ಲಿ ನಡೆಯುತ್ತಿವೆ. ಸಂಪರ್ಕ ಮಾರ್ಗಗಳು ಅಭಿವೃದ್ಧಿಯಾದಂತೆ ನಗರಗಳು ಸಹ ಲಂಗು ಲಗಾಮಿಲ್ಲದೆ ಅಡ್ಡಾದಿಡ್ಡಿಯಾಗಿ ಕೆರೆಕಟ್ಟೆಗಳನ್ನು ಹಾಗೂ ಫಲವತ್ತಾದ ಭೂಮಿಯನ್ನು ನುಂಗಿ ರೈತರನ್ನು ಒಕ್ಕಲೆಬ್ಬಿಸಿ ಬೆಳೆಯುತ್ತಿವೆ. ನಗರಗಳು ಬೆಳೆಯುತ್ತಿದ್ದಂತೆ ನಾನಾ ಉದ್ದೇಶಗಳಿಂದ ಪರ ಊರಿನಿಂದ ನಗರಗಳಿಗೆ ಬಂದು ನೆಲೆಸುವವರ ಸಂಖ್ಯೆ ಹೆಚ್ಚುತ್ತಿದೆ. ಜನವಸತಿಗಳು ಹಾಗೂ ಕಾರ್ಖಾನೆಗಳು ಹೆಚ್ಚುತ್ತಿದ್ದಂತೆ ನೀರಿನ ಬೇಡಿಕೆಯೂ ಹೆಚ್ಚಾಗುತ್ತಿದೆ. ಬೆಂಗಳೂರಿನ ಪ್ರಸ್ತುತ ಜನಸಂಖ್ಯೆ 1,43,95,000. ಜಲಮಂಡಳಿಯವರ ಪ್ರಕಾರ ಇವರಿಗೆ ದಿನಕ್ಕೆ 2100 ಎಂಎಲ್‌ಡಿ ಕುಡಿಯುವ ನೀರಿನ ಅವಶ್ಯಕತೆ ಇದೆ. ಅಂದಾಜಿಸಿರುವಂತೆ 27 ಟಿಎಂಸಿ ಪ್ರಮಾಣದ ನೀರು ಬೇಕಾಗಿದೆ. ಇದರ ಜೊತೆಗೆ ಕಾರ್ಖಾನೆಗಳು, ಉದ್ಯಾನವನಗಳು, ಹೋಟೆಲ್‌ಗಳು, ಮದುವೆ ಮಂಟಪಗಳು ಮುಂತಾದವುಗಳಿಗೆ ಪ್ರತ್ಯೇಕ, ಬೇಡಿಕೆಯು ವರ್ಷದಿಂದ ವರ್ಷಕ್ಕೆ ಏರಿಕೆಯು ಹೀಗೇ ಆಗುತ್ತಿದ್ದರೆ ಕೆಲವೇ ವರ್ಷಗಳಲ್ಲಿ ಕಾವೇರಿ ಜಲಾಶಯಗಳಲ್ಲಿನ ಪೂರ್ಣ ನೀರು ಬೆಂಗಳೂರು ನಗರ ಒಂದಕ್ಕೇ ಬೇಕಾಗಬಹುದು. ಯೋಜಿತ ರೂಪುರೇಷೆಗಳಿಲ್ಲದಿದ್ದರೆ ಭವಿಷ್ಯದಲ್ಲಿ ಮೈಸೂರು, ಮಂಡ್ಯ, ಬೆಂಗಳೂರಿನ ಜನರ ನಡುವೆಯೇ ನೀರಿಗಾಗಿ ದೊಡ್ಡಮಟ್ಟದ ಹೋರಾಟಗಳು ಆಂತರಿಕವಾಗಿ ನಡೆಯುವುದು ನಿಶ್ಚಿತವಾದಂತೆ ಕಾಣುತ್ತಿದೆ.

ಕೃಷ್ಣರಾಜಸಾಗರ ಅಣೆಕಟ್ಟೆಯ ಶೇಖರಣಾ ಸಾಮರ್ಥ್ಯ 49.452 ಟಿಎಂಸಿ ಹಾಗೂ ಸರಾಸರಿ ವಾರ್ಷಿಕ ಇಳುವರಿ 850.59 ಟಿಎಂಸಿ (Average annual yield), ಕಬಿನಿ ಅಣೆಕಟ್ಟೆಯ ಶೇಖರಣಾ ಸಾಮರ್ಥ್ಯ 19.52 ಟಿಎಂಸಿ ಹಾಗೂ ಸರಾಸರಿ ವಾರ್ಷಿಕ ಇಳುವರಿ 97.70 ಟಿಎಂಸಿ. ಇಳುವರಿಯು ಎಲ್ಲಾ ವರ್ಷಗಳಲ್ಲೂ ಒಂದೇ ಇರುವುದಿಲ್ಲ. ಅತೀವೃಷ್ಟಿ ಆದಾಗ ಹೆಚ್ಚು ಇಳುವರಿ, ಕ್ಷಾಮ ಬಂದಾಗ ಇಳುವರಿಯು ತೀರಾ ಕಡಿಮೆಯಾಗಿ ಕುಡಿಯುವ ನೀರಿಗೂ ಹಾಹಾಕಾರ ಉದ್ಭವಿಸುವುದು. ಅಂಕಿ–ಅಂಶಗಳಲ್ಲಿ ಇಲ್ಲಿವರೆಗೂ ಜಲಾಶಯಗಳಲ್ಲಿ ತುಂಬಿರುವ ಹೂಳಿನ ಪ್ರಮಾಣವನ್ನು ಪರಿಗಣಿಸಿಲ್ಲ, ಏನಿಲ್ಲವೆಂದರೂ ಶೇ.10ರಷ್ಟು ಹೂಳು ಜಲಾಶಯಗಳಲ್ಲಿ ತುಂಬಿರುತ್ತದೆ, ಜಲಾನಯನ ಪ್ರದೇಶದ ಭೂಸವಕಳಿಯಿಂದಾಗಿ ಜಲಾಶಯಗಳ ಶೇಖರಣಾ ಸಾಮರ್ಥ್ಯವೂ ವರ್ಷದಿಂದ ವರ್ಷಕ್ಕೆ ಸ್ವಾಭಾವಿಕವಾಗಿ ಕಡಿಮೆಯಾಗುತ್ತಾ ಬರುವುದು, ಇತ್ತ ಸಂಗ್ರಹಣೆಯಲ್ಲಿ ಇಳಿಕೆ ಆಗುತ್ತಿದ್ದರೆ ಅತ್ತ ಅಭಿವೃದ್ಧಿಯ ಕಾರಣ ನೀರಿನ ಬೇಡಿಕೆ ಏರುತ್ತಿರುತ್ತದೆ.

ಬೆಂಗಳೂರು ನೀರು ಸರಬರಾಜು ಮಂಡಳಿಯ ಯೋಜನೆಯ ಪ್ರಕಾರ ಕಾವೇರಿ 6ನೇ ಹಂತವು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಆದ ನಂತರ ವಾರ್ಷಿಕ 35 ಟಿಎಂಸಿ ನೀರನ್ನು ಬಳಸಬಹುದಾಗಿರುತ್ತದೆ. ಪ್ರಸ್ತುತ 1450 ಎಂಎಲ್‌ಡಿ ನೀರನ್ನು ಬೆಂಗಳೂರಿಗೆ ಕಳುಹಿಸಲಾಗುತ್ತಿದೆ, ವಾರ್ಷಿಕ 35 ಟಿಎಂಸಿ ನೀರನ್ನು ಬೆಂಗಳೂರು ನಗರಕ್ಕೆ ಕಳುಹಿಸಲು ಪ್ರತೀ ದಿನ ಸುಮಾರು 3000 ಎಂಎಲ್‌ಡಿ (0.096 ಟಿಎಂಸಿ) ನೀರನ್ನು ನಿತ್ಯವೂ ಪಂಪ್ ಮಾಡಬೇಕಾಗುತ್ತದೆ.

ಎಲ್ಲಾ ವರ್ಷಗಳಲ್ಲೂ ಮಳೆ ಚೆನ್ನಾಗಿ ಬಿದ್ದು ಕಾವೇರಿ ಕಣಿವೆಯ ಅಣೆಕಟ್ಟೆಗಳು ತುಂಬಿದರೆ ಬೆಂಗಳೂರು ಹಾಗೂ ಇತರೆ ನಗರಗಳಿಗೆ ನೀರನ್ನು ಕೊಡಲು ಸಮಸ್ಯೆ ಆಗದು, ತುಂಬಿದರಷ್ಟೆ ಸಾಲದು ಮೇಲೆ ತಿಳಿಸಿದಂತೆ ವಾರ್ಷಿಕ ಇಳುವರಿಯಾದರೆ ಮಾತ್ರ ಅಡ್ಡಿ ಇಲ್ಲ ಹಾಗೂ ಅಗತ್ಯವಾದ ನೀರು ಎಲ್ಲಾ ದಿನಗಳಲ್ಲೂ ವಿಶೇಷವಾಗಿ ಬೇಸಿಗೆಯಂದು ಅಣೆಕಟ್ಟೆಗಳಲ್ಲಿ ಲಭ್ಯ ಇರಬೇಕಾಗುತ್ತದೆ. ಇಲ್ಲವಾದಲ್ಲಿ ಬೆಳೆಗಳಿಗೆ ನೀರು ಕೊಡುವುದಕ್ಕೆ ಹಾಗೂ ಇಲಾಖೆಯ ಇಂಜಿನಿಯರ್‌ಗಳಿಗೆ ನಾಲೆಗಳಲ್ಲಿ ನೀರು ನಿರ್ವಹಣೆಯು ಕಷ್ಟವಾಗುವುದು.

> ನೀರು ನಿರ್ವಹಣೆಯಲ್ಲಿ ನಾವು ಗೆದ್ದರೆ ನೀರಿನ ಕೊರತೆ ಆಗುವುದೇ ಇಲ್ಲ. ಉತ್ತಮ ನೀರು ನಿರ್ವಹಣೆಯ ಒಂದು ಉದಾಹರಣೆ ಬೇಕೆಂದರೆ ಇಸ್ರೇಲ್ ನಮ್ಮ ಕಣ್ಣ ಮುಂದೆ ಬರುವುದು. ಅತ್ಯಂತ ಕನಿಷ್ಠ ನೀರಿನಲ್ಲಿ ಅತೀ ಹೆಚ್ಚು ಉಪಯೋಗ ಪಡೆದುಕೊಳ್ಳುತ್ತಿದ್ದಾರೆ ಇಸ್ರೇಲಿಗರು, ನಾವು ಅವರಿಗಿಂತ ಕಡಿಮೆ ಇಲ್ಲ. ಮುಖ್ಯವಾಗಿ ಬೇಕಿರುವುದು ಮನಸ್ಥಿತಿ ಹಾಗೂ ಇಚ್ಛಾಶಕ್ತಿ.

ಬೆಂಗಳೂರಿಗೆ ಕಾವೇರಿ ನೀರು ಸರಬರಾಜು ಹಂತ 6ಕ್ಕೆ ಮುಕ್ತಾಯವಾಗುತ್ತಾ? ಅದು ಕೂಡ ಅನಿಶ್ಚಿತತೆಯಲ್ಲಿ ಇರುವುದು. ಮುಂದಿನ ದಿನಗಳಲ್ಲಿ ಹಂತ–7, ಹಂತ–8, ಹಂತ–9...., ಹೀಗೆ ಮುಂದುವರಿಯುತ್ತಿದ್ದರೆ ಜಲಾಶಯಗಳು ಕುಡಿಯುವ ನೀರಿಗೆ ಮಾತ್ರ ಸೀಮಿತಗೊಳ್ಳುತ್ತವೆ. ಬೆಂಗಳೂರಿಗೆ ಕುಡಿಯುವ ನೀರನ್ನು ಸರಬರಾಜು ಮಾಡಿದರೆ ಸಾಕೆ?, ಮಂಡ್ಯ, ಮದ್ದೂರು, ಚನ್ನಪಟ್ಟಣ, ರಾಮನಗರ, ಕನಕಪುರ ಮುಂತಾದ ಬೆಂಗಳೂರು ಕೇಂದ್ರೀಕೃತ ಪಟ್ಟಣಗಳು ಇವೆಯಲ್ಲ ಅವುಗಳಿಗೂ ಕಾವೇರಿ ಕಣಿವೆಯ ನೀರು ಬೇಕಿದೆ, ಬೆಂಗಳೂರಿನಂತೆ ಬೆಳೆಯುತ್ತಿರುವ ಮೈಸೂರು ನಗರವು ಕೂಡ ಪಕ್ಕದಲ್ಲೇ ಇರುವ ಕೆಆರ್‌ಎಸ್ ಮತ್ತು ಕಬಿನಿ ಜಲಾಶಯಗಳನ್ನೇ ಆಶ್ರಯಿಸಿರುವುದು ಹಾಗೂ ವಿದ್ಯುತ್ ಉತ್ಪಾದನಾ ಕೇಂದ್ರಕ್ಕೆ, ಎಲ್ಲಕ್ಕಿಂತ ಮುಖ್ಯವಾಗಿ ಕೃಷಿಗೆ ನೀರನ್ನು ಬಿಡಲೇಬೇಕು.

ಎರಡು ದಶಕಗಳ ಕಾಲ ಬೆಂಗಳೂರು ನಗರಕ್ಕೆ 1880ರಲ್ಲಿ ಕಟ್ಟಿಸಿದ ಕೆ.ಆರ್.ಪುರಂನ ಅವಲಹಳ್ಳಿಯಲ್ಲಿನ ಎಲೆಮಲ್ಲಪ್ಪಶೆಟ್ಟರ ಕೆರೆಯಿಂದಲೇ ನೀರು ಸರಬರಾಜು ಮಾಡಲಾಗುತ್ತಿತ್ತು. ಆದರೆ ಈಗ ಆ ಕೆರೆಯ ನೀರು ಬಕಾಸುರನ ಹೊಟ್ಟೆಗೆ ಲೋಟ ನೀರಿನಷ್ಟು ಆಗಿದೆ. ಜಲಮೂಲಗಳನ್ನು ಸಂರಕ್ಷಿಸಿಕೊಳ್ಳದಿದ್ದರೆ ಭವಿಷ್ಯವನ್ನು ಕಲ್ಪಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಸರ್ಕಾರ, ಸಂಘಸಂಸ್ಥೆಗಳು ಹಾಗೂ ನಗರವಾಸಿಗಳು ಜಲಮೂಲಗಳ ಸಂರಕ್ಷಣೆ, ನೀರಿನ ಶೇಖರಣೆ ಹಾಗೂ ನಿರ್ವಹಣೆಯಲ್ಲಿ ಜಾಗೃತರಾಗಬೇಕಾಗುತ್ತದೆ. ಬೆಂಗಳೂರು ನಗರದಲ್ಲಿ ಬೀಳುವ ಮಳೆಯ ನೀರನ್ನು ಮಳೆಕೊಯ್ಲು ಮೂಲಕ ಸಂಗ್ರಹ ಮಾಡಿದರೆ ಸರಬರಾಜಿನ ಶೇ.70ರಷ್ಟು ಪ್ರಮಾಣದ ನೀರನ್ನು ಜಲಾಶಯಗಳಲ್ಲಿ ಉಳಿಸಿಕೊಳ್ಳಬಹುದಾಗಿದೆ.

ನೀರಿನ ಮೂಲಗಳನ್ನು ನಾವು ಈಗಲೇ ಹುಡುಕಿ ಸಂರಕ್ಷಿಸಿಕೊಳ್ಳಬೇಕಾಗಿದೆ, ಪರಿಸರವನ್ನು ಪರಿಗಣಿಸಿ, ಸಾಧಕ–ಬಾಧಕಗಳನ್ನು ಗಣನೆಗೆ ತೆಗೆದುಕೊಂಡು ರಾಜಕೀಯ ಮಾಡದೆ ಸ್ವಾಭಿಮಾನವನ್ನು ಕಾವೇರಿ ನದಿಯ ಪಶ್ಚಿಮವಾಹಿನಿಯಲ್ಲಿ ಬಿಟ್ಟು ಕೇಂದ್ರ ಸರ್ಕಾರ ಹಾಗೂ ತಮಿಳುನಾಡು ಸರ್ಕಾರದೊಟ್ಟಿಗೆ ಸಮನ್ವಯ ಸಾಧಿಸಿ ಸೂಕ್ತವಾದಲ್ಲಿ ಮಾತ್ರ ಮೇಕೆದಾಟು ಯೋಜನೆಯನ್ನು ಅನುಷ್ಠಾನಗೊಳಿಸಿದರೆ ಮಾತ್ರ ಬೆಂಗಳೂರು ಬೆಂಗಳೂರಾಗಿಯೇ ಉಳಿಯುವುದು, ಇಲ್ಲವಾದಲ್ಲಿ ಭವಿಷ್ಯದಲ್ಲಿ ಜನಜೀವನ ಘನಘೋರ, ನಾವು ನೀರು ಬಿಡುವುದಿಲ್ಲ, ರಕ್ತ ಕೊಟ್ಟೇವು ನೀರು ಕೊಡುವುದಿಲ್ಲವೆಂದು ಮಂಡ್ಯದ ರೈತರು ಚಳುವಳಿಗೆ ಕುಳಿತುಕೊಳ್ಳುವುದರಲ್ಲಿ ಸಂಶಯವೇ ಇಲ್ಲ, ದುರದೃಷ್ಟ ಎನ್ನುವಂತೆ ಮಂಡ್ಯದವರಿಗೆ ಚಳುವಳಿ ಎನ್ನುವುದು ಕನ್ನಂಬಾಡಿ ಅಣೆಕಟ್ಟೆ ಹುಟ್ಟಿದಾಗಿನಿಂದಲೇ ಬಳುವಳಿಯಾಗಿ ಬಂದುಬಿಟ್ಟಿದೆ, ಮತ್ತೆ ಮತ್ತೇ ಮಂಡ್ಯದವರ ಹೊಟ್ಟೆಗೆ ಹೊಡೆಯುವುದು ಬೇಡ!.

ಮೂರನೇ ಮಹಾಯುದ್ಧ ನಡೆದರೆ ಅದು ನೀರಿಗಾಗಿಯೇ ಎಂಬ ಮಾತು ಚಾಲ್ತಿಯಲ್ಲಿದ್ದು, ಅದು ನಮ್ಮ ನಡುವೆಯು ನಡೆಯಬಹುದು ಎಂಬುದನ್ನು ನಾವು ಮನಗಾಣಬೇಕಾಗಿದೆ. ಮುಂದಿನ ದಿನಗಳಲ್ಲಿ ದುಡ್ಡು ಕೊಟ್ಟರೆ ಹಾಲು ಸಿಗಬಹುದು ಆದರೆ ನೀರು ಸಿಗುವುದಿಲ್ಲ ಎಂಬುದಾಗಿಯೂ ಚಿಂತಕರು ಹೇಳುತ್ತಾರೆ.

ಬೆಂಗಳೂರು ಮಹಾನಗರವನ್ನು ಅಭಿವೃದ್ಧಿಯ ದೃಷ್ಟಿಯಿಂದ ಏಳು ವಿಭಾಗಗಳನ್ನು ಮಾಡುವ ಪ್ರಸ್ತಾವನೆ ಇದೆ ಎಂಬುದು ಸುದ್ದಿ, ಇದು ಅನುಷ್ಠಾನವಾದಲ್ಲಿ ನಗರವು ವೇಗವಾಗಿ ಬೆಳೆಯಲು ಹಾಗೂ ನೀರಿನ ಬೇಡಿಕೆ ಹೆಚ್ಚಲು ಕಾರಣವಾಗುತ್ತದೆ, ಹಾಗಾಗಿ ನೀರಿನ ಮೂಲವನ್ನು ಮೈಸೂರಿಗೆ ತೊಂದರೆ ಆಗದ ರೀತಿ ಹುಡುಕಿಕೊಳ್ಳುವುದು ಒಳಿತು, ಇಲ್ಲವಾದಲ್ಲಿ ಎರಡೂ ನಗರಗಳು ತಮ್ಮಲ್ಲೇ ವೈಮನಸ್ಸು ಬೆಳೆಸಿಕೊಳ್ಳುವುದು ಹಾಗೂ ನಡುವೆ ಇರುವ ಮಂಡ್ಯ ನೀರಿಗಾಗಿ ಕೊತ ಕೊತ ಕುದಿಯಲಾರಂಭಿಸುವುದು.

ಭೂಮಿಯಲ್ಲಿ ಶೇ. 70 ಭಾಗ ನೀರೇ ತುಂಬಿದ್ದರೂ ನೀರಿನ ಹಾಹಾಕಾರಕ್ಕೆ ತುತ್ತಾಗುತ್ತಿರುವುದು ಶೋಚನೀಯ. ಘನ, ಅನಿಲ ಮತ್ತು ದ್ರವ ರೂಪದಲ್ಲಿ ಗೋಚರಿಸುವ ನೀರು ಮನುಷ್ಯನ ದೇಹದಲ್ಲೂ ಶೇ.55ರಿಂದ 78ರವರೆಗೆ ತುಂಬಿರುತ್ತದೆ. ಗ್ರಹದಲ್ಲಿ ಎಂದಿಗೂ ನೀರಿನ ಕೊರತೆ ಆಗದು. ಆಕಾಶದಲ್ಲಿ ಮೋಡಗಳು, ಭೂಮಿಯ ಮೇಲೆ ಸಮುದ್ರ, ನದಿತೊರೆ, ಕೆರೆಕಟ್ಟೆಗಳಲ್ಲಿ ಹಾಗೂ ನೆಲದಾಳದಲ್ಲಿ ದ್ರವದ ರೂಪದಲ್ಲಿ ಮೊದಲು ಇದ್ದಷ್ಟೇ ಪ್ರಮಾಣದ ನೀರು ಇಂದಿಗೂ ಭೂಮಂಡಲದಲ್ಲಿ ಇದೆ, ಅಂದಾಜಿಸಿರುವ ಪ್ರಕಾರ 1,386 ಬಿಲಿಯನ್ ಘನ ಕಿ.ಮೀ.ಗಳು(333 ಮಿಲಿಯನ್ ಘನ ಮೈಲಿಗಳು). ವಾತಾವರಣದ ವೈಪರೀತ್ಯದಿಂದಾಗಿ ನೀರಿನ ಚಕ್ರದಲ್ಲಿ (Water Cycle) ಏರಿಳಿತಗಳಾಗಿ ಅನಾವೃಷ್ಟಿ ಹಾಗೂ ಅತೀವೃಷ್ಟಿಯಿಂದ ಬಳಲುತ್ತೇವೆ ಹೊರತು ನೀರಿನ ಪ್ರಮಾಣದಲ್ಲಿ ವ್ಯತ್ಯಾಸವಾಗದು. ನೀರು ನಿರ್ವಹಣೆಯಲ್ಲಿ ನಾವು ಗೆದ್ದರೆ ನೀರಿನ ಕೊರತೆ ಆಗುವುದೇ ಇಲ್ಲ. ಉತ್ತಮ ನೀರು ನಿರ್ವಹಣೆಯ ಒಂದು ಉದಾಹರಣೆ ಬೇಕೆಂದರೆ ಇಸ್ರೇಲ್ ನಮ್ಮ ಕಣ್ಣ ಮುಂದೆ ಬರುವುದು. ಅತ್ಯಂತ ಕನಿಷ್ಠ ನೀರಿನಲ್ಲಿ ಅತೀ ಹೆಚ್ಚು ಉಪಯೋಗ ಪಡೆದುಕೊಳ್ಳುತ್ತಿದ್ದಾರೆ ಇಸ್ರೇಲಿಗರು, ನಾವು ಅವರಿಗಿಂತ ಕಡಿಮೆ ಇಲ್ಲ ಮುಖ್ಯವಾಗಿ ಬೇಕಿರುವುದು ಮನಸ್ಥಿತಿ ಹಾಗೂ ಇಚ್ಛಾಶಕ್ತಿ.



ಮಿರ್ಲೆ ಚಂದ್ರಶೇಖರ
ಮೊ: 9916129654

ಮರಾಠಿಗರ ಪುಂಡಾಟಿಕೆ ನಿಲ್ಲಿಸಲು ಆಗ್ರಹಿಸಿ ವಾಟಾಳ್ ನಾಗರಾಜ್ ಪ್ರತಿಭಟನೆ

ಮಾ.22ಕ್ಕೆ ಕನ್ನಡಿಗರ ಶಕ್ತಿ ಪ್ರದರ್ಶಿಸಲು ಕರ್ನಾಟಕ ಬಂದ್

ಮೈಸೂರು, ಮಾ.2(ಜಿಎ)–ಬೆಳಗಾವಿಯಲ್ಲಿ ಮರಾಠಿಗರ ಪುಂಡಾಟಿಕೆ, ಅಟ್ಟಹಾಸ ನಿಲ್ಲಿಸಿ, ಎಂಇಎಸ್ ನಿಷೇಧ ಮಾಡಬೇಕು. ಕಳಸ–ಬಂಡೂರಿ, ಮಹದಾಯಿ ಯೋಜನೆ ಕೂಡಲೇ ಆರಂಭಿಸಬೇಕು ಎಂದು ಕನ್ನಡ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ಭಾನುವಾರ ಹಾರ್ಡಿಂಗ್ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

ರಾಜ್ಯ ಸರಕಾರ ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಮಾಡಬೇಕು. ಬೆಳಗಾವಿಯಲ್ಲಿ ಕನ್ನಡ ಕಂಡಕ್ಟರ್ ಮೇಲೆ ಮರಾಠಿಗರು ದಾಳಿ ಮಾಡಿರುವ ಬಗ್ಗೆ ಸಮಗ್ರವಾಗಿ ತನಿಖೆ ನಡೆಸಿ, ತಪ್ಪಿತಸ್ಥರಿಗೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮಾ.22ರಂದು ಅಖಂಡ ಕರ್ನಾಟಕ ಬಂದ್ ಮಾಡಿ, ಗಡಿನಾಡು, ಕನ್ನಡ, ಕನ್ನಡಿಗರ ಶಕ್ತಿ ಪ್ರದರ್ಶನ ಮಾಡಬೇಕು. ಕನ್ನಡಿಗರ ಶಕ್ತಿ ದೇಶಕ್ಕೆ ಗೊತ್ತಾಗಬೇಕು. ಕರ್ನಾಟಕದಲ್ಲಿ ಎಂದೆಂದೂ ಕಂಡಿರದ ಬಂದ್ ಆಗಬೇಕು ಎಂದರು.

ಕನ್ನಡಪರ ಸಂಘಟನೆಗಳು ಬಂದ್‌ಗೆ ಬೆಂಬಲ ಸೂಚಿಸಿವೆ. ಕೊನೆ ಕ್ಷಣದಲ್ಲಿ ನಾರಾಯಣ್‌ಗೌಡರು ಕೂಡ ಬೆಂಬಲ ಸೂಚಿಸುತ್ತಾರೆ. ಅವರ ಬಗ್ಗೆ ನಮಗೆ ಅಪಾರ ಗೌರವ ಇದೆ. ಅವರ ಜೊತೆಯೂ ಕೂಡ ಮಾತನಾಡುತ್ತೇವೆ. ಯಾರೂ ವಿರೋಧಿಸಿಲ್ಲ. ಕನ್ನಡಕ್ಕಾಗಿ ಎಲ್ಲವನ್ನು ತ್ಯಾಗ ಮಾಡುವ ಭಾವನೆ ಜೊತೆಗೆ ಪ್ರಾಣ ಕೊಡಲು ಸಿದ್ಧರಾಗಿರಬೇಕು. ಆಕಾಶ ಭೂಮಿಗೆ ಬಂದರೂ, ಸರಿಯೇ ಮಾ.22ರಂದು ಕರ್ನಾಟಕ ಬಂದ್ ಮಾಡುತ್ತೇವೆ ಎಂದು ಹೇಳಿದರು.

ಕೇಂದ್ರ ಸರ್ಕಾರದ ಮಲತಾಯಿ ಧೋರಣೆಯಿಂದ ರಾಜ್ಯವನ್ನು ಆಯ–ವ್ಯಯದಲ್ಲಿ ಕಡೆಗಣನೆ ಮಾಡಿದ್ದಾರೆ. ಮಂಗಳೂರು–ಕಾರವಾರ ಬಂದರು, ಉತ್ತರಕರ್ನಾಟಕ, ಹೈದರಾಬಾದ್ ಕರ್ನಾಟಕ, ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಅಭಿವೃದ್ಧಿಯಾಗಬೇಕು. ಇಡೀ ರಾಜ್ಯದ ಗಡಿನಾಡುಗಳು ಬೆಳವಣಿಗೆಯಾಗಬೇಕು ಎಂದು ಒತ್ತಾಯಿಸಿದರು.

ಐಜಿಪಿ ರೂಪಾ ವಿರುದ್ಧ ಸಿಎಸ್‌ಗೆ ಡಿಐಜಿ ವರ್ತಿಕಾ ಕಟಿಯಾರ್ ದೂರು



ಐಜಿಪಿ ರೂಪಾ



ಡಿಐಜಿ ವರ್ತಿಕಾ

ಬೆಂಗಳೂರು, ಮಾ.2– ಪೊಲೀಸ್ ಇಲಾಖೆ ಶಿಸ್ತಿನ ಇಲಾಖೆ. ಈ ಶಿಸ್ತಿನ ಇಲಾಖೆಯಲ್ಲಿ ಮಹಿಳಾ ಅಧಿಕಾರಿಗಳ ಜಟಾಪಟಿ ಮುಗಿಯೋ ಲಕ್ಷಣಗಳೇ ಕಾಣುತ್ತಿಲ್ಲದಂತಾಗಿದೆ. ಐಪಿಎಸ್ ಅಧಿಕಾರಿ ರೂಪಾ ವಿರುದ್ಧ ಮತ್ತೋರ್ವ ಮಹಿಳಾ ಅಧಿಕಾರಿ ದೂರು ನೀಡಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಈ ಹಿಂದೆ ಹಿರಿಯ ಅಧಿಕಾರಿಗಳ ಮುಂದೆಯೇ ಸಭೆ ಕೊಠಡಿಯಲ್ಲಿ ಗಲಾಟೆ ಮಾಡಿಕೊಂಡಿದ್ದ ಐಜಿಪಿ ರೂಪಾ ಮೌದ್ಗಿಲ್ ಮತ್ತು ಡಿಐಜಿ ವರ್ತಿಕಾ ಕಟಿಯಾರ್ ಸುದ್ದಿ ಆಗಿದ್ದರು. ಈಗ ಒಂದು ಹಂತ ಮುಂದೆ ಹೋಗಿದ್ದು, ಐಜಿಪಿ ರೂಪಾ ವಿರುದ್ಧ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ವರ್ತಿಕಾ ಕಟಿಯಾರ್ ದೂರು ನೀಡಿದ್ದಾರೆ.

ದೂರಿನಲ್ಲಿ ಏನಿದೆ?: ಕೆಳಹಂತದ ಮೂವರು ಅಧಿಕಾರಿಗಳನ್ನು (ಮಲ್ಲಿಕಾರ್ಜುನ್, ಮಂಜುನಾಥ್ ಮತ್ತು ಕಿರಣ್) ಬಳಸಿ ದಾಖಲೆಗಳನ್ನು ನನ್ನ ಕೊಠಡಿಯಲ್ಲಿ ಇರಿಸಿದ್ದಾರೆ. ವಾಟ್ಸಪ್ ಮೂಲಕ ಫೋಟೋ ತೆಗೆಸಿದ್ದಾರೆ. ಕಂಟ್ರೋಲ್ ರೂಮ್‌ನಿಂದ ಕೀ ತಂದು ಕೊಠಡಿ ತೆರೆಯಲಾಗಿದೆ. ದುರುದ್ದೇಶದಿಂದ ಫೋಟೋ ತೆಗೆಸಲಾಗಿದ್ದು, ನನ್ನ ವಿರುದ್ಧ ಷಡ್ಯಂತ್ರ ಮಾಡಿದ್ದಾರೆ ಎಂದು ವರ್ತಿಕಾ ಕಟಿಯಾರ್ ಆರೋಪಿಸಿದ್ದಾರೆ.

ಮಾ.8ರಂದು ಸಂಗೀತ, ನೃತ್ಯೋತ್ಸವ 'ಕಲಾಧಾರೆ'

ಮೈಸೂರು: ಮೈಸೂರಿನ ಕಲಾಧಾರೆ ಕಲ್ಚರಲ್ ಟ್ರಸ್ಟ್ ವತಿಯಿಂದ 24ನೇ ವರ್ಷದ ಸಂಗೀತ ಮತ್ತು ನೃತ್ಯೋತ್ಸವ ಕಾರ್ಯಕ್ರಮವನ್ನು ಮಾ.8ರಂದು ಸಂಜೆ 6 ಗಂಟೆಗೆ ರಮಾಗೋವಿಂದ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ. ಆಸಕ್ತರು ಮಾ.6ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ ಮೊ. 9880777121.

21 ಮಂದಿ ಆರೋಗ್ಯ ನಿರೀಕ್ಷಣಾಧಿಕಾರಿಗಳು ಮಾತೃ ಇಲಾಖೆಗೆ ವಾಪಸ್

ಮೈಸೂರು,ಮಾ.2(ಎಸ್‌ಪಿಎನ್)– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಗೆ ವರ್ಷದ ಅವಧಿಗೆ ನಿಯೋಜನೆಗೊಂಡಿರುವ 21 ಮಂದಿ ಆರೋಗ್ಯ ನಿರೀಕ್ಷಣಾಧಿಕಾರಿಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸುವಂತೆ ಬೆಂಗಳೂರಿನ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಆಯುಕ್ತರು ಆದೇಶಿಸಿದ್ದಾರೆ.

ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಗೆ ನಿಯೋಜನೆಗೊಂಡಿದ್ದ ಮಂಡ್ಯ ಜಿಲ್ಲೆಯ ಮಳವಳ್ಳಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಎಂ.ಶಿವಕುಮಾರ್, ಪಾಂಡವಪುರ ಸಿ.ಎಸ್.ಸಂತೋಷ್, ಕೆ.ಆರ್.ಪೇಟೆಯ ಆರ್.ಎನ್.ಬಸವರಾಜು, ಶ್ರೀರಂಗಪಟ್ಟಣದ ಹೆಚ್.ಆರ್.ಶ್ರೀನಿವಾಸಬಾಬು, ಹುಣಸೂರಿನ ಸಿ.ಎನ್.ಮಂಜುನಾಥ್, ನಂಜನಗೂಡಿನ ಎಂ.ಸಂದೀಪ್, ಮೈಸೂರು ಗ್ರಾಮಾಂತರದ ಬಿ.ಸಿ.ಕಿಶೋರ್, ಮೈಸೂರು ಮಹಾನಗರಪಾಲಿಕೆ ವಲಯ ಕಚೇರಿ–2ರ ಸಿ.ರಾಜೇಶ್ ಸೇರಿದಂತೆ 21 ಮಂದಿ ಆರೋಗ್ಯಾಧಿಕಾರಿಗಳನ್ನು ಮಾತೃ ಇಲಾಖೆಗೆ ಮಾ.1ರಂದು ಅಪರಾಹ್ನ ಕರ್ತವ್ಯದಿಂದ ಬಿಡುಗಡೆಗೊಳಿಸುವಂತೆ ಮುಂದಿನ ಸ್ಥಳ ನಿಯುಕ್ತಿಗಾಗಿ ಮಾತೃ ಇಲಾಖೆಗೆ ಹಾಜರಾಗುವಂತೆ ಸೂಚಿಸಿದ್ದಾರೆ.

ಮಹಿಳಾ ಪೊಲೀಸರಿಗೆ ಬೈಕ್ ರೈಡಿಂಗ್ ತರಬೇತಿ

ಮೈಸೂರು ಮಹಿಳಾ ಪೊಲೀಸ್ ತರಬೇತಿ ಶಾಲೆಯಲ್ಲಿ ವಿನೂತನ ವ್ಯವಸ್ಥೆ

ಮೈಸೂರು, ಮಾ.2(ಎಸ್‌ಪಿಎನ್)– ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗೆ ಆಯ್ಕೆಯಾಗಿ ಇಲಾಖಾ ತರಬೇತಿ ಪಡೆಯುತ್ತಿರುವ ಮಹಿಳಾ ಪೊಲೀಸರಿಗೆ ತರಬೇತಿ ವೇಳೆ ಬೈಕ್ ಚಾಲನೆ ತರಬೇತಿಗೂ ಒತ್ತು ನೀಡಲಾಗಿದೆ.

ಮೈಸೂರಿನಲ್ಲಿರುವ ಮಹಿಳಾ ಪೊಲೀಸ್ ತರಬೇತಿ ಶಾಲೆಯಲ್ಲಿ ಮಾರ್ಚ್ ತಿಂಗಳಿನಲ್ಲಿ ಆರಂಭವಾಗುವ ತರಬೇತಿ ಅವಧಿಯಲ್ಲಿ ಬೈಕ್ ರೈಡಿಂಗ್ ತರಬೇತಿಯನ್ನು ಪ್ರಾರಂಭಿಸಲು ಪಠ್ಯಕ್ರಮ ರೂಪುಗೊಂಡಿದ್ದು, ಪೂರಕ ಕಾರ್ಯಗಳು ಸಿದ್ಧಗೊಳ್ಳುತ್ತಿವೆ.

ಮಹಿಳಾ ಪೊಲೀಸರಿಗೆ ತರಬೇತಿ ನೀಡುವ ರಾಜ್ಯದ ಏಕೈಕ ಶಾಲೆ ಮೈಸೂರಿನಲ್ಲಿದ್ದು, ಈ ಶಾಲೆಯಲ್ಲಿ ಎಂಟು ತಿಂಗಳು ಮಾತ್ರ ಈ ಮೊದಲು ತರಬೇತಿ ನೀಡಲಾಗುತ್ತಿತ್ತು. ಪ್ರಸ್ತುತ ಎರಡು ತಿಂಗಳ ಅವಧಿಯನ್ನು ಹೆಚ್ಚು ಮಾಡಿ, ಒಟ್ಟು 10 ತಿಂಗಳು ತರಬೇತಿಗೆ ವಿಸ್ತರಣೆ ಮಾಡಲಾಗಿದೆ.

ತರಬೇತಿ ಅವಧಿಯನ್ನು ಹೆಚ್ಚು ಮಾಡಿರುವ ಉದ್ದೇಶ ಮಹಿಳಾ ಪೊಲೀಸರಿಗೆ ಬೈಕ್ ರೈಡಿಂಗ್ ಸೇರಿದಂತೆ ಇತರೆ ನೂತನ ತಂತ್ರಜ್ಞಾನವನ್ನು ಕಲಿಸುವುದಾಗಿದೆ. ಇದರಲ್ಲಿ ಬೈಕ್ ಚಾಲನೆಯೂ ಪ್ರಮುಖವಾಗಿದೆ.

ತರಬೇತಿ ಪಠ್ಯಕ್ರಮದಲ್ಲಿ 21 ತಾಸು ಅವಧಿಯ ವಿವಿಧ ವಿಷಯಗಳನ್ನು ಅಳವಡಿಸಿದ್ದು, ಇದರಲ್ಲಿ ಬೈಕ್ ಚಾಲನೆಗೂ ಮೀಸಲಿಡಲಾಗಿದೆ. ಮೈದಾನದಲ್ಲಿ ಪ್ರತಿ ದಿನ ಒಂದು ತಾಸು ಪ್ರಾಯೋಗಿಕ ಬೈಕ್ ಚಾಲನೆ ಹೇಳಿಕೊಡಲಾಗುತ್ತದೆ. ಬೈಕ್ ಓಡಿಸುವುದು ಗೊತ್ತಿಲ್ಲದವರಿಗೆ ಗೇರ್‌ರಹಿತ ಬೈಕ್ ತರಬೇತಿ ನೀಡಲಾಗುತ್ತದೆ. ಈಗಾಗಲೇ ಶಿಬಿರಾರ್ಥಿಗಳಲ್ಲಿ ಬೈಕ್ ಓಡಿಸುವುದನ್ನು ಕಲಿತಿರುವವರಿಗೆ ವಿತ್ ಗೇರ್ ಬೈಕ್ ಚಾಲನೆ ಕಲಿಸಲಾಗುವುದು.



ಉದ್ದೇಶ: ಕೆಲ ಅಪರಾಧ ಪ್ರಕರಣಗಳಲ್ಲಿ ಮಹಿಳಾ ಪೊಲೀಸರೇ ತನಿಖೆ ನಡೆಸಬೇಕು. ಆಗ ಘಟನಾ ಸ್ಥಳಕ್ಕೆ ತಲುಪಲು ಬೈಕ್ ಓಡಿಸುವುದು ಕಲಿತಿದ್ದರೆ ಉತ್ತಮ. ಇಲ್ಲದಿದ್ದರೆ ಪುರುಷ ಪೊಲೀಸರನ್ನೇ ಅವಲಂಬಿಸಬೇಕಾಗುತ್ತದೆ. ಇದರಿಂದ ಒಂದು ಸಣ್ಣ ಕೆಲಸಕ್ಕೆ ಇಬ್ಬರು ಸಿಬ್ಬಂದಿ ಹೋಗಬೇಕಾಗುತ್ತದೆ. ಇದನ್ನು ತಪ್ಪಿಸುವ ಸಲುವಾಗಿ ಬೈಕ್ ರೈಡಿಂಗ್ ಕಡ್ಡಾಯ ಮಾಡಲಾಗಿದೆ. ಅಲ್ಲದೆ, ಇದು ಪಾಳಿ ಕರ್ತವ್ಯ ನಿರ್ವಹಣೆಗೂ ಅನುಕೂಲ ಎಂದು ಮಹಿಳಾ ಪೊಲೀಸ್ ತರಬೇತಿ ಶಾಲೆ ಪ್ರಾಂಶುಪಾಲೆ ಎಂ.ಎಸ್.ಗೀತಾ ಮಾಹಿತಿ ನೀಡಿದರು.

> ಈ ಬಾರಿ ತರಬೇತಿಯಲ್ಲಿ 258 ಮಹಿಳಾ ಪೊಲೀಸ್ ಪ್ರಶಿಕ್ಷಣಾರ್ಥಿಗಳು ನಿಯೋಜನೆಗೊಂಡಿದ್ದು, ಇವರಿಗೆ ಬೈಕ್ ರೈಡಿಂಗ್, ತಂತ್ರಜ್ಞಾನ ಕಲಿಕೆಗೆ ಹೆಚ್ಚಿನ ಆದ್ಯತೆ ನೀಡಲಿದ್ದು, ಬೈಕ್ ರೈಡಿಂಗ್‌ಗೆ ಕೇಂದ್ರ ಕಚೇರಿಯಿಂದ 20 ಬೈಕ್‌ಗಳನ್ನು ನೀಡಲಿದ್ದಾರೆ. ಈಗಾಗಲೇ ತರಬೇತಿ ಕೇಂದ್ರದಲ್ಲಿರುವ ಬೈಕ್‌ಗಳನ್ನು ಬಳಸಿಕೊಂಡು ಮಾರ್ಚ್ ತಿಂಗಳಲ್ಲಿ ತರಬೇತಿ ಆರಂಭವಾಗಲಿದೆ.
>
> –ಎಂ.ಎಸ್.ಗೀತಾ, ಪ್ರಾಂಶುಪಾಲರು, ಮಹಿಳಾ ಪೊಲೀಸ್ ತರಬೇತಿ ಶಾಲೆ, ಮೈಸೂರು



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಒಂದನೇ ಪುಟದಿಂದ

ವಿಧಾನಮಂಡಲ ಬಜೆಟ್ ಅಧಿವೇಶನ

ದೂರದರ್ಶನ (ಡಿಡಿ ನ್ಯೂಸ್) ಹಾಗೂ ಇತರ ಸುದ್ದಿ ವಾಹಿನಿಗಳಲ್ಲಿ ಬಜೆಟ್ ಮಂಡನೆ ನೇರ ಪ್ರಸಾರ ವೀಕ್ಷಿಸಬಹುದು. ವಿಧಾನಮಂಡಲ ಅಧಿವೇಶನ ಮಾ.3 ರಿಂದ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಅಧಿವೇಶನದಲ್ಲಿ ಪ್ರತಿಪಕ್ಷಗಳನ್ನು ಸಮರ್ಥವಾಗಿ ಎದುರಿಸುವ ಕುರಿತು ಚರ್ಚಿಸಲು ಮಾ.4 ರಂದು ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದೆ. ಸೋಮವಾರ ರಾಜ್ಯಪಾಲರ ಭಾಷಣದಲ್ಲಿ ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯದ ಬಗ್ಗೆ ಪ್ರಸ್ತಾಪಿಸುವ ಸಾಧ್ಯತೆಯಿದೆ. ಗ್ಯಾರಂಟಿ ಗಳನ್ನು ವಿರೋಧಿಸುವವರೇ ಅವುಗಳನ್ನು ಅನುಸರಿಸಿರುವ ಬಗ್ಗೆ ರಾಜ್ಯಪಾಲರಿಂದ ಹೇಳಿಸುವ ಮೂಲಕ ಪರೋಕ್ಷವಾಗಿ ಬಿಜೆಪಿಗೆ ತಿರುಗೇಟು ನೀಡಲು ಸರ್ಕಾರ ಸಿದ್ಧತೆ ನಡೆಸಿದೆ ಎನ್ನಲಾಗಿದೆ. ರಾಜ್ಯಪಾಲರ ಭಾಷಣದ ನಂತರ ಕಲಾಪ ಮುಂದೂಡಿಕೆ ತರುವಾಯ ಸದನ ಮತ್ತೆ ಆರಂಭವಾಗಲಿದೆ. ಸಂತಾಪ ಸೂಚನೆ ನಿರ್ಣಯ ಮಂಡಿಸಿ ಸಭೆ ಮುಂದೂಡಲಾಗುವುದು. ಮಂಗಳವಾರ, ಬುಧವಾರ ಹಾಗೂ ಗುರುವಾರ ಮೂರು ದಿನಗಳ ಕಾಲ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯಲಿದ್ದು, ಮಾ.6 ರಂದು ಸರ್ಕಾರ ಉತ್ತರ ನೀಡಲಿದೆ. ಅಧಿವೇಶನದಲ್ಲಿ ಮೈಕ್ರೋ ಫೈನಾನ್ಸ್ ಸುಗ್ರೀವಾಜ್ಞೆ, ವಿಧೇಯಕ ಮಂಡಿಸಿ ಉಭಯ ಸದನಗಳ ಒಪ್ಪಿಗೆ ಪಡೆಯಬಹುದು.

ಬೆಂಗಳೂರು ಅರಮನೆ ಮೈದಾನದ ಭೂಸ್ವಾಧೀನ ಕುರಿತ ಸುಗ್ರೀವಾಜ್ಞೆ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿರುವುದರಿಂದ ಈ ಸುಗ್ರೀವಾಜ್ಞೆ ಬಗ್ಗೆ ಅಧಿವೇಶನದಲ್ಲಿ ಯಾವ ನಿರ್ಧಾರ ಮಾಡಲಿದ್ದಾರೆ ಎಂಬುದು ಕಾದು ನೋಡಬೇಕಿದೆ.

ಮಾ. 21ರವರೆಗೆ ನಡೆಯುವ ಅಧಿವೇಶನದ ಉದ್ದಕ್ಕೂ ಬಸ್, ಮೆಟ್ರೋ ಪ್ರಯಾಣ ದರ ಏರಿಕೆ, ವಿದ್ಯುತ್, ನೀರು, ಹಾಲಿನ ದರ ಏರಿಕೆ ಪ್ರಸ್ತಾಪ ಸೇರಿ ಮೈಕ್ರೋ ಫೈನಾನ್ಸ್ ಕಿರುಕುಳ, ಗ್ಯಾರಂಟಿಗಳ ಹಣ ಬಿಡುಗಡೆ ವಿಳಂಬ, ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಕೊರತೆ, ಕೆಪಿಎಸ್‌ಸಿ ಹಗರಣ, ರಾಜ್ಯಪಾಲ–ಸರ್ಕಾರ ನಡುವಿನ ಜಟಾಪಟಿ, ಬೆಂಗಳೂರು ನಗರದ ಸಮಸ್ಯೆಗಳನ್ನು ಮುಖ್ಯ ಅಸ್ತ್ರವಾಗಿಟ್ಟು ಕೊಂಡು ಸರ್ಕಾರದ ಮೇಲೆ ಮುಗಿ ಬೀಳಲು ಪ್ರತಿಪಕ್ಷಗಳಾದ ಬಿಜೆಪಿ–ಜೆಡಿಎಸ್ ಸಜ್ಜಾಗಿದ್ದು, ಉಭಯ ಸದನಗಳಲ್ಲಿ ತೀವ್ರ ಚರ್ಚೆ, ವಾಗ್ವಾದಕ್ಕೆ ಕಾರಣವಾಗುವ ಸಾಧ್ಯತೆ ಇದೆ.

ಇದಕ್ಕೆ ಪ್ರತಿಯಾಗಿ ನ್ಯಾ.ಕುನ್ಹಾ ವರದಿ, ಹೆಚ್.ಡಿ.ಕುಮಾರಸ್ವಾಮಿ ವಿರುದ್ಧದ ಪ್ರಕರಣ, ಮಹದಾಯಿ, ಕೃಷ್ಣಾ ಮೇಲ್ದಂಡೆ, ಮೇಕೆದಾಟು ಯೋಜನೆಗಳಿಗೆ ಅಂಗೀಕಾರ ನೀಡಲು ಸುದೀರ್ಘ ಕೇಂದ್ರ ಸರ್ಕಾರದ ಧೋರಣೆ, ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಮಾಡಿರುವ ಅನ್ಯಾಯ, ತೆರಿಗೆ ಪಾಲು ಕಡಿತ ಮತ್ತಿತರ ಅಂಕಿ–ಅಂಶಗಳನ್ನು ಮುಂದಿಟ್ಟು ಕೊಂಡು ಪ್ರತಿಪಕ್ಷಗಳ ವಿರುದ್ಧ ಹರಿಹಾಯಲು ಕಾಂಗ್ರೆಸ್ ಕೂಡ ಸಿದ್ಧವಾಗಿದೆ.

ಸರ್ಕಾರದ ವಿರುದ್ಧ ಸದನದಲ್ಲಿ ಪ್ರತಿಭಟನೆ

ಕಾರ್ಯಗಳು ನಡೆಯುತ್ತಿಲ್ಲ. ಕಾಂಗ್ರೆಸ್ ಶಾಸಕರೇ ಈ ಮಾತನ್ನು ಹೇಳುತ್ತಿದ್ದಾರೆ. ಇದರ ಜೊತೆಗೆ ಹಣ ಇಲ್ಲದೆ ಒಂದು ಲಕ್ಷ ಕೋಟಿ ರೂ. ಸಾಲ ಮಾಡಲಾಗುತ್ತಿದೆ. ಜನರ ಮೇಲೆ ತೆರಿಗೆ ಹೊರೆ ಹೇರಲಾಗುತ್ತಿದೆ. ಇದನ್ನು ಖಂಡಿಸಿ ಮಾ.7 ರಂದು ಶಾಸಕರ ಭವನದಿಂದ ವಿಧಾನಸೌಧಕ್ಕೆ ಪಾದಯಾತ್ರೆ ಹಾಗೂ ಪ್ರತಿಭಟನೆ ಮಾಡಲಾಗುವುದು ಎಂದು ಅಶೋಕ್ ತಿಳಿಸಿದರು. ದಲಿತರ ಹಣವನ್ನು ದಲಿತರಿಗೆ ಸಂಬಂಧಿಸಿದ ಯೋಜನೆಗಳಿಗೆ ಮಾತ್ರ ಬಳಸಬೇಕು. ಆದರೆ, ಸಿಎಂ ಸಿದ್ದರಾಮಯ್ಯ ನವರ ಸರ್ಕಾರ ದಲಿತರ ಹಣವನ್ನು ಗ್ಯಾರಂಟಿಗೆ ಬಳಸಿದೆ ಎಂದು ಆರೋಪಿಸಿದ್ದಾರೆ.

ಕಿವೀಸ್ ವಿರುದ್ಧ ಭಾರತಕ್ಕೆ ಜಯ

ನೀಡಿದ ಕೇನ್ ವಿಲಿಯಮ್ಸನ್ 7 ಬೌಂಡರಿ ಒಳಗೊಂಡ 81 ರನ್ ಗಳಿಸಿದಾದರೂ ತಂಡವನ್ನು ಗೆಲುವಿನ ದಡಕ್ಕೆ ಕೊಂಡೊಯ್ಯಲು ಸಾಧ್ಯವಾಗಲಿಲ್ಲ. ಅಕ್ಷರ್ ಪಟೇಲ್ ಬೌಲಿಂಗ್‌ನಲ್ಲಿ ಭಾರೀ ಹೊಡೆತಕ್ಕೆ ಮುಂದಾಗಿ ವಿಕೆಟ್ ಒಪ್ಪಿಸಿದರು.

ಭಾರತದ ಪರ ವರುಣ್ ಚಕ್ರವರ್ತಿ 5, ಕುಲ್ದೀಪ್ ಯಾದವ್ 2, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್ ಮತ್ತು ರವೀಂದ್ರ ಜಡೇಜಾ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಭಾರತದ ಬ್ಯಾಟ್ಸ್‌ಮನ್‌ಗಳು ನ್ಯೂಜಿಲೆಂಡ್ ಬೌಲರ್‌ಗಳ ಬಿಗಿ ಬೌಲಿಂಗ್ ದಾಳಿಗೆ ತಿಣುಕಾಡಿದರು. ತಂಡದ ಮೊತ್ತ 30 ರನ್ ಆಗುವಷ್ಟರಲ್ಲಿ ನಾಯಕ ರೋಹಿತ್ ಶರ್ಮಾ 15, ಉಪನಾಯಕ ಶುಭಮನ್ ಗಿಲ್ 2, ವಿರಾಟ್ ಕೊಹ್ಲಿ 11 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ 4ನೇ ವಿಕೆಟ್‌ಗೆ 98 ರನ್‌ಗಳ ಜೊತೆಯಾಟವಾಡುವ ಮೂಲಕ ಶ್ರೇಯಸ್ ಅಯ್ಯರ್ ಮತ್ತು ಅಕ್ಷರ್ ಪಟೇಲ್ ನಿರ್ಣಾಯಕವಾಗಿಯಲ್ಲಿ ತಂಡದ ಮೊತ್ತ ಹೆಚ್ಚಿಸಿದರು. ಈ ವೇಳೆ 61 ಎಸೆತಗಳಲ್ಲಿ 1 ಸಿಕ್ಸರ್, 3 ಬೌಂಡರಿ ಒಳಗೊಂಡ 42 ರನ್ ಗಳಿಸಿದ್ದ ಅಕ್ಷರ್ ಪಟೇಲ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಜವಾಬ್ದಾರಿಯುತ ಬ್ಯಾಟಿಂಗ್ ನಡೆಸಿದ ಶ್ರೇಯಸ್ ಅಯ್ಯರ್ 98 ಎಸೆತಗಳಲ್ಲಿ 2 ಸಿಕ್ಸರ್, 4 ಬೌಂಡರಿ ಒಳಗೊಂಡ 79ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಕನ್ನಡಿಗ ಕೆ.ಎಲ್.ರಾಹುಲ್ 23, ಹಾರ್ದಿಕ್ ಪಾಂಡ್ಯ 45, ರವೀಂದ್ರ ಜಡೇಜಾ 16 ರನ್ ಗಳಿಸಿ ತಂಡ ಸ್ಪರ್ಧಾತ್ಮಕ ಮೊತ್ತ ದಾಖಲಿಸಲು ನೆರವಾದರು. ನ್ಯೂಜಿಲೆಂಡ್ ಪರ ಮ್ಯಾಟ್ ಹೆನ್ರಿ 5, ಕೈಲ್ ಜೆಮಿಸನ್, ವಿಲಿಯಮ್ ಓ'ರೂರ್ಕ್, ಮಿಚೆಲ್ ಸ್ಯಾಂಟ್ನರ್, ರಚಿನ್ ರವೀಂದ್ರ ತಲಾ ಒಂದೊಂದು ವಿಕೆಟ್ ಪಡೆದರು. ಭಾರತದ ಪರ ಉತ್ತಮ ಬೌಲಿಂಗ್ ಪ್ರದರ್ಶನ ನೀಡಿದ ವರುಣ್ ಚಕ್ರವರ್ತಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

25 ವರ್ಷದ ಬಳಿಕ ಗೆಲುವು: ಚಾಂಪಿಯನ್ಸ್ ಟ್ರೋಫಿಯಲ್ಲಿ 25 ವರ್ಷಗಳ ಬಳಿಕ ಇದೆ ಮೊದಲ ಬಾರಿಗೆ ಭಾರತ ಮತ್ತು ನ್ಯೂಜಿಲೆಂಡ್ ಮುಖಾಮುಖಿಯಾಗಿದ್ದವು. ಈ ಹಿಂದೆ 2000ದಲ್ಲಿ ಚಾಂಪಿಯನ್ಸ್ ಟ್ರೋಫಿ ಫೈನಲ್ ಪಂದ್ಯದಲ್ಲಿ ಭಾರತವನ್ನು ಕಿವೀಸ್ ಪಡೆ ಮಣಿಸಿ ಚಾಂಪಿಯನ್ ಆಗಿತ್ತು. ಇದೀಗ ಭಾರತ ಹಳೇ ಸೇಡನ್ನು ತೀರಿಸಿಕೊಂಡಿದೆ.

ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ

ಟೀಕೆ ಮಾಡಬಹುದು ಅಷ್ಟೇ. ಮುಖ್ಯಮಂತ್ರಿ ಹುದ್ದೆ ಯಾರಿಗೆ ಕೊಡುವ ಪರ ಅಲ್ಲ ಅದು ಅವರು ಸಂಪಾದನೆ ಮಾಡಿರುವ ಶಕ್ತಿಯೇ ಮುಖ್ಯಮಂತ್ರಿ ಪದವಿ. ಕರ್ನಾಟಕ ಪುಣ್ಯಭೂಮಿಯಲ್ಲಿ ಆಡಿದ ಈ ಮಾತು ನೂರಕ್ಕೆ ನೂರು ಸತ್ಯ. ಆದರೆ ಡಿಕೆಶಿ ಅವರೇ ನೀವು ಮಾತ್ರ ಯಾವುದಕ್ಕೂ ಪ್ರತ್ಯುತ್ತರ ಕೊಡಬಾರದು. ಡಿಕೆಶಿ ಮುಖ್ಯಮಂತ್ರಿ ಯಾಗುವುದು ಸೆಟಲ್ಡ್ ಮ್ಯಾಟರ್. ಇದು ತೀರ್ಮಾನ ಆಗಿರುವ ವಿಚಾರ ಎಂದರು.

ಡಿಕೆಶಿ ಸಿಎಂ, ಜನರ ತೀರ್ಮಾನ ಆಗಿದೆ: ಜನರ ಮನಸ್ಸಿನಲ್ಲಿ ಒಂದು ತೀರ್ಮಾನ ಆಗಿದೆ. ಡಿ.ಕೆ.ಶಿವಕುಮಾರ್ ಮುಂದಿನ ಸಿಎಂ ಆಗಲಿದ್ದಾರೆ. ಮ್ಯಾಟರ್ ಆಫ್ ಟೈಂ ಅಷ್ಟೇ. ಅವರ ಬೆಂಬಲಿಗರು ಕೂಡ ನಾವೇ ಮಾಡಿಸಿದ್ದೇವೆ ಎಂದು ಹೇಳಿಕೊಳ್ಳಬೇಕಾಗಿಲ್ಲ. ಕೋಟಿ ಕೋಟಿ ಪ್ರಯತ್ನ ಮಾಡಿದರೂ ಡಿ.ಕೆ.ಶಿವಕುಮಾರ್ ಅವರಿಗೆ ಸಿಎಂ ಹುದ್ದೆ ತಪ್ಪಿಸಲು ಯಾರಿಗೂ ಸಾಧ್ಯವಿಲ್ಲ ಅನ್ನೋದು ಶತಸಿದ್ಧ. ನೀವು ದೇವಸ್ಥಾನಕ್ಕೆ ಹೋಗುವುದರಲ್ಲಿ ತಪ್ಪಿಲ್ಲ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ ದೇವರ ಭೂಮಿ. ಆದರೆ ಬಿಜೆಪಿಯವರು ದೇವರ ಭೂಮಿಯನ್ನು ಋಣಭೂಮಿಯನ್ನಾಗಿ ಮಾಡಿದ್ದಾರೆ ಎಂದು ಬಿಜೆಪಿ ವಿರುದ್ಧ ಕಿಡಿಕಾರಿದರು.

ಜಾತಿ ರಾಜಕಾರಣ ಬಿಟ್ಟಿಡಿ

ಮುಟ್ಟಿಸುವ ಕೆಲಸ ಮಾಡುತ್ತೇವೆ. ರಾಜ್ಯದಲ್ಲಿ ನೂರು ಹೊಸ ಕಾಂಗ್ರೆಸ್ ಕಚೇರಿ ತೆರೆದು ಸೇವೆ ಕೊಡಬೇಕು ಎಂದು ತಿಳಿಸಿದ್ದಾರೆ. ಯೂಥ್ ಕಾಂಗ್ರೆಸ್ ಎಲೆಕ್ಷನ್ ಆಗಿದೆ. ನೀವು ಹಲವು ಜನ ಗೆದ್ದಿದ್ದೀರಿ. ನೀವು ಗೆದ್ದಿರೋದು ಬಿಜೆಪಿ ಮೇಲೆ ಅಲ್ಲ, ಕಾಂಗ್ರೆಸ್ ಪಕ್ಷದ ಒಳಗೆ. ಗೆದ್ದವರು ಸೋತವರನ್ನು ಒಟ್ಟಿಗೆ ತೆಗೆದುಕೊಂಡು ಹೋಗಬೇಕು. ಪಕ್ಷದೊಳಗೆ ಗುಂಪುಗಾರಿಕೆ ಮಾಡಬೇಡಿ ಬಿಟ್ ಬಿಡಿ. ಕಾಂಗ್ರೆಸ್‌ನಲ್ಲಿ ಗುಂಪುಗಾರಿಕೆ ಮಾಡಬೇಡಿ ಎಂದು ಹೇಳಿದ್ದಾರೆ. ಜಿಪಂ, ತಾಪಂ ಚುನಾವಣೆ ಬರ್ತಾ ಇದೆ. ದಕ್ಷಿಣ ಕನ್ನಡ ಉಡುಪಿ ಜಿಲ್ಲೆಯಲ್ಲಿ 9 ಸೀಟ್ ಗೆಲ್ಬೇಕು. ಮೂರು–ಆರು ತಿಂಗಳು ನೋಡ್ತೀವಿ. ಹೊಸ ಕ್ಯಾಂಡಿಡೇಟ್‌ಗಳನ್ನು ಚೇಂಜ್ ಮಾಡ್ತೀವಿ. ಕಾಂಗ್ರೆಸ್ ಪಕ್ಷದಲ್ಲಿ ವ್ಯಕ್ತಿ ಪೂಜೆ ಮಾಡುವುದನ್ನು ಬಿಡಿ. ಪಕ್ಷ ಪೂಜೆ ಮಾಡಿ ಎಂದು ಸೂಚಿಸಿದ್ದಾರೆ.

ಬಸ್ ನಿಲ್ದಾಣ ನಿರ್ಮಾಣ ಪ್ರಕ್ರಿಯೆ ಆರಂಭ

ಮಾಡಲಾಗುತ್ತಿದ್ದು, ಕೆಎಸ್‌ಆರ್‌ಟಿಸಿಗೆ ಆದಾಯ ಬರುವಂತೆ ಕಮರ್ಷಿಯಲ್ ಕಾಂಪ್ಲೆಕ್ಸ್ ಕೂಡ ನಿರ್ಮಾಣ ಮಾಡಲಾಗುತ್ತಿದೆ.

ಟ್ರಾಫಿಕ್ ಸರ್ವೆ: ಬನ್ನಿಮಂಟಪದಲ್ಲಿ ಗ್ರಾಮಾಂತರ ಬಸ್ ನಿಲ್ದಾಣ ಸ್ಥಳಾಂತರ ಮಾಡಿದರೆ ವಾಹನ ದಟ್ಟಣೆ ಆಗುವುದೇ ಎಂಬ ಬಗ್ಗೆ ಟ್ರಾಫಿಕ್ ಸರ್ವೆ ಮಾಡಲಾಗುತ್ತಿದೆ. ಹೊಸ ಬಸ್ ನಿಲ್ದಾಣದಿಂದ ಬೆಂಗಳೂರು, ಶಿವಮೊಗ್ಗ, ತುಮಕೂರು, ಹುಬ್ಬಳ್ಳಿ, ಧಾರವಾಡ ಸೇರಿದಂತೆ ದೂರದ ಜಿಲ್ಲೆ ಹಾಗೂ ಅಂತರಾಜ್ಯಗಳಿಗೆ ಇಲ್ಲಿಂದ ಬಸ್‌ಗಳು ಸಂಚಾರಿಸಲಿವೆ. ಹಾಲಿ ಇರುವ ಗ್ರಾಮಾಂತರ ಬಸ್ ನಿಲ್ದಾಣದಿಂದ ಮೈಸೂರಿನ ವಿವಿಧ ತಾಲೂಕು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಿಗೆ ಸಂಚರಿಸಲಿದೆ.

ನೂತನ ಬಸ್ ನಿಲ್ದಾಣ ನಿರ್ಮಾಣಕ್ಕೆ ಹೋಟೆಲ್ ಮಾಲೀಕರ ಸಂಘ ಸೇರಿದಂತೆ ಹಲವರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಗ್ರಾಮಾಂತರ ಬಸ್ ನಿಲ್ದಾಣದ ಬಳಿ ಇರುವ ಸರ್ಕಾರಿ ಅತಿಥಿ ಗೃಹ ಸ್ಥಳ ಹಾಗೂ ಪೀಪಲ್ಸ್ ಪಾರ್ಕ್ ಜಾಗವನ್ನು ಬಳಸಿಕೊಂಡು ಬಸ್ ನಿಲ್ದಾಣ ನಿರ್ಮಾಣ ಮಾಡಿ ಎಂದು ಆಗ್ರಹಿಸಿದ್ದಾರೆ. ಗ್ರಾಮಾಂತರ ಬಸ್ ನಿಲ್ದಾಣವನ್ನು ಬನ್ನಿಮಂಟಪಕ್ಕೆ ಸ್ಥಳಾಂತರ ಮಾಡಿದರೆ ಪ್ರಯಾಣಿಕರು ಅಷ್ಟು ದೂರ ಹೋಗಲು ತೊಂದರೆ ಆಗುತ್ತದೆ. ಅಲ್ಲದೆ ಬನ್ನಿಮಂಟಪದ ರಸ್ತೆಯಲ್ಲಿ ವಾಹನ ದಟ್ಟಣೆ ಸಮಸ್ಯೆ ಕೂಡ ಎದುರಾಗುತ್ತದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಯಾವುದೇ ವಿರೋಧಕ್ಕೆ ಮಣೆ ಹಾಕದ ಸರ್ಕಾರ ಬನ್ನಿಮಂಟಪದಲ್ಲಿ ನೂತನ ಬಸ್ ನಿಲ್ದಾಣ ನಿರ್ಮಾಣ ಪ್ರಕ್ರಿಯೆ ಆರಂಭಿಸಿದೆ.

ಮನೆ ಭೋಗ್ಯಕ್ಕಿದೆ
ಆರ್‌ಸಿಸಿ ಮನೆ
ಸಣ್ಣ ಕುಟುಂಬಕ್ಕೆ
ಆದ್ಯತೆ 2ನೇ ಮಹಡಿ
4ನೇ ಮೇನ್ ಚಾಮುಂಡಿಪುರಂ
(ಅಪೂರ್ವ ಹೋಟೆಲ್ ಎದುರು) ಮೈಸೂರು
8971220695

30x40/30x50 Sites MUDA ಅಪ್ರೂವ್ಡ್ ಲೇಔಟ್ಸ್
1) ಜೆ.ಪಿ.ನಗರ – ಶ್ರೀರಾಂಪುರ–ಆರ್.ಟಿ.ನಗರ ರಿಂಗ್ ರಸ್ತೆ ಸಮೀಪ 48–55 ಲಕ್ಷ
2) ವಿಜಯನಗರ 4ನೇ ಹಂತ – 48 ಲಕ್ಷ
3) ಬನ್ನೂರು ರಸ್ತೆ, ವಿದ್ಯಾವಿಕಾಸ್ ಎದುರು– 45 ಲಕ್ಷ
ತಕ್ಷಣ ಮನೆ ಕಟ್ಟಲು, ನಮ್ಮ ಬಡಾವಣೆಗಳಲ್ಲಿ
ಮಧ್ಯವರ್ತಿಗಳು ಕ್ಷಮಿಸಿ
8123075038

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

MUDA SITE FOR SALE
ದಟ್ಟಗಳ್ಳಿ ರಿಂಗ್ ರೋಡ್ ಆದಿತ್ಯ ಸರ್ಕಲ್ ಹತ್ತಿರ 'ಅಶ್ವತ್ಥಾಮ ಲೇಔಟ್' 40'×60' ಈಸ್ಟ್ ಫೇಸಿಂಗ್ ಸೈಟ್.
Mob: 9886048471

ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸಾದವರನ್ನು ನೋಡಿಕೊಳ್ಳಲು ಹಾಗೂ ಮಗು, ಬಾಣಂತಿ ಹಾಗೂ ಮನೆಯಲ್ಲೇ ಇದ್ದು ಅಡುಗೆ ಮನೆ ಕೆಲಸ ಮಾಡುವವರು ಅನುಭವ ಇರುವ, ಇಲ್ಲದೆ ಇರುವ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ಬೆಳಿಗ್ಗೆ ಅಥವಾ ರಾತ್ರಿ ಅಥವಾ 24 ಗಂಟೆ. ಸಂಪರ್ಕಿಸಿ:
Mob: 8123630683

HOME APPLIANCES SERVICE
ಫ್ರಿಡ್ಜ್, ವಾಶಿಂಗ್ ಮೆಶೀನ್, ಮೈಕ್ರೋವೋವನ್, ಎಲ್‌ಸಿಡಿ, ಸೋಲಾರ್, ಯುಪಿಎಸ್, ವಾಟರ್ ಪ್ಯೂರಿಫೈಯರ್, ಸೇಲ್ಸ್ ಅಂಡ್ ಸರ್ವೀಸ್, ನಿಮ್ಮ ಮನೆಯ ಹತ್ತಿರ ದೊರೆಯುತ್ತದೆ.
Contact: Srinivas
9379699229

Vasthra Lakshmi Saree Bhandar
ವಸ್ತ್ರ ಲಕ್ಷ್ಮೀ ಸೀರೆ ಭಂಡಾರ್
7th Main Road, Behind Amritha College, AIISH Layout, Bogadi 2nd Stage, Mysore-26
Sarees, Kurthis, Dress Materials etc.,
Timings: 10 am to 7.30 pm.
Mob: 9380015635

FOR RENT
A)100 ft X 100 ft total 10,000 sq.ft is suitable for showroom & other commercial purposes.
B) 80 ft X 60 ft total 4,800 sft is suitable for godown.
C) 40 ft X 100 ft total 4,000 sft is suitable for godown.
9900996950

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಬೇಕಾಗಿದ್ದಾರೆ. ಹಾಗೂ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಕೆ.ಆರ್.ಎಸ್. ಜೆಪಿ.ನಗರ. ವಿದ್ಯಾರ್ಹತೆ : SSLC PASS or Fail
9538886328



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

HOUSE FOR SALE
West site, North facing, 20x30 MUDA allotted layout, Shanthaveri Gopalagowdanagar. Price Rs. 49 Lakhs (slightly negotiable). *Contact:*
Mob: 9945623565, 9036379132, 8123814095
BROKERS EXCUSE

ಬೇಕಾಗಿದ್ದಾರೆ
ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ.
6364748485

ಸುವರ್ಣ ಯಾತ್ರಾ
9 ದಿನಗಳ ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ 15/3/25. 8 ದಿನಗಳ ಗುಜರಾತ್ ಪ್ರವಾಸ 4/4/25. 3 ದಿನಗಳ ಶಿರಡಿ ಪ್ರವಾಸ 3 ಜ್ಯೋತಿರ್ಲಿಂಗಗಳೊಂದಿಗೆ 7/3/2025. 4 ದಿನಗಳ ಮಧ್ಯಪ್ರದೇಶ್ ಪ್ರವಾಸ 2 ಜ್ಯೋತಿರ್ಲಿಂಗಗಳೊಂದಿಗೆ 16/4/2025. 14 ದಿನಗಳ ಚಾರ್‌ಧಾಮ್ ಪ್ರವಾಸ 2/5/2025.
9008381022 / 9019462508

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

COMMERCIAL SITE FOR SALE
22350 Sq.ft (½ Acre) Semi Commercial at Bogadi Road, Near Harsha Bar, Mysore is for Sale
Contact: 98866 22773

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ದಿಂದ 20,000 ಸಂಪಾದಿಸಿ.
Mob: 9731891409

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

AFFIDAVIT
I, Kumar. C, S/o Chikkanna, residing at #175, 7th Cross, M.G.Koppal, Hebbal Main Road, Vijayanagar Post, Mysuru-570 017, declare that my correct name is Kumar. C as my Aadhaar Card No. 9649 4970 6306 and Voter ID Card No. TZG6240378 and other documents is mentioned correctly as Kumar. C. But at the time of issuing my Passport No. M7486593 my name was mentioned as Kumara, hence I make this affidavit in front of Notary C. Mangala on 1-3-2025 that Kumar. C and Kumara both names are belongs to my name and same one person.
Sd/- Kumar C.

WANTED BRIDE
Boy: Srihari R.
Gothra: Bharadwaja
DOB: 11-05-1993
Madhwa Brahmin
B.E. - TCS Co., B'lore
Contact: Mother: Lakshmi Y.V.
9164933056, 8618082189

ಮನೆಯಿಂದಲೇ ಕೆಲಸ
ಗೃಹಿಣಿಯರು, ವಿದ್ಯಾರ್ಥಿಗಳು, ವಯಸ್ಕರು, ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತು ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್, ಡಾಟಾ ಎಂಟ್ರಿ ವಾಟ್ಸಾಪ್ ಟೈಪಿಂಗ್ ಮತ್ತು ಪ್ಯಾಕಿಂಗ್ ಕೆಲಸಗಳು ಲಭ್ಯವಿದೆ. ಬಿಡುವಿನ ವೇಳೆಯಲ್ಲಿ ಕೆಲಸ ಮಾಡಿ ಗಳಿಸಿ ತಿಂಗಳಿಗೆ 20000 ದಿಂದ 30000ವರೆಗೆ ಕರೆಮಾಡಿ (ದಿವ್ಯ)
9632583367

INVESTOR ಬೇಕಾಗಿದ್ದಾರೆ
Integrated PU Science Residential College ಅಭಿವೃದ್ಧಿಪಡಿಸಲು 1.5 ಕೋಟಿ ವರೆಗೆ Invest ಮಾಡಲು ಆಸಕ್ತರು ಸಂಪರ್ಕಿಸಿರಿ ಕನಿಷ್ಠ 5 ಲಕ್ಷದಿಂದ 20 ಲಕ್ಷದವರೆಗೆ. ಸೂಕ್ತ ಭದ್ರತೆ ಮತ್ತು ಡಿವಿಡೆಂಡ್ ನೀಡಲಾಗುವುದು
ಸಂಪರ್ಕಿಸಿರಿ
7019012485

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇ ಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
Mob: 6360884930

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸೈಟು, ಮನೆಗಳು ಮಾರಾಟಕ್ಕೆ / ಬಾಡಿಗೆ / ಭೋಗ್ಯಕ್ಕೆ
40x60, 2 BHK ರಾಮಕೃಷ್ಣನಗರ 'H' Block, independent
20x30, 2 BHK ಶ್ರೀರಾಂಪುರ
20x30, 3 BHK Duplex ಲಲಿತಾದ್ರಿನಗರ
90x60, 100 Feet Road, ನಾಡಿಗ್‌ನಗರ
Hunsur Road, 1300 sq.
9448938989, 7892035789

FOR SALE
Paper Cup (Tea Cups) Machine is for sale.
Please contact:
6366803708, 9845823708

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು, ಮಹಿಳೆಯರು ಬೇಕಾಗಿದ್ದಾರೆ. ಸ್ಥಳ: ನಜರ್‌ಬಾದ್ ಮತ್ತು ಅಗ್ರಹಾರ, ಮೈಸೂರು. ಸಮಯ: ಬೆಳಿಗ್ಗೆ 9.30 ರಿಂದ ರಾತ್ರಿ 8.30 / 9 ರವರೆಗೆ.
ಸಂಬಳ: 10,000 ದಿಂದ ಪ್ರಾರಂಭ.
9986311444, 9986322444

HOUSE FOR RENT
2 BHK with attached bathrooms, ground floor, opp. to Royal Oak Furniture Shop, Ring Road, Rajajinagar, Bogadi 2nd Stage, Mysore-22.
9980323708, 6366803708

ಸೈಟು ಮಾರಾಟಕ್ಕಿದೆ
KRS ಹತ್ತಿರ ಅಭಿವೃದ್ಧಿ ಹೊಂದಿರುವ ಲೇಔಟ್‌ನಲ್ಲಿ 30X40, ಉತ್ತರ ದಿಕ್ಕಿನ ಇ ಖಾತಾ ಹೊಂದಿರುವ ಸೈಟು ನಂ. 25, 13 ಲಕ್ಷ 80 ಸಾವಿರಕ್ಕೆ ಮಾರಾಟಕ್ಕಿದೆ
ಸಂಪರ್ಕಿಸಿ: 9900256387

JCB ಡ್ರೈವರ್ ಬೇಕಾಗಿದ್ದಾರೆ
ನಂಜನಗೂಡಿನಲ್ಲಿ ಜೆ.ಸಿ.ಬಿ. ಹಾಗೂ ಟ್ರ್ಯಾಕ್ಟರ್ ಓಡಿಸಲು ಚಾಲಕರು ಬೇಕಾಗಿದ್ದಾರೆ. ವಸತಿ ಮತ್ತು ಊಟದ ಸೌಲಭ್ಯವಿರುತ್ತದೆ.
Mob: 9880059793

ತಕ್ಷಣ ಬೇಕಾಗಿದ್ದಾರೆ
ಸೌತ್ ಇಂಡಿಯನ್ ಅಡುಗೆ ಭಟ್ಟರು
ದೋಸೆ ಇಡ್ಲಿ ಮಾಡುವವರು
ಆಕರ್ಷಕ ಸಂಬಳ, ವಸತಿ ESI & PF ಸೌಲಭ್ಯವಿರುತ್ತದೆ.
99862 05777 / 9108373404

AIR COOLER EXCHANGE OFFER
AIR COOLER SERVICE CENTER MYSORE
UPTO RS 4000 OFF SERVICE CENTER FOR AIR COOLER SYMPHONY, KENSTAR ORIENT USHA BAJAJ & MICROWAVE OVEN SERVICES INDIAN/IMPORTED MICROWAVE OVEN SERVICES
9900237315
9845963421, 08214266495

ಸುವರ್ಣಾವಕಾಶ
ಎಕ್ಸಿಕ್ಯೂಟಿವ್ ಫೀಲ್ಡ್‌ನಲ್ಲಿ ಅನುಭವವುಳ್ಳ ತುಂಬಾ ಚಾಣಾಕ್ಷತನದಿಂದ ಮಾತನಾಡುವ ಹುಡುಗ ಮತ್ತು ಹುಡುಗಿಯರು ಬೇಕಾಗಿದ್ದಾರೆ. ಹಾಗೂ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕಿನಾದ್ಯಾಂತ ಡಿಸ್ಟ್ರಿಬ್ಯೂಟರ್ಸ್ ಬೇಕಾಗಿದ್ದಾರೆ.
9880217548

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಸೂಪರ್‌ವೈಸರ್ಸ್ (10 & ಮೇಲ್ಪಟ್ಟು)
2) ಸೆಕ್ಯೂರಿಟಿ ಗಾರ್ಡ್ಸ್ (10 ಪಾಸ್/ ಮೇಲ್ಪಟ್ಟು)
3) ಹೌಸ್ ಕೀಪಿಂಗ್
ಹೆಬ್ಬಾಳು ಮತ್ತು ಹೂಟಗಳ್ಳಿ ಕೈಗಾರಿಕಾ ಪ್ರದೇಶಕ್ಕೆ ಅನುಭವವುಳ್ಳ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
9739199355

ನೇರ ಸಂದರ್ಶನ
ಹೌಸ್ ಕೀಪಿಂಗ್ ಹುಡುಗರು–5 ಹುದ್ದೆ (ಊಟ/ESI/PF ಸೌಲಭ್ಯವಿದೆ)
ಗಾಯಿತ್ರಿಪುರಂ ಸುತ್ತಮುತ್ತ ಆದ್ಯತೆ)
ಸೆಕ್ಯೂರಿಟಿ ಗಾರ್ಡ್ಸ್ 5 ಹುದ್ದೆ
(25 ರಿಂದ 45 ಆಕರ್ಷಕ ಸಂಬಳ
ಮಹಿಳೆ (ಹೌಸ್ ಕೀಪಿಂಗ್ ಮನೆಯಲ್ಲಿ ಇರಬೇಕು.)
9900749104

ತಾರಸಿ ಸೋರುವಿಕೆ & ಸಂಪ್ ಲೀಕೇಜ್ & ಬಾತ್ ರೂಂ ಲೀಕೇಜ್ ಸರಿಪಡಿಸಲಾಗುವುದು
7829236625

HOUSE FOR SALE
24X30
NORTH FACE LIG 123, 4ನೇ ಕ್ರಾಸ್, ಗಂಗೋತ್ರಿ ಹುಡ್ಕೋ ಲೇಔಟ್ ಮಾರುತಿ ದೇವಸ್ಥಾನದ ಹತ್ತಿರ
9008423578

SITE FOR SALE
40X60, West Facing Police Layout 1st Stage, Alanahally, Mysore
Price - 98 Lakhs
96206 14970

ಮನೆ ಮಾರಾಟಕ್ಕಿದೆ
ಒಟ್ಟು ವಿಸ್ತೀರ್ಣ 45x55 12x55ರಲ್ಲಿ ಒಟ್ಟು 3 ಅಂತಸ್ತು ಕಟ್ಟಡ ಮತ್ತು 16 ಮಳಿಗೆಗಳು 43x45 ರಲ್ಲಿ 7 ಮನೆಗಳು # 1533 8ನೇ ಕ್ರಾಸ್, ತ್ಯಾಗರಾಜ್ ರೋಡ್, ಅಗ್ರಹಾರ ಕೆ.ಆರ್.ಮೊಹಲ್ಲಾ, ಮೈಸೂರು
6361637505
9480291901

WANTED
Female graduates and NST, NTT trained candidates for pre-school in Bogadi
Contact phone number
6364227636

ಸೈಟುಗಳು ಮಾರಾಟಕ್ಕಿವೆ
No.263 & 264
40x60 N/F & N/W Corner
ಅಶ್ವಿನಿ ಗಾರ್ಡನ್ ಬ್ಲಾಕ್ –2 ಕಡಕೊಳದ ನಂತರ ಮೈಸೂರು–ನಂಜನಗೂಡು ರಸ್ತೆ
9448958332

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು SSLC, ITI Pass or Fail ಹುಡುಗರು ಬೇಕಾಗಿದ್ದಾರೆ.
(Age-18-30) ಸಂಬಳ: 20,000/–
ಅನುಕೂಲತೆ: ESI, PF, Canteen ಸೌಲಭ್ಯವಿರುತ್ತದೆ.
7090309148
7019380847

ಕಳೆದಿದೆ
ಡಾ॥ ಬಿ.ಎಂ.ರಾಮಣ್ಣ ನಂ.300/ಸಿ, ಆನಂದಮಾರ್ಗ, 7ನೇ ಮೇನ್, 4ನೇ ಕ್ರಾಸ್, 2ನೇ ಹಂತ, ಸಿದ್ಧಾರ್ಥನಗರ, ಮೈಸೂರು–570011, ಇಲ್ಲಿ ವಾಸವಾಗಿದ್ದು ಮೇಲ್ಕಂಡ ಸ್ವತ್ತಿಗೆ ಸಂಬಂಧಪಟ್ಟಂತೆ ಇವರಿಗೆ ಮುಡಾದಿಂದ ದಿ:14/4/77ರಂದು ನೀಡಿದ್ದ ಟೈಟಲ್ ಡೀಡ್ ದಿನಾಂಕ 7–7–2024ರಂದು ಕಳೆದುಹೋಗಿದ್ದು ಯಾರಿಗಾದರೂ ಸಿಕ್ಕಲ್ಲಿ ಸಂಪರ್ಕಿಸಿ:
9449334867

WANTED
HELPER FOR FABRIC (CLOTH) SHOP
SALARY RS.15000/- PER MONTH
9591616966

HOUSE FOR RENT
1 BHK House in First Floor furnished / 24x7 Hot water
Location: Hootagally
Rent: Rs.6,500/-
(Only for Girls/ Working Women
9379888558

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ ಮತ್ತು ಸೂಪರ್‌ವೈಸರ್ 15000 ಸಾವಿರ 12 ಗಂಟೆ ಪಾಳಿ ಹೆಬ್ಬಾಳ್ ಸುತ್ತಮುತ್ತ ಪ್ರದೇಶದಲ್ಲಿ
ಸಂಪರ್ಕಿಸಿ:
9035367083
8123769346

ತಕ್ಷಣ ಬೇಕಾಗಿದ್ದಾರೆ
ಟಿ.ನರಸೀಪುರ ರಸ್ತೆ, ಚಿಕ್ಕಳ್ಳಿ, ಮೇಟಗಳ್ಳಿ, ಇಲವಾಲ, ಕೆ.ಆರ್.ಆಸ್ಪತ್ರೆ ಹತ್ತಿರ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಸೂಪರ್‌ವೈಸರ್, ಫೀಲ್ ಆಫೀಸರ್ ಬೇಕಾಗಿದ್ದಾರೆ. ESI & PF ಹಾಗೂ ವಸತಿ ಸೌಲಭ್ಯವಿರುತ್ತದೆ.
8971367078

ಬೇಕಾಗಿದ್ದಾರೆ
ಫುಡ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 45
ಸಂಬಳ: ESI PF ಕಳೆದು 17000 ಸಿಗುತ್ತದೆ.
Week Off ಹಾಗೂ Shift ಗಳು ಇರುತ್ತದೆ.
ಆಸಕ್ತಿಯುಳ್ಳವರು ಬೆಳಿಗ್ಗೆ 9 ಗಂಟೆಗೆ ಬಂದು ಸಂಪರ್ಕಿಸಿ
ಸ್ಥಳ: CIPET ಕಾಲೇಜ್ ಹತ್ತಿರ, ಮೇಟಗಳ್ಳಿ, ಮೈಸೂರು
9986874574

JOIN TODAY(JOB'S)
ಯುವತಿಯರು Age (18-23)
10th, PUC, ITI, BBM ಯಾದ Management Trainee ಗಳಾಗಿ
Earn (9600/-ರಿಂದ 18900/-pm
No Fee ಪರಸ್ಥಳದವರಿಗೆ ಮಾತ್ರ ವಸತಿ Only Fresher ಋದ್ದಾಗಿ ಸಂಪರ್ಕಿಸಿ. Call ಕಾವ್ಯ
9342827788

SITE FOR SALE
50x80
South East Corner
Suvarnanagara
Bogadi Gaddige Road
7338250763
9980616608

FOR SALE
1. 40x60 Site@ Sharadha Layout Near JP Nagar
2. Duplex House Nr Christ Public Schl
3. 2&3 BHK Flats at RK Nagar
4. BSNL Layout Site Nr Bannur Road
5. 30x50 Site@Treasury Lyt HD Kote Rd
6. 25x35 House Nr Srirampura
7. 20x30, 16x32, 17x33 @ Dattagalli, Lakshmipuram, Sharadhadevi Ngr
8. 30x40 Sites attached to Brahmins Lyt
PRAKRUTHI PROPERTIES
95386 90359, 90359 90359

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳಿನಲ್ಲಿರುವ ಪೆಟ್ರೋಲ್ ಬಂಕಿನಲ್ಲಿ ಕೆಲಸಕ್ಕಾಗಿ ಪುರುಷರು/ ಮಹಿಳೆಯರು ಬೇಕಾಗಿದ್ದಾರೆ.
ಸಮಯ: ಬೆಳಿಗ್ಗೆ 8 ರಿಂದ ಸಂಜೆ 5
ಸಂಬಳ: 15,000/–
6364218699

ಸೈಟುಗಳು ಮಾರಾಟಕ್ಕಿದೆ
ಸಂಪರ್ಕಿಸಿ:
9538412881

ಜಮೀನುಗಳು ಮಾರಾಟಕ್ಕಿದೆ
ಮೈಸೂರು ತಾ. ಜಯಪುರ ಹೋ.ಯಲ್ಲಿ 12 ಗುಂಟೆ ಮಾದುರಲ್ಲಿ 25 ಗುಂಟೆ ಮಾದೂರು ಹುಂಡಿಯಲ್ಲಿ 32 ಗುಂಟೆ ಮತ್ತು 25 ಗುಂಟೆ ದೂರಗ್ರಾಮದಲ್ಲಿ 19 ಗುಂಟೆ ಮತ್ತು 9 ಗುಂಟೆ ಮಹಲಕ್ಷ್ಮೀ ಲೇಔಟ್ ಹತ್ತಿರ 20 ಗುಂಟೆ ರಿಂಗ್ ರಸ್ತೆಯಿಂದ 8 ರಿಂದ 12 ಕಿ.ಮೀ ದೂರದಲ್ಲಿ ಜಮೀನುಗಳು ಮಾರಾಟಕ್ಕಿವೆ.
9945661696
9663793666

ಸೈಟುಗಳು ಮಾರಾಟಕ್ಕಿವೆ
ದಟ್ಟಗಳ್ಳಿ ಅಟ್ಯಾಚ್ 40x60 ದಕ್ಷಿಣ ದಿಕ್ಕು ಚದುರ ಅಡಿಗೆ ಬೆಲೆ ರೂ.4900/– ಮತ್ತು ದಟ್ಟಗಳ್ಳಿ 'ಜೆ' ಬ್ಲಾಕ್ ನಲ್ಲಿ 20x30 ಉತ್ತರ ದಿಕ್ಕು ಎದುರುಗಡೆ ಪಾರ್ಕ್ ಇದೆ. ಸೈಟು ಮಾರಾಟಕ್ಕಿದೆ.
ಸಂಪರ್ಕಿಸಿ:
9663793666

ಬೇಕಾಗಿದ್ದಾರೆ
ಟೆಲಿಕಾಲರ್ಸ್, ಡ್ರೈವರ್ಸ್, ಲೋಡರ್ಸ್ ಮತ್ತು ಅನ್‌ಲೋಡರ್ ಬೇಕಾಗಿದ್ದಾರೆ. ಸಂಪರ್ಕಿಸಿ:
9844163411

ಮೈಸೂರು ಮಿತ್ರ 45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



ದಾಂಪತ್ಯ ಜೀವನಕ್ಕೆ ಕಾಲಿಟ್ಟ ನವಜೋಡಿಗಳಿಗೆ ಚಿತ್ರನಟ ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ಅವರು ಮಾಂಗಲ್ಯ ವಿತರಿಸಿದರು.

ಬೇಬಿಬೆಟ್ಟದಲ್ಲಿ ದನಗಳ ಜಾತ್ರೆ

ದಾಂಪತ್ಯ ಜೀವನಕ್ಕೆ ಕಾಲಿಟ್ಟ 24 ಜೋಡಿಗಳು

ದರ್ಶನ್ ಪತ್ನಿ ವಿಜಯಲಕ್ಷ್ಮಿಯಿಂದ ಮಾಂಗಲ್ಯ, ಧನ್ವೀರ್, ಚಿಕ್ಕಣ್ಣರಿಂದ ಸೀರೆ ಪಂಚೆ-ಶರ್ಟ್ ವಿತರಣೆ

ಪಾಂಡವಪುರ: ಪ್ರಸಿದ್ಧ ಬೇಬಿಬೆಟ್ಟದ ಭಾರಿ ದನಗಳ ಜಾತ್ರಾ ಮಹೋತ್ಸವದಲ್ಲಿ ನಡೆದ ಉಚಿತ ಸರಳ ವಿವಾಹದಲ್ಲಿ 24 ನವ ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ನೇತೃತ್ವದಲ್ಲಿ ನಡೆದ ಸರಳ ಸಾಮೂಹಿಕ ವಿವಾಹದಲ್ಲಿ ಎಲ್ಲಾ ವಧು–ವರರಿಗೆ ಚಿತ್ರನಟ ದರ್ಶನ್ ತೂಗದೀಪ ಅವರ ಪತ್ನಿ ವಿಜಯಲಕ್ಷ್ಮಿ ಅವರು 5 ಗ್ರಾಂ ತೂಕದ ಮಾಂಗಲ್ಯ ವಿತರಣೆ ಮಾಡಿದರು. ಚಿತ್ರನಟ ಧನ್ವೀರ್ ಹಾಗೂ ಹಾಸ್ಯನಟ ಚಿಕ್ಕಣ್ಣ ಅವರು ಸೀರೆ, ಪಂಚೆ ಶರ್ಟ್ ವಿತರಿಸಿದರು.

ಶ್ರೀರಾಮ ಯೋಗೇಶ್ವರ ಮಠದ ಪೀಠಾಧ್ಯಕ್ಷ ಶ್ರೀ ಶಿವಬಸವಸ್ವಾಮೀಜಿ, ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಸಮ್ಮುಖದಲ್ಲಿ ಬೆಳಿಗ್ಗೆ 10.10 ಗಂಟೆಯ ಶುಭಲಗ್ನದಲ್ಲಿ ನವ ವಧು–ವರರು ಮಾಂಗಲ್ಯ ಧಾರಣೆ ಮಾಡುವ ಮೂಲಕ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಮಾಂಗಲ್ಯಧಾರಣೆಯಾಗುತ್ತಿದ್ದಂತೆಯೇ ಅಲ್ಲಿ ನೆರೆದಿದ್ದ ನೂರಾರು ಸಂಖ್ಯೆಯ ಸಾರ್ವಜನಿಕರು ವಧುವರರಿಗೆ ಅಕ್ಷತೆ ಕಾಳು ಹಾಕುವ ಮೂಲಕ ಆಶೀರ್ವದಿಸಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ಆಡಂಬರದ ಮದುವೆ, ಆರೋಗ್ಯ ಹಾಗೂ ಶಿಕ್ಷಣದಿಂದಾಗಿ ಜನರು ಹೆಚ್ಚಾಗಿ ಸಾಲದ ಸುಳಿಗೆ ಸಿಲುಕುತ್ತಿದ್ದಾರೆ. ಹಾಗಾಗಿ ಹೆಚ್ಚಾಗಿ ಸರಳ ಮದುವೆಗೆ ಆದ್ಯತೆ ನೀಡಬೇಕು, ಸರಳ ಮದುವೆ ಆಗುವುದರಿಂದ ಸಮಾಜಕ್ಕೆ ಒಳ್ಳೆಯ ಸಂದೇಶ ರವಾನೆಯಾಗಲಿದೆ ಎಂದು ಹೇಳಿದರು.

ಜನರು ಆಡಂಬರದ ಮದುವೆಗೆ ಕಡಿವಾಣ ಹಾಕಬೇಕು, ಸರಳ ಮದುವೆಯಾದರೆ ಸಮಾಜ ನಮ್ಮ ಬಗ್ಗೆ ಕೀಳು ಭಾವನೆಯಿಂದ ನೋಡುತ್ತದೆ ಎಂಬ ಭಾವನೆ ಕೆಲವರಲ್ಲಿದೆ. ಇಂತಹ ಕೀಳರಿಮೆ ಭಾವನೆ ತೆಗೆದುಹಾಕಬೇಕು, ಸರಳ ಸಾಮೂಹಿಕ ವಿವಾಹಕ್ಕೆ ವಧು–ವರರಿಗೆ ಮಾಂಗಲ್ಯ, ವಾಚು, ಬಟ್ಟೆ ವಿತರಣೆಯ ಸಂಪೂರ್ಣವಾದ ಜವಾಬ್ದಾರಿಯನ್ನು ಚಿತ್ರನಟ ದರ್ಶನ್ ಅವರು ವಹಿಸಿಕೊಂಡು ಅವರ ಪತ್ನಿ ವಿಜಯಲಕ್ಷ್ಮಿ ಅವರಿಂದ ನಡೆಸಿಕೊಟ್ಟಿದ್ದಾರೆ. ಅದಕ್ಕಾಗಿ ಧನ್ಯವಾದ ಅರ್ಪಿಸುತ್ತೇನೆ ಬೇಬಿ ಬೆಟ್ಟದ ಜಾತ್ರೆಯ ಪ್ರತಿವರ್ಷವು ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯಲಿದ್ದು ಮುಂದಿನ ಬಾರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ವಿಜಯಲಕ್ಷ್ಮಿ ದರ್ಶನ್ ಮಾತನಾಡಿ, ಸರಳ ಸಾಮೂಹಿಕ ವಿವಾಹದಲ್ಲಿ ಭಾಗವಹಿಸಿ ದಾಂಪತ್ಯ ಜೀವನಕ್ಕೆ ಕಾಲಿಡುತ್ತಿರುವುದು ಒಳ್ಳೆಯ ನಿರ್ಧಾರ, ದಾಂಪತ್ಯ ಜೀವನಕ್ಕೆ ಕಾಲಿಟ್ಟ ನವಜೋಡಿಗಳು ಜೀವನ ಸುಖ, ನೆಮ್ಮದಿ ದೊರಕಲಿ, ರೈತರು ಮತ್ತು ರೈತರ ಮಕ್ಕಳಿಗೆ ಒಳ್ಳೆಯದಾಗಲಿ ಎಂದು ಶುಭಹಾರೈಸಿದರು.

ಹಾಸ್ಯನಟ ಚಿಕ್ಕಣ್ಣ ಮಾತನಾಡಿ, ಆಡಂಬರದ ಮದುವೆಗಳ ಮೂಲಕ ದುಂದುವೆಚ್ಚ ಮಾಡುವುದಕ್ಕಿಂತ ಸರಳ ಮದುವೆ ಮಾಡಿಕೊಳ್ಳುವುದು ಒಳ್ಳೆಯದು, ಮದುವೆ ಮಾಡಿಕೊಳ್ಳುವುದು ಮುಖ್ಯವಲ್ಲ ಜೀವನದಲ್ಲಿ ಸಂಸಾರವನ್ನು ನೆಮ್ಮದಿಯಿಂದ ನಡೆಸಿಕೊಂಡು ಹೋಗುವುದು ಮುಖ್ಯವಾಗಿದೆ. ನಾವು ಈ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಲು ಪ್ರಮುಖ ಕಾರಣ ಚಿತ್ರನಟ ದರ್ಶನ್ ಹಾಗೂ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು, ಚಿತ್ರನಟ ದರ್ಶನ್ ಅವರು ಕಳೆದ ವರ್ಷ ಭಾಗವಹಿಸಿ ಮುಂದಿನ ವರ್ಷವು ಬರುವುದಾಗಿ ಹೇಳಿದ್ದರು. ಆದರೆ, ಅವರು ಬರಲು ಸಾಧ್ಯವಾಗದ ಕಾರಣ ಅವರ ಪತ್ನಿ ವಿಜಯಲಕ್ಷ್ಮಿ ಅವರು ಭಾಗವಹಿಸಿ ವಧು–ವರರಿಗೆ ಮಾಂಗಲ್ಯ ವಿತರಣೆ ಮಾಡಿದ್ದಾರೆ, ಮುಂದೆ ಎಲ್ಲರ ಜೀವನದಲ್ಲಿ ಒಳ್ಳೆಯದಾಗಲಿ ಎಂದು ತಿಳಿಸಿದರು.

ಸರಳ ಸಾಮೂಹಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗಿತ್ತು ಸಮಾರಂಭದಲ್ಲಿ ಶ್ರೀರಾಮ ಯೋಗೇಶ್ವರ ಮಠದ ಪೀಠಾಧ್ಯಕ್ಷ ಶ್ರೀಶಿವಬಸವಸ್ವಾಮೀಜಿ, ಉಪವಿಭಾಗಾಧಿಕಾರಿ ಶ್ರೀನಿವಾಸ್, ತಹಸೀಲ್ದಾರ್ ಸಂತೋಷ್‌ಕುಮಾರ್, ಇಓ ಲೋಕೇಶ್ ಮೂರ್ತಿ, ಸಿಡಿಪಿಓ ಪೂರ್ಣಿಮಾ, ರೈತ ನಾಯಕಿ ಸುನೀತಪುಟ್ಟಣ್ಣಯ್ಯ, ರೈತಸಂಘದ ಅಧ್ಯಕ್ಷ ವಿಜಯಕುಮಾರ್, ಕೆ.ಟಿ.ಗೋವಿಂದೇಗೌಡ, ಕೆ.ಎಸ್. ದಯಾನಂದ್, ರೈತ ಮುಖಂಡ ರಾಘವಪ್ರಕಾಶ್ ಸೇರಿದಂತೆ ಹಲವು ಭಾಗವಹಿಸಿದ್ದರು.

ಹಲಗೂರು ಬಳಿ ಯದ್ವಾ-ತದ್ವಾ ಚಲಿಸಿದ ಕಾರು

ಮಹಿಳೆ ಸೇರಿ ಇಬ್ಬರ ಸಾವು, ಇಬ್ಬರಿಗೆ ಗಾಯ



ಸಾರ್ವಜನಿಕರಿಗೆ ಡಿಕ್ಕಿ ಹೊಡೆದು ಪಲ್ಟಿಯಾಗಿ ಬಿದ್ದಿರುವ ಕಾರು.

ಹಲಗೂರು, ಮಾ.2– ಚಾಲಕನ ಅಜಾಗರೂಕತೆ ಮತ್ತು ಬೇಜವಾಬ್ದಾರಿ ಚಾಲನೆಯಿಂದ ಕಾರೊಂದು ಯದ್ವಾ–ತದ್ವಾ ಚಲಿಸಿದ ಪರಿಣಾಮ ಮಹಿಳೆ ಸೇರಿದಂತೆ ಇಬ್ಬರು ಸಾವನ್ನಪ್ಪಿ ಇಬ್ಬರು ಗಾಯಗೊಂಡು ಬೈಕೊಂದು ಜಖಂಗೊಂಡಿರುವ ಘಟನೆ ಸಮೀಪದ ಡಿ.ಹಲಸನಹಳ್ಳಿ ಗೇಟ್ ಬಳಿ ಸಂಭವಿಸಿದೆ.

ಕಮಲಮ್ಮ(55) ಮತ್ತು ಕಬ್ಬಿನ ಜ್ಯೂಸ್ ಅಂಗಡಿ ಮಾಲೀಕ ದೇಶಲಿಂಗ(45) ಮೃತ ದುರ್ದೈವಿಗಳು. ತೀವ್ರವಾಗಿ ಗಾಯಗೊಂಡಿರುವ ಕೆಂಬೂತಗೆರೆ ಕುಮಾರ, ರಾಜಣ್ಣ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಮಳವಳ್ಳಿ ಕಡೆಯಿಂದ ವೇಗವಾಗಿ ಬಂದ ಕಾರು(ಕೆಎ51ಎಂ.ಇ8609) ಡಿ.ಹಲಸಹಳ್ಳಿ ಗೇಟ್ ಬಳಿ ನಿಂತಿದ್ದ ಕಮಲಮ್ಮ(55) ಅವರಿಗೆ ಡಿಕ್ಕಿ ಹೊಡೆದ ಪರಿಣಾಮ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಾರಿನ ವೇಗ ನಿಯಂತ್ರಣ ಸಿಗದ ಕಾರಣ ಸಮೀಪದಲ್ಲೇ ಇದ್ದ ಕಬ್ಬಿನ ಜ್ಯೂಸ್ ಅಂಗಡಿಗೆ ಡಿಕ್ಕಿ ಹೊಡೆದಿದೆ. ಅಂಗಡಿ ಮಾಲೀಕ ದೇಶಲಿಂಗ(45) ಹಾಗೂ ಪಕ್ಕದಲ್ಲಿ ನಿಂತಿದ್ದ ಕೆಂಬೂತಗೆರೆ ಕುಮಾರ ಮತ್ತು ರಾಜಣ್ಣ ಗಂಭೀರವಾಗಿ ಗಾಯಗೊಂಡಿದ್ದಾರೆ. ನಂತರ, ಪಕ್ಕದಲ್ಲಿ ನಿಂತಿದ್ದ ಹೀರೋ ಸ್ಪ್ಲೆಂಡರ್ ಬೈಕಿಗೂ ಡಿಕ್ಕಿ ಹೊಡೆದು, ಕಾರು ಪಲ್ಟಿಯಾಗಿದೆ.

ಗಂಭೀರವಾಗಿ ಗಾಯಗೊಂಡ ಅವರುಗಳನ್ನು ಮಳವಳ್ಳಿ ತಾಲೂಕು ಆಸ್ಪತ್ರೆಗೆ ದಾಖಲಿಸಲಾಯಿತು. ಗಂಭೀರವಾಗಿ ಗಾಯಗೊಂಡಿದ್ದ ದೇಶಲಿಂಗ ಅವರನ್ನು ಮಂಡ್ಯ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಉಳಿದ ಇಬ್ಬರು ಗಾಯಾಳುಗಳು ಮಳವಳ್ಳಿ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ನಾಳೆ ಕೊತ್ತತ್ತಿಯಲ್ಲಿ ವಿಜಯೇಂದ್ರ ಗದ್ದೆಯಲ್ಲಿ ನಾಟಿ



ನಾಟಿ ಮಾಡುವ ಭತ್ತದ ಗದ್ದೆಯನ್ನು ಪರಿಶೀಲಿಸುತ್ತಿರುವ ಸಚ್ಚಿದಾನಂದ ಇಂಡುವಾಳು.

ಮಂಡ್ಯ: ರೈತರಿಗೆ ಆತ್ಮಸ್ಥೈರ್ಯ ತುಂಬುವ ಹಾಗೂ ಕೃಷಿಯಿಂದ ದೂರ ಸರಿಯುತ್ತಿರುವ ರೈತರನ್ನು ಮತ್ತೆ ಕೃಷಿಯತ್ತ ಮರಳುವಂತೆ ಪ್ರೇರೇಪಿಸುವ ಸಲುವಾಗಿ ಮಂಡ್ಯ ತಾಲೂಕು ಕೊತ್ತತ್ತಿ ಗ್ರಾಮದಲ್ಲಿ ಮಾ.4ರಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರ ನೇತೃತ್ವದಲ್ಲಿ ಭತ್ತ ನಾಟಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಯುವ ಮುಖಂಡ ಎಸ್. ಸಚ್ಚಿದಾನಂದ ಇಂಡುವಾಳು ತಿಳಿಸಿದರು.

ಭತ್ತ ನಾಟಿ ಕಾರ್ಯಕ್ರಮ ನಡೆಯಲಿರುವ ಕೊತ್ತತ್ತಿ ಗ್ರಾಮದ ಹೊರವಲಯದಲ್ಲಿನ ರೈತರಾದ ಸುಖೇಂದ್ರ ಮತ್ತು ಶಿವಬಸಪ್ಪ ಅವರ ಜಮೀನಿನಲ್ಲಿ ನಡೆಯುತ್ತಿರುವ ಸಿದ್ಧತಾ ಕಾರ್ಯಗಳನ್ನು ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಭಾನುವಾರ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಈ ಹಿಂದೆ ಬಿಜೆಪಿ ಸರ್ಕಾರವು ಅಧಿಕಾರದಲ್ಲಿದ್ದಾಗ ರೈತರಿಗಾಗಿ ಹತ್ತಾರು ಕಾರ್ಯಕ್ರಮಗಳನ್ನು ರೂಪಿಸಿತ್ತು. ಕೇಂದ್ರ ಸರ್ಕಾರದ ಮಾದರಿಯಲ್ಲೇ ರೈತರಿಗೆ ಕೃಷಿ ಸಮ್ಮಾನ್ ಯೋಜನೆಯಡಿ 4000ರೂ. ಪ್ರೋತ್ಸಾಹ ಧನ ನೀಡಲಾಗುತ್ತಿತ್ತು. ರೈತರ ಮಕ್ಕಳಿಗಾಗಿ ವಿದ್ಯಾಸಿರಿ ಯೋಜನೆಯನ್ನು ಜಾರಿಗೊಳಿಸಲಾಗಿತ್ತು ಬಿಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಮೊದಲ ಬಾರಿಗೆ ಪ್ರತ್ಯೇಕವಾಗಿ ಕೃಷಿ ಬಜೆಟ್ ಮಂಡಿಸಿದ್ದರು. ಆದರೆ, ಈಗ ಕಾಂಗ್ರೆಸ್ ಸರ್ಕಾರವು ಬಿಜೆಪಿ ಜಾರಿಗೊಳಿಸಿದ್ದ ರೈತ ಪರ ಕಾರ್ಯಕ್ರಮಗಳನ್ನು ರದ್ದುಗೊಳಿಸಿದೆ. ಹೀಗಾಗಿ ರೈತರು ಸಂಕಷ್ಟಕ್ಕೆ ಸಿಲುಕುವ ಜೊತೆಗೆ ಆರ್ಥಿಕ ನಷ್ಟಕ್ಕೂ ಒಳಗಾಗುತ್ತಿದ್ದಾರೆ. ಎಷ್ಟು ಮಂದಿ ರೈತರು ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಹೀಗಾಗಿ ಅವರನ್ನು ಮತ್ತೆ ಕೃಷಿಗೆ ಮರಳಿ ಕರೆ ತರುವ ಪ್ರಯತ್ನವನ್ನು ಬಿಜೆಪಿ ಮಾಡುತ್ತಿದೆ. ಇದಕ್ಕಾಗಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ರಾಜ್ಯಾದ್ಯಂತ ಪ್ರವಾಸ ಕೈಗೊಂಡಿದ್ದು, ಅದಕ್ಕೆ ಮಂಡ್ಯ ಜಿಲ್ಲೆಯಲ್ಲಿ ಭತ್ತ ನಾಟಿ ಕಾರ್ಯಕ್ರಮದ ಮೂಲಕ ಚಾಲನೆ ನೀಡುತ್ತಿದ್ದಾರೆ ಎಂದು ಹೇಳಿದರು.

ಬಿಜೆಪಿ ರಾಜ್ಯಾಧ್ಯಕ್ಷರ ಜೊತೆಗೆ ಪಕ್ಷದ ಹಲವಾರು ನಾಯಕರು, ಮುಖಂಡರು ಭತ್ತ ನಾಟಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. 6–7 ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆ ಇದೆ. ಕೊತ್ತತ್ತಿ ಗ್ರಾಮಸ್ಥರು ಸ್ವಯಂ ಪ್ರೇರಿತವಾಗಿ ವಿಶೇಷವಾಗಿ ಊಟದ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ಗ್ರಾಮೀಣ ಭಾಗದ ದೇವಾಲಯ ಕಾರ್ಯ ಹಾಗೂ ಹಬ್ಬ ಹರಿದಿನಗಳಲ್ಲಿ ನಡೆಯುವಂತೆ ರಾಗಿ ಮುದ್ದೆ–ಅವರೆಕಾಳು ಕೂಟು, ಅನ್ನ–ಸಾಂಬಾರ್ ಊಟದ ವ್ಯವಸ್ಥೆ ಮಾಡುತ್ತಿದ್ದಾರೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯ ಡಾ.ಸಿದ್ದರಾಮಯ್ಯ, ಜಿಲ್ಲಾ ಬಿಜೆಪಿ ಅಧ್ಯಕ್ಷ ಡಾ. ಎನ್.ಎಸ್.ಇಂದ್ರೇಶ್, ಶ್ರೀರಂಗಪಟ್ಟಣ ಮಂಡಲ ಅಧ್ಯಕ್ಷ ಪೀಹಳ್ಳಿ ರಮೇಶ್, ಶ್ರೀರಂಗಪಟ್ಟಣ ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಶ್ರೀಧರ್, ಬೇವಿನಹಳ್ಳಿ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಮಹೇಶ್ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

ಹಾಲು ಒಕ್ಕೂಟಗಳ ಸೌಲಭ್ಯ ಬಳಸಿಕೊಂಡು ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಿ



ಚಿನಕುರಳಿ, ಮಾ.2– ಹೈನುಗಾರಿಕೆ ದೊಡ್ಡ ಉದ್ಯಮವಾಗಿ ಬೆಳೆಯುತ್ತಿದ್ದು, ಹಾಲು ಒಕ್ಕೂಟಗಳು ನೀಡುವ ಸೌಲಭ್ಯಗಳನ್ನು ಬಳಸಿಕೊಂಡು ರೈತರು ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಹೇಳಿದರು.

ಹುಲ್ಕೆರೆಕೊಪ್ಪಲು ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದಲ್ಲಿ ಹಂತ–4 ಕ್ಷೀರಸಂಜೀವಿನಿ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ಸಾಲದ ಚೆಕ್ ವಿತರಣೆ ಮಾಡಿ ನಂತರ ಮಾತನಾಡಿದರು.

ಹೈನುಗಾರಿಕೆ ಕ್ಷೇತ್ರವು ಉದ್ಯಮವಾಗಿ ಬೆಳೆಯಲು ಮಹಿಳೆಯ ಪಾತ್ರ ಮಹತ್ವದಾಗಿದೆ. ಹೈನುಗಾರಿಕೆಯಿಂದ ಗ್ರಾಮೀಣ ಭಾಗದಲ್ಲಿ ಸಾಕಷ್ಟು ಕುಟುಂಬಗಳು ಆರ್ಥಿಕವಾಗಿ ಸದೃಢರಾಗುತ್ತಿವೆ. ಮಕ್ಕಳ ವಿದ್ಯಾಭ್ಯಾಸ ಸೇರಿದಂತೆ ಕುಟುಂಬ ನಿರ್ವಹಣೆಗೂ ಸಹಕಾರಿಯಾಗಿದೆ ಎಂದರು.

ಮನ್‌ಮುಲ್ ಉಪವ್ಯವಸ್ಥಾಪಕ ಆರ್. ಪ್ರಸಾದ್ ಮಾತನಾಡಿ, ಹಾಲು ಉತ್ಪಾದನೆ ಹೆಚ್ಚಿಸುವ ಜತೆಗೆ ಮಹಿಳೆಯರಿಗೆ ಉದ್ಯಮ ದೊರಕಿಸಿಕೊಡುವ ಉದ್ದೇಶದಿಂದ ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ ಇಲಾಖೆಯೂ ಮಹಿಳೆಯರಿಗೆ ತರಬೇತಿ ನೀಡಿ ಹಸು ಖರೀದಿಸಲು ಆಯ್ಕೆಯಾದ ಫಲಾನುಭವಿಗಳಿಗೆ ಸಾಲ ನೀಡುತ್ತಿದೆ ಎಂದರು.

ಸಮಾರಂಭದಲ್ಲಿ ಡಿಸಿಸಿ ಬ್ಯಾಂಕ್ ನಿರ್ದೇಶಕ ಗುರುಸ್ವಾಮಿ, ಪಿ.ಚಲುವರಾಜು, ಸಹಕಾರಿ ಯೂನಿಯನ್ ನಿರ್ದೇಶಕ ಸಿ.ಎಸ್. ನಿಂಗೇಗೌಡ, ಡೇರಿ ಅಧ್ಯಕ್ಷೆ ಕಮಲಮ್ಮ, ಉಪಾಧ್ಯಕ್ಷೆ ವಿಶಾಲಾಕ್ಷಮ್ಮ, ಮಾರ್ಗ ವಿಸ್ತರಣಾಧಿಕಾರಿ ಉಷಾ, ಮುಖಂಡ ಉದ್ಯಮಿ ಮಧುಸೂದನ್, ಗ್ರಾಪಂ ಮಾಜಿ ಅಧ್ಯಕ್ಷ ದಿವಾಕರ್, ಕಾರ್ಯದರ್ಶಿ ದೀಪಿಕ ಸೇರಿದಂತೆ ಹಲವಾರು ಮುಖಂಡರು ಭಾಗವಹಿಸಿದ್ದರು.

'ನಟ್ಟು ಬೋಲ್ಟು ಟೈಟ್ ಮಾಡ್ತೀನಿ' ಎಂಬ ಡಿಕೆಶಿ ಹೇಳಿಕೆಗೆ ಹಲವರಿಂದ ತೀಕ್ಷ್ಣ ಪ್ರತಿಕ್ರಿಯೆ

ಕನ್ನಡ ಚಿತ್ರರಂಗದವರು ಜೀತದಾಳುಗಳೇ?



ಬೆಂಗಳೂರು, ಮಾ.2– ಕನ್ನಡ ಚಿತ್ರರಂಗ ಡಿ.ಕೆ.ಶಿವಕುಮಾರ್ ಜೀತದಾಳಾ ಅಥವಾ ಯಾರನ್ನಾದರೂ ಜೀತಕ್ಕೆ ಇಟ್ಟುಕೊಂಡಿದ್ದಾರಾ ಎಂದು ಆರ್‌ಆರ್ ನಗರದ ಬಿಜೆಪಿ ಶಾಸಕ ಮುನಿರತ್ನ ಪ್ರಶ್ನಿಸಿದ್ದಾರೆ.

ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ನಟ್ಟು ಬೋಲ್ಟು ಟೈಟ್ ಮಾಡುತ್ತೇನೆ. ನನಗೆ ಗೊತ್ತಿದೆ, ಸರ್ಕಾರದ ಸವಲತ್ತು ಸಿಗದಂತೆ ಮಾಡ್ತೇನೆ ಅಂದಿದ್ದಾರೆ. ಡಿಕೆಶಿ ಒಂದು ನೆನಪಿನಲ್ಲಿಟ್ಟುಕೊಳ್ಳಬೇಕು. ಕನ್ನಡ ಚಿತ್ರರಂಗ ಅವರದ್ದಲ್ಲ, ದೊಡ್ಡದಾಗಿ ಬೆಳೆದಿದೆ. ಇಷ್ಟು ಹಗುರವಾಗಿ ಮಾತನಾಡುವುದು ಸರಿಯಲ್ಲ ಎಂದರು.

ಮೊದಲು ನಿಮ್ಮ ಬಳಿ ಕೆಲಸ ಮಾಡುವವರ ನಟ್ಟು ಬೋಲ್ಟು ಟೈಟ್ ಮಾಡಿ. ನೀವೂ ಸಿನಿಮಾದವರೇ, ನಿಮ್ಮ ಟೆಂಟ್‌ನಲ್ಲಿ ಸಿನಿಮಾ ಹಾಕಿದವರು ನೀವು. ಮೊದಲು ಪದ ಬಳಕೆ ಸರಿ ಮಾಡಿಕೊಳ್ಳಿ ಎಂದರು.

ಮೇಕೆದಾಟು ಪಾದಯಾತ್ರೆ ಫೋಟೋ ರಿಲೀಸ್ ಮಾಡಿದ ಮುನಿರತ್ನ ಕಾಂಗ್ರೆಸ್ ಪಕ್ಷದ ಚಿಹ್ನೆ, ಕಾಂಗ್ರೆಸ್ ಪಕ್ಷದ ಸಾಲು, ಕಾಂಗ್ರೆಸ್ ಪಕ್ಷದ ನಾಯಕರ ಭಾವಚಿತ್ರ ಬಳಕೆ ಆಗಿದೆ. ಈ ಪಾದಯಾತ್ರೆಯಲ್ಲಿ ಚಿತ್ರರಂಗದ ಕಲಾವಿದರು ಭಾಗವಹಿಸಬೇಕಾ? ಎಲ್ಲಾದರೂ ಕನ್ನಡ ಭಾವುಟ ಇದ್ಯಾ ಎಂದು ಪ್ರಶ್ನಿ ವಾಗ್ದಾಳಿ ನಡೆಸಿದರು.

ನೆಲ ಜಲ ರಕ್ಷಣೆ ನೀರು ಬೇಕು ಅಂತ ಪಾದಯಾತ್ರೆ ಮಾಡಿದ ನೀವು ಸೋನಿಯಾ ಗಾಂಧಿ, ರಾಹುಲ್ ಗಾಂಧಿ ನಿಮ್ಮ ಪಕ್ಷದ ಚಿನ್ಹೆಯನ್ನು ಹಾಕಿದ್ದು ಯಾಕೆ? ಪಾದಯಾತ್ರೆ ನಿಮ್ಮ ಪಕ್ಷದ ಕಾರ್ಯಕ್ರಮ. ನಿಮ್ಮದು ನೆಲ ಜಲಕ್ಕಾಗಿ ನಡೆದ ಪಾದಯಾತ್ರೆ ಅಲ್ಲ ಅಧಿಕಾರಕ್ಕಾಗಿ ನಡೆಸಿದ ಪಾದಯಾತ್ರೆ ಎಂದು ಕಿಡಿಕಾರಿದರು.

ಚಿತ್ರರಂಗಕ್ಕೆ ಬೋಲ್ಟೆ ಇಲ್ಲ, ಟೈಟ್ ಮಾಡಿ ಏನು ಪ್ರಯೋಜನ



ಬೆಂಗಳೂರು, ಮಾ.2– ವಿಧಾನ ಸೌಧದ ಆವರಣದಲ್ಲಿ ಭಾನುವಾರ ನಡೆದ 16ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಉದ್ಘಾಟನೆ ಸಮಾರಂಭದಲಿ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು, ಮೇಕೆದಾಟು ಯೋಜನೆಯ ಹೋರಾಟ ಹಾಗೂ ಫಿಲ್ಮ್ ಫೆಸ್ಟಿವಲ್‌ಗೆ ಬಾರದ ಕಲಾವಿದರಿಗೆ, 'ಯಾವ ನಟ, ನಟಿಗೆ ಎಲ್ಲೆಲ್ಲಿ ನಟ್ಟು ಬೋಲ್ಟು ಟೈಟ್ ಮಾಡಬೇಕು ಅಂತ ನನಗೆ ಗೊತ್ತಿದೆ' ಎಂದು ವಾರ್ನಿಂಗ್ ಕೊಟ್ಟಿದ್ದರು.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ನಟ ಜಗ್ಗೇಶ್, 'ಈ ಕಾರ್ಯಕ್ರಮ 7 ಗಂಟೆಗೆ. ನನಗೆ ಆಹ್ವಾನ ಪ್ರತಿಕೆ ತಲುಪಿದ್ದು ಸಂಜೆ 6 ಗಂಟೆಗೆ. ಜೊತೆಗೆ ಒಗ್ಗಟ್ಟಿಲ್ಲಾ, ಸಂವಾದವಿಲ್ಲ ಒಟ್ಟಾರೆ ಸಂಘವೇ ಕಣ್ಮರೆ. ಕನ್ನಡ ಚಿತ್ರರಂಗ ಅವಸಾನ. ಕರ್ನಾಟಕದಲ್ಲಿ ಯಾವ ಕಲಾವಿದರು ಏನಾಗಿದ್ದಾರೆ? ಕಲಾವಿದರಾದ ನಮಗೆ ಮಾಹಿತಿಯಿಲ್ಲ. ಸಾವಿನ ಅಂಚಿನ ಚಿತ್ರರಂಗಕ್ಕೆ ಬೋಲ್ಟೆ ಇಲ್ಲ, ಇನ್ನು ಟೈಟ್ ಮಾಡಿ ಏನು ಪ್ರಯೋಜನ ಎಂದಿದ್ದಾರೆ'

ಒಂದು ಕಮಿಟಿ ಮಾಡಿ, ಅದರಲ್ಲಿ ಹಿರಿಯ ನಟರು, ನಿರ್ಮಾಪಕರು, ನಿರ್ದೇಶಕರು ಮತ್ತು ಪತ್ರಕರ್ತರು ಇರುವಂತೆ ರಚಿಸಿ. ಈಗಿನ ಚಿತ್ರರಂಗದ ವಾಸ್ತವ ಅರಿತು ಕನ್ನಡ ಚಿತ್ರರಂಗ ಉಳಿಯುವಂತೆ ಬೆಳೆಯುವಂತೆ ಒಗ್ಗಟ್ಟಿನಿಂದ ಒಗ್ಗಟ್ಟುಗೂಡುವಂತೆ ಚಿಂತನೆಯ ಚಾವಡಿ ರಚನೆಯಾಗಲಿ, ನಿಮಗೆ ದಿನ ಸಿಗುವ ಕೆಲವರು ಮಾತ್ರ ಚಿತ್ರರಂಗವಲ್ಲ ಅನೇಕರಿದ್ದಾರೆ ಎಂದು ಡಿಕೆಶಿಗೆ ಟಾಂಗ್ ಕೊಟ್ಟಿದ್ದಾರೆ ಜಗ್ಗೇಶ್.

ಡಿಕೆಶಿ ಪರ ಬ್ಯಾಟ್ ಬೀಸಿದ ರಮ್ಯಾ



ಬಳ್ಳಾರಿ: ನೆಲ, ಜಲ, ಭಾಷೆ ವಿಚಾರದಲ್ಲಿ ಎಲ್ಲರೂ ಒಂದಾಗಬೇಕು. ಸಾಹೇಬರು ಹೇಳೋದ್ರಲ್ಲಿ ತಪ್ಪೇನಿಲ್ಲಾ ಎಂದು ಸ್ಯಾಂಡಲ್‌ವುಡ್ ಕ್ವೀನ್ ರಮ್ಯಾ, ಡಿಸಿಎಂ ಡಿಕೆ ಶಿವಕುಮಾರ್ ಅವರ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ. ಕಲಾವಿದರಿಗೆ ಡಿಸಿಎಂ ಡಿಕೆ ಶಿವಕುಮಾರ್ ವಾರ್ನಿಂಗ್ ವಿಚಾರವಾಗಿ ವಿಜಯನಗರ ಜಿಲ್ಲೆಯ ಹಂಪಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನೀರಿನ ವಿಚಾರ ಬಂದಾಗ ಕಲಾವಿದರೆಲ್ಲರೂ ಬೆಂಬಲಿಸಬೇಕು. ಡಿಸಿಎಂ ಡಿಕೆ ಶಿವಕುಮಾರ್ ಅದನ್ನೇ ಹೇಳಿದ್ದಾರೆ. ಅದಕ್ಕೆ ನನ್ನ ಸಹಮತವಿದೆ. ಉತ್ತರ ಕರ್ನಾಟಕದ ನದಿಗಳು, ಜಲಾಶಯಗಳ ಬಗ್ಗೆಯೂ ಕಲಾವಿದರು ಮಾತನಾಡಬೇಕು. ಡಾ.ರಾಜ್‌ಕುಮಾರ್ ನೆಲ, ಜಲ, ಭಾಷೆ ವಿಚಾರದಲ್ಲಿ ಹೋರಾಟ ಮಾಡಿದ್ದಾರೆ ಎಂದರು.

ರಾಜ್ಯದ ಜನರೇ ನಟ್ಟು ಬೋಲ್ಟ್ ಟೈಟ್ ಮಾಡೊ ಸಮಯ ಬಂದಿದೆ.....





ಬೆಂಗಳೂರು, ಮಾ.2– 16ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಉದ್ಘಾಟನೆ ವೇಳೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೀಡಿರುವ 'ನಟ್ಟು ಬೋಲ್ಟ್ ಟೈಟ್ ಮಾಡುವೆ' ಹೇಳಿಕೆ ಇದೀಗ ತೀವ್ರ ಚರ್ಚೆಗೆ ಕಾರಣವಾಗಿದೆ.

ಬಹಿರಂಗ ವೇದಿಕೆಯಲ್ಲಿ ಕನ್ನಡ ಸಿನಿಮಾ ಕಲಾವಿದರಿಗೆ ಡಿ.ಕೆ.ಶಿವಕುಮಾರ್ ಧಮ್ಕಿ ಹಾಕಿದ್ದಾರೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಅನುದಾನ ಬೇಕಾದರೆ ಶಾಸಕರು ತಮ್ಮ ಬಳಿ ತಗ್ಗಿ–ಬಗ್ಗಿ ನಡೆಯಬೇಕು ಎಂದು ದರ್ಪ ಮೆರೆದಿದ್ದ ಡಿಸಿಎಂ ಡಿ.ಕೆ.ಶಿವಕುಮಾರ್ ಸಾಹೇಬರು, ಈಗ ಕನ್ನಡ ಸಿನಿಮಾ ಕಲಾವಿದರಿಗೆ ಬಹಿರಂಗ ವೇದಿಕೆಯಲ್ಲಿ ಧಮ್ಕಿ ಹಾಕಿದ್ದಾರೆ ಎಂದು ಆರೋಪಿಸಿದ್ದಾರೆ.

'ಸ್ವಾಮಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರೇ, ಕಾಂಗ್ರೆಸ್ ಪಕ್ಷದ ರಾಜಕೀಯ ಪಾದಯಾತ್ರೆಗೆ ಸಿನಿಮಾ ಕಲಾವಿದರು ಬರುವುದು ಬಿಡುವುದು ಅವರವರ ವಿವೇಚನೆಗೆ ಬಿಟ್ಟಿದ್ದು. ಕಾಂಗ್ರೆಸ್ ಪಕ್ಷಕ್ಕೆ ನಡೆದುಕೊಳ್ಳುವ ಕಲಾವಿದರಿಗೆ ಮನ್ನಣೆ ಸಿಗುತ್ತದೆ, ಇಲ್ಲವಾದರೆ ಸಿಗುವುದಿಲ್ಲ ಎನ್ನುವ ನಿಮ್ಮ ಮಾತು ನಿಮ್ಮ ಸ್ಥಾನಕ್ಕೆ ಶೋಭೆ ತರುವುದಿಲ್ಲ' ಎಂದು ಕಿಡಿಕಾರಿದ್ದಾರೆ.

ಸಮಾಜದಲ್ಲಿ ಎಲ್ಲರೂ ತಮಗೆ ಮತ್ತು ತಮ್ಮ ಪಕ್ಷಕ್ಕೆ ಸೆಲ್ಯೂಟ್ ಹೊಡೆದು, ತಮ್ಮ ಅಡಿಯಾಳುಗಳಂತೆ ನಡೆದುಕೊಳ್ಳಬೇಕು ಎನ್ನುವ ಕೆಟ್ಟ ಮನಸ್ಥಿತಿಯಿಂದ ಹೊರಗೆ ಬನ್ನಿ. ಕಲಾವಿದರು ಯಾರ ಸ್ವತ್ತೂ ಅಲ್ಲ. ಕಲಾವಿದರಿಗೆ ಅವರ ವಿವೇಚನೆಗೆ ತಕ್ಕಂತೆ ನಡೆದುಕೊಳ್ಳುವ, ಯಾರ ಜೊತೆ ಬೇಕಾದರೂ ಗುರುತಿಸಿಕೊಳ್ಳುವ ಅಥವಾ ಗುರುತಿಸಿಕೊಳ್ಳದಿರುವ ಸ್ವಾತಂತ್ರ್ಯವಿದೆ, ಹಕ್ಕಿದೆ ಎಂದು ಹೇಳಿದ್ದಾರೆ.

ಕಲಾವಿದರು ನಿಮ್ಮ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಲ್ಲ. ನಿಮ್ಮ ಪಕ್ಷದ ಕಾರ್ಯಕರ್ತರನ್ನು ನಡೆಸಿಕೊಂಡ ರೀತಿ ಕಲಾವಿದರನ್ನು ನಡೆಸಿಕೊಳ್ಳಬೇಡಿ. ಕಲಾವಿದರಿಗೆ ಗೌರವ ಕೊಡುವುದನ್ನು ಕಲಿಯಿರಿ ಎಂದು ಸಲಹೆ ನೀಡಿದ್ದಾರೆ.

ಮತ್ತೊಂದೆಡೆ ರಾಜ್ಯದ ಜನರೇ ನಿಮ್ಮ ನಟ್ಟು, ಬೋಲ್ಟ್ ಟೈಟ್ ಮಾಡುವ ಸಮಯ ಬಂದಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದ್ದಾರೆ.

ರಾಜ್ಯದಲ್ಲಿ ಸರ್ವಾಧಿಕಾರಿ ಧೋರಣೆ, ಧಮ್ಕಿ ರಾಜಕೀಯ, ನಟು–ಬೋಲ್ಟು ಟೈಟ್ ಮಾಡೊ ಆಟ ನಡೆಯೊದಿಲ್ಲಾ ಸನ್ಮಾನ್ಯ ಡಿ.ಕೆ.ಶಿವಕುಮಾರ್ ಅವರೇ. ಕಲಾವಿದರು ಎಂದಿಗೂ ಕಲಾವಿದರೇ. ಸಿನಿಮಾ ಇಂಡಸ್ಟ್ರಿಯಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ಕನ್ನಡ ನಾಡು ಮತ್ತು ಕನ್ನಡ ಭಾಷೆಯನ್ನು ಬೆಳೆಸುವ ಕೆಲಸಮಾಡುತ್ತಿದ್ದಾರೆ ಎಂದಿದಾರೆ.

ಡಿ.ಕೆ.ಶಿವಕುಮಾರ್‌ಗೆ ವಿನಾಶ ಕಾಲೇ ವಿಪರೀತ ಬುದ್ಧಿ: ಜೆಡಿಎಸ್ ವಾಗ್ದಾಳಿ

ಬೆಂಗಳೂರು, ಮಾ.2– ಸಿನಿಮಾ ನಟರಿಗೆ ಡಿಸಿಎಂ ಡಿ.ಕೆ.ಶಿವಕುಮಾರ್ ವಾರ್ನಿಂಗ್ ಕೊಟ್ಟ ವಿಚಾರಕ್ಕೆ ಡಿಸಿಎಂ ವಿರುದ್ಧ ಜೆಡಿಎಸ್ ವಾಗ್ದಾಳಿ ನಡೆಸಿದೆ. ಎಕ್ಸ್‌ನಲ್ಲಿ ಪೋಸ್ಟ್ ಹಾಕಿರುವ ಜೆಡಿಎಸ್ ವಿನಾಶ ಕಾಲೇ ವಿಪರೀತ ಬುದ್ಧಿ ಅಂತ ಕಿಡಿಕಾರಿದೆ.

ವಿನಾಶ ಕಾಲೇ ವಿಪರೀತ ಬುದ್ಧಿ. ರೌಡಿ ಕೊತ್ವಾಲನ ಶಿಷ್ಯ ಡಿಕೆಶಿ ನಡೆದು ಬಂದ ದಾರಿ, ಬೆಳೆದು ಬಂದ ಪರಿಸರ, ಜೊತೆಗಿದ್ದವರ ಸಹವಾಸವೇ ಅಂತಹದ್ದು. ಮಿಸ್ಟರ್ ಡಿ.ಕೆ. ಶಿವಕುಮಾರ್ ನಿಮ್ಮ ಪಾದಯಾತ್ರೆ ರಾಜಕೀಯ ಪ್ರೇರಿತವಾಗಿತ್ತು. ಕಾಂಗ್ರೆಸ್ ಪಕ್ಷದ ರಾಜಕೀಯ ಪಾದಯಾತ್ರೆಗೆ ಸಿನಿಮಾ ಕಲಾವಿದರು ಭಾಗವಹಿಸಲಿಲ್ಲ ಎಂದು ಕನ್ನಡದ ನಟರಿಗೆ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ವೇದಿಕೆಯಲ್ಲಿ ಬೆದರಿಕೆ ಹಾಕಿರುವುದು ಹೇಡಿತನ ಮತ್ತು ಖಂಡನೀಯ.

ಡಿಸಿಎಂ ಈ ಗೊಡ್ಡು ಬೆದರಿಕೆ ನಿಮ್ಮ ಹತಾಶೆ ಮತ್ತು ನೀವು ಮಾನಸಿಕ ಸ್ಥಿಮಿತ ಕಳೆದುಕೊಂಡಿರುವುದನ್ನು ತೋರಿಸುತ್ತಿದೆ. ಕನ್ನಡ ಚಿತ್ರರಂಗ ಹಾಗೂ ಸಿನಿಮಾ ಕಲಾವಿದರು ಯಾವುದೇ ಪಕ್ಷದ ಕಾಲಾಳುಗಳಲ್ಲ. ಅವರು ಯಾರನ್ನು ಯಾವ ಪಕ್ಷವನ್ನು ಬೆಂಬಲಿಸಬೇಕು? ಎನ್ನುವುದು ಅವರ ವೈಯಕ್ತಿಕ ತೀರ್ಮಾನ.

ನಮ್ಮದು ಪ್ರಜಾಪ್ರಭುತ್ವ, ಸಂವಿಧಾನದ ಅಡಿಯಲ್ಲಿ ನೀವು ಡಿಸಿಎಂ ಆಗಿದ್ದೀರಿ. ರೌಡಿಸಂ, ಧಮ್ಕಿ ರಾಜಕೀಯ ಯಾರಿಗೂ ಶೋಭೆ ತರುವುದಿಲ್ಲ. ಕನಕಪುರವನ್ನು ರಿಪಬ್ಲಿಕ್ ಮಾಡಿಕೊಂಡು ದರ್ಪ, ದೌರ್ಜನ್ಯ, ಬೆದರಿಕೆ ಹಾಕಿ ಜನರನ್ನು ಹಿಂಸಿಸುತ್ತಾ, ಬಂಡೆಗಳನ್ನು ಖಾಲಿ ಮಾಡಿರುವ ಅಪೂರ್ವ ಸಹೋದರರಿಗೆ ಮತದಾರರು ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ ನಿಮ್ಮ ಸಹೋದರನಿಗೆ ನಟ್ಟು, ಬೋಲ್ಟು ಸರಿ ಮಾಡಿದ್ದಾರೆ.

ಸಿಎಂ ಕುರ್ಚಿಗೆ ಏರಲು ತಿರುಕನ ಕನಸು ಕಾಣುತ್ತಾ ಅಡ್ಡದಾರಿ, ತಂತ್ರ–ಕುತಂತ್ರ ವಾಮಮಾರ್ಗದಲ್ಲಿ ಸಾಗಿರುವ ನಿನಗೆ ಕಾಂಗ್ರೆಸ್ ಪಾರ್ಟಿಯವರೇ ನಟ್ಟು, ಬೋಲ್ಟು ಟೈಟು ಮಾಡುತ್ತಿದ್ದಾರೆ. ಅಷ್ಟು ಸಾಲದೇ ಅಂತ ವಾಗ್ದಾಳಿ ನಡೆಸಿದೆ.

ಡಿಸಿಎಂ ಅಧಿಕಾರ ದರ್ಪದಿಂದ ಹೇಳಿರಬಹುದು; ಫಿಲ್ಮಂ ಚೇಂಬರ್ ಅಧ್ಯಕ್ಷ ಅಸಮಾಧಾನ



ಬೆಂಗಳರು, ಮಾ.2–ಸ್ಯಾಂಡಲ್‌ವುಡ್ ನಟರಿಗೆ ಡಿಸಿಎಂ ಡಿಕೆಶಿ ವಾರ್ನಿಂಗ್ ವಿಚಾರಕ್ಕೆ ಫಿಲ್ಮಂ ಚೇಂಬರ್ ಅಧ್ಯಕ್ಷ ನರಸಿಂಹಲು ಪ್ರತಿಕ್ರಿಯೆ ನೀಡಿದ್ದಾರೆ. ಡಿಕೆ ಶಿವಕುಮಾರ್ ಅವರ ನೆಟ್ಟು, ಬೋಲ್ಟು ಹೇಳಿಕೆಗೆ ಅಧಿಕಾರ ದರ್ಪದಿಂದ ಹಾಗಂದಿರಬಹುದು ಎಂದು ಫಿಲ್ಮಂ ಚೇಬರ್ ಅಧ್ಯಕ್ಷ ಕೌಂಟರ್ ಕೊಟ್ಟಿದ್ದಾರೆ.

ಫಿಲ್ಮಂ ಚೇಂಬರ್ ಅಧ್ಯಕ್ಷ ನರಸಿಂಹಲು ಮಾತನಾಡಿ, ಡಿಕೆ ಶಿವಕುಮಾರ್ ಅವರು ಅಧಿಕಾರ ದರ್ಪದಿಂದ ಹಾಗಂದಿರಬಹುದು. ಆದರೆ ನಮ್ಮ ಕಡೆಯಿಂದನೂ ತಪ್ಪಾಗಿದೆ ಮನೆಯ ಹಬ್ಬಕ್ಕೆ ಕಲಾವಿದರು ಬರಬೇಕಾಗಿತ್ತು. ಆದರೆ, ಆಮಂತ್ರಣ ಸಿಕ್ಕಿಲ್ಲ ಅಂತಾ ಬಂದಿಲ್ಲ ಅಂತ ಹೇಳಿದ್ದಾರೆ.

ಡಿಕೆ ಶಿವಕುಮಾರ್ ಮಾತನ್ನು ಸರಿ ಅಂತಾನೂ ಹೇಳೋಕೆ ಆಗಲ್ಲ ತಪ್ಪು ಅಂತಾನೂ ಹೇಳೋಕೆ ಆಗಲ್ಲ. ಇನ್ನೂ ಸಿನಿಮಾಗಳಿಗೆ ಅನುಮತಿ ಪ್ರತ್ಯೇಕ ನಿಯಮ ಇರುತ್ತದೆ. ಸಿನಿಮಾ ಶೂಟಿಂಗ್‌ಗೆ ಅನುಮತಿ ನೀಡಲ್ಲ ಎಂಬ ಹೇಳಿಕೆಯನ್ನೆಲ್ಲ ನಾವು ಗಂಭೀರವಾಗಿ ತೆಗೆದುಕೊಳ್ಳಲ್ಲ ಎಂದು ಡಿಕೆಶಿ ಹೇಳಿಕೆಗೆ ಪ್ರತ್ಯುತ್ತರ ನೀಡಿದ್ದಾರೆ.

ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ವಾರ್ಷಿಕೋತ್ಸವ, ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ ಜನ್ಮ ದಿನೋತ್ಸವ

ಸ್ವತಃ ಆದರ್ಶವಾಗಿ ಬದುಕಿ ಮಾದರಿಯಾದವರಲ್ಲಿ ಪರಮಹಂಸರು ಮೊದಲಿಗರು

ಉಪನ್ಯಾಸಕಿ ಅಕ್ಷಯಾ ಗೋಖಲೆ ಅಭಿಮತ



ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ ಭಾನುವಾರ 'ಇಂದಿನ ಸಮಾಜಕ್ಕೆ ಶ್ರೀರಾಮಕೃಷ್ಣರ ಪ್ರಸ್ತುತತೆ' ಕುರಿತು ಉಪನ್ಯಾಸಕಿ ಅಕ್ಷಯಾ ಗೋಖಲೆ ಪ್ರವಚನ ನೀಡಿದರು.

ಮೈಸೂರು,ಮಾ.2(ಪಿಎಂ)– ಆದರ್ಶ ಎಂಬುದನ್ನು ಕೇವಲ ಬೋಧನೆಗೆ ಸೀಮಿತಗೊಳಿಸದೇ ಸ್ವತಃ ಆದರ್ಶವಾಗಿ ಬದುಕಿ ಜಗತ್ತಿಗೆ ಮಾದರಿಯಾದ ಬೆರಳೆಣಿಕೆ ಮಹನೀಯರಲ್ಲಿ ಶ್ರೀರಾಮಕೃಷ್ಣ ಪರಮಹಂಸರು ಮೊದಲಿಗರು ಎಂದರೆ ಅತಿಶಯೋಕ್ತಿಯಲ್ಲ ಎಂದು ಕಾರ್ಕಳದ ಉಪನ್ಯಾಸಕಿ ಅಕ್ಷಯಾ ಗೋಖಲೆ ಹೇಳಿದರು.

ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ವಾರ್ಷಿಕೋತ್ಸವ ಹಾಗೂ ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ 190ನೇ ಜನ್ಮ ದಿನೋತ್ಸವದ ಪ್ರಯುಕ್ತ ಆಶ್ರಮದ ಸಭಾಂಗಣದಲ್ಲಿ 'ಇಂದಿನ ಸಮಾಜಕ್ಕೆ ಶ್ರೀರಾಮಕೃಷ್ಣರ ಪ್ರಸ್ತುತತೆ' ಕುರಿತು ಭಾನುವಾರ ಹಮ್ಮಿಕೊಂಡಿದ್ದ ಕನ್ನಡ ಪ್ರವಚನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಮಕೃಷ್ಣ ಪರಮಹಂಸರ ಹೆಸರು ಸೂರ್ಯ–ಚಂದ್ರ ಇರುವವರೆಗೂ ಇಡೀ ಜಗತ್ತಿನಲ್ಲಿ ಇರುತ್ತದೆ. ಅದಕ್ಕೆ ಕಾರಣ, ಅವರು ಧರ್ಮ ಎನ್ನುವುದನ್ನು ಕೇವಲ ಬೋಧನೆಯಲ್ಲಿ ಹೇಳಲಿಲ್ಲ. ಬದಲಾಗಿ ತಮ್ಮ ಬದುಕಿನಲ್ಲಿ ಆಚರಣೆಗೆ ತರುವ ಮೂಲಕ ಧರ್ಮವೆಂದರೇನು ತೋರಿಸಿಕೊಟ್ಟರು. ಒಬ್ಬ ವ್ಯಕ್ತಿ ತಾನೇ ಮೌಲ್ಯಯುತ ಬದುಕು ಮಾಡಬೇಕಾದರೆ ಅದಕ್ಕೆ ಆತ್ಮಶಕ್ತಿ ಗಟ್ಟಿಯಾಗಿರಬೇಕು. ಅಂತಹ ಆತ್ಮಶಕ್ತಿ ಹೊಂದಿದ್ದವರು ಪರಮಹಂಸರು ಎಂದರು.

ಆದರ್ಶಗಳನ್ನು ಬೋಧಿಸುವುದು ಸುಲಭ ಆದರೆ ಅಳವಡಿಸಿಕೊಳ್ಳುವುದಕ್ಕೆ ಬದ್ಧತೆ ಅಗತ್ಯ. ಪರಮಹಂಸರು ಆದರ್ಶಗಳನ್ನು ಬೋಧನೆ ಮಾಡಿದ್ದೂ ಮಾತ್ರವಲ್ಲದೆ, ಸ್ವತಃ ಅವಡಿಸಿಕೊಂಡು ಜಗತ್ತಿಗೆ ಆದರ್ಶ ವಾದರು. ಪ್ರಸ್ತುತ ನಮ್ಮ ಸಮಾಜದಲ್ಲಿ ಧರ್ಮ ಎಂಬ ಶಬ್ದ ತುಂಬ ಚರ್ಚೆಗೆ ಒಳಗಾಗುತ್ತಿದೆ. ಧರ್ಮ ಎನ್ನುವುದಕ್ಕೆ ರಾಮಕೃಷ್ಣ ಪರಮಹಂಸರ ಬದುಕೇ ಉತ್ತರ. ಧರ್ಮ ಎಂದರೆ ನಾವು ಏತಕ್ಕಾಗಿ ಕಿತ್ತಾಡುತ್ತಿದ್ದೇವೆಯೋ ಅದು ಧರ್ಮವಲ್ಲ. ಧರ್ಮ ಎಂದರೆ ಅದು ಜೀವನ ವಿಧಾನವಾಗಿದ್ದು, ಎಲ್ಲರೊಂದಿಗೆ ಸಾಮರಸ್ಯ–ಸಂತಸದಿಂದ ಆದರ್ಶವಾಗಿ ಬದುಕುವುದೇ ಧರ್ಮ ಎನ್ನುವ ಆಲೋಚನೆ ಕೊಟ್ಟವರು ಶ್ರೀ ರಾಮಕೃಷ್ಣ ಪರಮಹಂಸರು ಎಂದು ತಿಳಿಸಿದರು.

ಅಪೇಕ್ಷೆ ಇಲ್ಲದೆ ಸಹಾಯ ಮಾಡಿದಾಗ ಮಾತ್ರ ಮಾಧವತ್ವಕ್ಕೇರಲು ಸಾಧ್ಯ. ರಾಮಕೃಷ್ಣ ಪರಮಹಂಸರು ಹೇಳಿದ್ದೂ ಇದೆ. ಜೊತೆಗೆ ಪವಿತ್ರತೆ ಬದುಕಿಗೆ ಮುಖ್ಯ ಎಂಬ ಸಂದೇಶ ಕೊಟ್ಟಿದ್ದಾರೆ. ಆದರೆ ಇಂದಿನ ಸಮಾಜದಲ್ಲಿ ಪವಿತ್ರತೆ ಬಗ್ಗೆ ಆಲೋಚನೆಯೇ ಇಲ್ಲವಾಗುತ್ತಿದೆ. ಪವಿತ್ರತೆ ಹೇಗಿರಬೇಕು, ಬದುಕಿನ ಆಲೋಚನೆ ಹೇಗಿರಬೇಕು ಎಂಬ ಕಲ್ಪನೆಯನ್ನು ಬಹುಶಃ ಜಗತ್ತಿಗೆ ಕೊಟ್ಟಂತಹ ಒಂದೇ ಒಂದು ರಾಷ್ಟ್ರವೆಂದರೆ ಅದು ನನ್ನ ಭಾರತ ಮಾತ್ರ ಎಂದು ತಿಳಿಸಿದರು.

ಬಳಿಕ ಕರಾವಳಿ ಯಕ್ಷಗಾನ ಮಂಡಳಿ ವತಿಯಿಂದ 'ಕೃಷ್ಣಲೀಲೆ ಕಂಸ ವಧೆ' ಯಕ್ಷಗಾನ ಪ್ರದರ್ಶನ ನಡೆಯಿತು. ಆಶ್ರಮದ ವಾರ್ಷಿಕೋತ್ಸವದ ಅಂಗವಾಗಿ ಇಂದಿನಿಂದ ಮಾ.5ರವರೆಗೆ ಆಶ್ರಮದಲ್ಲಿ ಭಕ್ತರಿಗಾಗಿ ಆಧ್ಯಾತ್ಮಿಕ ಪ್ರವಚನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ ಮಹಾ ರಾಜ್ ಸೇರಿದಂತೆ ಭಕ್ತರು ಹಾಜರಿದ್ದರು.

ಹಳೇ ಬಂಡಿಕೇರಿಯಲ್ಲಿ ಪೂಜಾ ಕೈಂಕರ್ಯ

ಮೈಸೂರು,ಮಾ.2(ಪಿಎಂ)– ಹಳೇ ಬಂಡಿಕೇರಿಯ ಶ್ರೀ ಮಹಾಲಕ್ಷ್ಮೀ ಕೊಲ್ಲಾಪುರದಮ್ಮ ದೇವಸ್ಥಾನದಲ್ಲಿ ಮಾ.4ರಿಂದ ಪೂಜಾ ವಾರ್ಷಿಕೋತ್ಸವ ನಡೆಯಲಿದೆ. ಮಾ.4ರಂದು ಶ್ರೀಮಹಾಲಕ್ಷ್ಮೀ ಕೊಲ್ಲಾಪುರದಮ್ಮನವರ ಪೂಜಾ ಕೈಂಕರ್ಯ, ಮಾ.7ರಂದು ಶ್ರೀಚಾಮುಂಡೇಶ್ವರಿ ಅಮ್ಮನವರ ಪೂಜಾ ಕೈಂಕರ್ಯ ಮತ್ತು ಮಾ.10ರಂದು ಶ್ರೀಸಿದ್ದಪ್ಪಾಜಿ ಸ್ವಾಮಿಯವರ ಪೂಜಾ ಕೈಂಕರ್ಯ (ಸಂಜೆ 6.30ರಿಂದ 10ರವರೆಗೆ) ನಡೆಯಲಿದೆ ಎಂದು ದೇವಾಲಯದ ಅಭಿವೃದ್ಧಿ ಸಮಿತಿ ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ ಸೋಮವಾರ 3 ಮಾರ್ಚ್ 2025

ಕೊಡಗಲ್ಲಿ ಕುಸಿದ ಕಾಫಿ ಫಸಲು, ಗಗನಕ್ಕೇರಿದ ಧಾರಣೆ

ಕಾಫಿ ಕೊಯ್ಲು, ನಿರ್ವಹಣೆ ವೆಚ್ಚ ಹೆಚ್ಚಳದಿಂದ ಬೆಳೆಗಾರರಲ್ಲಿ ಆತಂಕ



ಮಡಿಕೇರಿ, ಮಾ.2– ಹವಾಮಾನ ವೈಪರೀತ್ಯ ಸೇರಿದಂತೆ ಮತ್ತಿತರ ಕಾರಣಗಳಿಂದ ಕಾಫಿ ನಾಡು ಕೊಡಗಿನಲ್ಲಿ ಈ ಬಾರಿ ಕಾಫಿ ಫಸಲು ಸಾಕಷ್ಟು ಇಳುವರಿ ಕುಸಿದಿದೆ. ಆದರೆ ಇದಕ್ಕೆ ಪ್ರತಿಯಾಗಿ ಕಾಫಿ ಧಾರಣೆ ದಾಖಲೆಯ ಪ್ರಮಾಣದಲ್ಲಿ ಏರಿಕೆಯಾಗುತ್ತಿರುವುದು ಬೆಳೆಗಾರರಿಗೆ ಒಂದು ಕಡೆ ಸಂತಸ ಮೂಡಿಸುತ್ತಿದೆ. ಈ ಎಲ್ಲಾ ಆಗುಹೋಗುಗಳ ನಡುವೆಯೇ ಕಾಫಿ ಕೊಯ್ಲು ಮತ್ತು ನಿರ್ವಹಣೆಯ ವೆಚ್ಚವೂ ಇದಕ್ಕೆ ಸರಿ ಸಮಾನವಾಗಿ ಹೆಚ್ಚುತ್ತಿರುವುದು ಸಣ್ಣ ಬೆಳೆಗಾರನನ್ನು ಆತಂಕಕ್ಕೆ ದೂಡಿದೆ.

ಕೊಡಗು ಜಿಲ್ಲೆಯ ಮಡಿಕೇರಿ, ವಿರಾಜಪೇಟೆ, ಪೊನ್ನಂಪೇಟೆ ತಾಲೂಕು ವ್ಯಾಪ್ತಿಗಳಲ್ಲಿ 'ರೋಬಸ್ಟಾ' ಕಾಫಿಯನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಇದೀಗ ಈ ಕಾಫಿಯ ಕೊಯ್ಲು ಕಾರ್ಯದಲ್ಲಿ ನಡೆಯುತ್ತಿದ್ದು ಬೆಳೆಗಾರರು ತೊಡಗಿಸಿಕೊಂಡಿದ್ದಾರೆ. ಕಳೆದ ಸಾಲಿನ ಮಳೆಯಲ್ಲಿನ ವ್ಯತ್ಯಾಸ, ಹವಾಮಾನ ವೈಪರೀತ್ಯಗಳಿಂದ ಬಹಳಷ್ಟು ಕಾಫಿ ತೋಟಗಳಲ್ಲಿ ಕಳೆದ ಬಾರಿಗಿಂತ ಈ ಬಾರಿ ಶೇ.30ರಿಂದ 50ರಷ್ಟು ಕಾಫಿ ಉತ್ಪಾದನೆ ಇಳಿಕೆಯಾಗಿದೆ. ಆದರೆ ಮತ್ತೆ ಕೆಲವು ಕಡೆಗಳಲ್ಲಿ ಉತ್ತಮ ಫಸಲು ಬೆಳೆಗಾರರಿಗೆ ದೊರಕಿದೆ.

12ರಿಂದ 13 ಸಾವಿರ ಧಾರಣೆ: ಪ್ರಸ್ತುತ ರೋಬಸ್ಟಾ ಕಾಫಿ 50 ಕೆ.ಜಿ.(ಸಿಪ್ಪೆಯನ್ನು ಒಳಗೊಂಡಂತೆ)ಯ ಒಂದು ಚೀಲದ ಧಾರಣೆ 12 ಸಾವಿರ ರೂ.ಗಳಿಂದ 13 ಸಾವಿರ ರೂ.ಗಳವರೆಗೆ ದೊರಕುತ್ತಿದೆ. ಈ ಧಾರಣೆ ಇಲ್ಲಿಯವರೆಗಿನ ಅತ್ಯಧಿಕ ಧಾರಣೆ ಎಂದು ಗುರುತಿಸಲಾಗುತ್ತಿದೆ. ಕಾಫಿಯ ಅತ್ಯಧಿಕ ಉತ್ಪಾದಕ ದೇಶವಾದ ಬ್ರೆಜಿಲ್, ಕೊಲಂಬಿಯಾಗಳಲ್ಲಿ ಕಾಫಿಯ ಉತ್ಪಾದನೆ ಇಳಿಮುಖವಾಗಿರುವುದು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾಫಿ ಧಾರಣೆ ಹೆಚ್ಚಳಕ್ಕೆ ಕಾರಣ ಎನ್ನಲಾಗುತ್ತಿದೆ. ಕಳೆದ ಸಾಲಿನಲ್ಲಿ ಪ್ರತಿ ಚೀಲ ಕಾಫಿಗೆ ಗರಿಷ್ಠ 9 ಸಾವಿರ ರೂ.ಗಳ ಆಸುಪಾಸಿನ ಧಾರಣೆಯನ್ನು ಬೆಳೆಗಾರ ಪಡೆದಿದ್ದರೆ, ಈ ಬಾರಿ ಹೆಚ್ಚು ಕಡಿಮೆ ಅದರ ದುಪ್ಪಟ್ಟು ಧಾರಣೆಯ 'ಬಂಪರ್ ಗಿಫ್ಟ್' ಲಭಿಸಿದೆ.

ಕಳೆದ ಸಾಲಿನ ಅನಿಯಮಿತ ಮಳೆ, ಹವಾಮಾನದ ವ್ಯತ್ಯಾಸಗಳಿಂದ ಸಾಕಷ್ಟು ಭಾಗಗಳಲ್ಲಿ ಕಾಫಿ ಉತ್ಪಾದನೆ ಕುಂಠಿತವಾಗಿದೆ. ಕೃತಕ ನೀರಾವರಿ ಮಾಡಿ ಉತ್ತಮ ಫಸಲಿನ ನಿರೀಕ್ಷೆ ಇಟ್ಟವರು, ಫಸಲು ಕೈಕೊಟ್ಟಿದ್ದರಿಂದ ಕಂಗಾಲಾಗಿದ್ದಾರೆ. ಅದೇ ಕೆಲವೆಡೆ ಉತ್ತಮ ಫಸಲು ರೈತನ್ನು ಹರ್ಷಚಿತ್ತನನ್ನಾಗಿ ಮಾಡಿದೆ.

ಕಾರ್ಮಿಕರ ಕೊರತೆಯ ತಲೆ ನೋವು: ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಬೆಳೆಗಾರ ಕಾಫಿ ಫಸಲಿನ ಕೊಯ್ಲಿಗೆ ಈ ಬಾರಿ ಕಾರ್ಮಿಕರ ಕೊರತೆಯ ದೊಡ್ಡ ಸಂಕಷ್ಟವನ್ನೆ ಎದುರಿಸುತ್ತಿದ್ದಾನೆ. ಸಾಮಾನ್ಯವಾಗಿ ವರ್ಷದ ಡಿಸೆಂಬರ್ ಸಂದರ್ಭ ತಮಿಳುನಾಡು, ಅಸ್ಸಾಂ, ಬಿಹಾರ್ ಕಡೆಗಳಿಂದ ತಂಡೋಪತಂಡವಾಗಿ ಕಾರ್ಮಿಕರು ಕೊಡಗಿನತ್ತ ಕಾಫಿ ಕೊಯ್ಯುವ ಕಾಯಕಕ್ಕೆ ಬರುತ್ತಾರೆ. ಈ ಬಾರಿ ಕಾಫಿ ಫಸಲಿನಲ್ಲಾದ ಇಳಿಮುಖ ಹಾಗೂ ಮತ್ತಿತರ ಕಾರಣಗಳಿಂದ ಹೊರ ರಾಜ್ಯಗಳಿಂದ ಬರುತ್ತಿದ್ದ ಬಹುತೇಕ ಕಾರ್ಮಿಕರು ಕೊಡಗಿನತ್ತ ಮುಖ ಮಾಡಿಲ್ಲ. ಇದು ಬೆಳೆಗಾರನಿಗೆ ಉತ್ತಮ ಧಾರಣೆ ಪ್ರಸ್ತುತ ಲಭ್ಯವಿದ್ದರು, ಕಾಫಿ ಕೊಯ್ಲು ಮಾಡಿ ಅದನ್ನು ಪಡೆದುಕೊಳ್ಳಲು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಕಾಫಿಯ ಧಾರಣೆ ಹೆಚ್ಚಳದ ಜೊತೆಜೊತೆಯಲ್ಲೆ ಕಾರ್ಮಿಕರ ದಿನಗೂಲಿಯೂ ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಿದೆ. ಎರಡು ವರ್ಷಗಳ ಹಿಂದೆ ಕಾಫಿ ಕೊಯ್ಲು ಮಾಡಲು ಇದ್ದ ದಿನಗೂಲಿ 400ರೂ.ಗಳಿಂದ 450 ಆಗಿದ್ದರೆ, ಈ ಬಾರಿ 550 ರೂ.ಗಳಿಂದ 600 ರೂ.ಗಳಿಗೆ ಏರಿದೆ.

ಮಳೆಯ ಸಂಭ್ರಮವೋ... ಆತಂಕವೋ?

ಫೆಬ್ರವರಿ ತಿಂಗಳ ಕೊನೆಯ ವಾರ ಪ್ರವೇಶಿಸುತ್ತಿದ್ದಂತೆಯೇ ಜಿಲ್ಲೆಯ ನಾಪೋಕ್ಲು, ಕಾಲೂರು ವಿಭಾಗಗಳಲ್ಲಿ ವರ್ಷದ ಮೊದಲ ಮಳೆಯ ಸಿಂಚನವಾಗಿದೆ. ಕಾಫಿ ಕೊಯ್ಲಿಗೂ ಮುಂಚಿತವಾಗಿ ಮಳೆ ಬಂದರೆ ಕಾಫಿ ಬೆಳೆಗಾರ ಸಂಕಷ್ಟಕ್ಕೆ ಸಿಲುಕಿದನೆಂದೇ ಅರ್ಥ. ಗಿಡಗಳಲ್ಲಿ ಹಣ್ಣಾದ ಕಾಫಿಯ ನಡುವೆ ಮುಂದಿನ ಸಾಲಿನ ಫಸಲಿನ ಕಾಫಿ ಹೂಗಳು ಅರಳಲು ಸಿದ್ಧಗೊಳ್ಳುತ್ತವೆ. ಈ ಹಂತದಲ್ಲಿ ಕಾಫಿ ಕೊಯ್ಲು ಸಾಧ್ಯವಿಲ್ಲ. ಇದು ಬೆಳೆಗಾರನನ್ನು ಮತ್ತಷ್ಟು ಆತಂಕಕ್ಕೆ ದೂಡುತ್ತದೆ. ಹೀಗಾಗಿ ಕಾಫಿ ಕುಯ್ಲು ಮಾಡಿದವರಿಗೆ ಮಳೆ ಹರ್ಷ ಮೂಡಿಸಿದರೆ, ಕುಯ್ಲು ಕಾರ್ಯ ಪ್ರಗತಿಯಲ್ಲಿರುವ ಬೆಳೆಗಾರರ ಪಾಲಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ.

ಈಜಿನಲ್ಲಿ ಸಾಧನೆಗೈದ ಕೊಡಗಿನ ಬಾಲೆ ಆರ್ನಾ

ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಕಗಳ ಸುರಿಮಳೆ



ಮಡಿಕೇರಿ, ಮಾ.2– ತನ್ನ ತಂದೆಯೊಂದಿಗೆ ಬೇಸಿಗೆಯಲ್ಲಿ ಆಟವಾಡಲು ಈಜುಕೊಳಕ್ಕೆ ತೆರಳುತ್ತಿದ್ದ ಬಾಲಕಿಯೊಬ್ಬಳು 'ಈಸ ಬೇಕು ಇದ್ದು ಜೈಸ ಬೇಕು' ಎಂಬ ಕವಿವಾಣಿಯಂತೆ ಈಜುವುದರಲ್ಲಿ ಸಾಧನೆ ಮಾಡಬೇಕೆಂಬ ಸವಾಲನ್ನು ಜೀವನದ ಗುರಿಯಾಗಿಸಿಕೊಂಡು ಅದರಲ್ಲಿ ಯಶಸ್ಸನ್ನು ಕಾಣುವ ಮೂಲಕ ಕ್ರೀಡಾ ಜಿಲ್ಲೆ ಕೊಡಗಿಗೆ ಕೀರ್ತಿ ತಂದಿದ್ದಾಳೆ. ಮಡಿಕೇರಿ ನಗರದ ನಿವಾಸಿಯಾದ ಮಾದೆಯಂಡ ಪೂವಣ್ಣ ಹಾಗೂ ಗಾಯತ್ರಿ ದಂಪತಿ ಪುತ್ರಿ ಆರ್ನಾ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಈಜು ಸ್ಪರ್ಧೆಗಳಲ್ಲಿ ಹಲವು ಪದಕಗಳನ್ನು ಬಾಚಿಕೊಳ್ಳುವ ಮೂಲಕ ಗಮನ ಸೆಳೆಯುತ್ತಿದ್ದಾಳೆ. ಮೈಸೂರು ದಸರಾ ಈಜು ಸ್ಪರ್ಧೆಗೆ ಆಯ್ಕೆಯಾಗುವ ಮೂಲಕ ಆರ್ನಾ ಕ್ರೀಡಾ ಜೀವನಕ್ಕೆ ಕಾಲಿರಿಸಿದ್ದಳು. ಪುತ್ರಿಯ ಸಾಧನೆಗೆ ಒತ್ತಾಸೆಯಾಗಿ ನಿಲ್ಲುವ ಆರ್ನಾಳ ತಾಯಿ ಗಾಯತ್ರಿ ಅವರು ಶಿಕ್ಷಕಿ ಹುದ್ದೆಯನ್ನು ತ್ಯಜಿಸಿ, ಮಂಗಳೂರಿಗೆ ಹೋಗಿ ನೆಲೆಸಿದ್ದಾರೆ. ಅಲ್ಲಿ ಈಜು ತರಬೇತುದಾರರಾದ ಶಿವಾನಂದ ಗಟ್ಟಿ ಅವರಿಂದ ಆರ್ನಾ ತರಬೇತಿ ಪಡೆದ ಬಳಿಕ ಕೇವಲ 6 ತಿಂಗಳಿನಲ್ಲಿಯೇ ಈಜು ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದು ಬೀಗುವ ಮೂಲಕ ಸಾಧನೆಯ ಮೆಟ್ಟಿಲನ್ನು ಏರಲು ಆರಂಭಿಸಿದ್ದಾಳೆ.

ಕೋವಿಡ್ ಬಳಿಕ ಬೆಂಗಳೂರಿಗೆ ತೆರಳಿ ವಿಜಯನಗರ ಅಥ್ಲೆಟಿಕ್‌ನ ಈಜು ತರಬೇತಿದಾರರಾದ ತಮಿಳ್ ವಣ್ಣನ್ ಅವರ ಬಳಿ ಈಜು ತರಬೇತಿಯನ್ನು ಪಡೆಯುವ ಅರ್ನಾ, ಹಲವು ಪದಕಗಳನ್ನು ಗೆಲ್ಲುವ ಮೂಲಕ ಸಾಧನೆ ಹಾದಿಯಲ್ಲಿ ಮುನ್ನುಗುತ್ತಿದ್ದಾಳೆ. 2022 ರಲ್ಲಿ ಕರ್ನಾಟಕ ಸ್ಟೇಟ್ ಲೆವೆಲ್ 400 ಮೀಟರ್ ಫ್ರಿ ಸ್ಟೈಲ್ ಈಜು ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ 10 ವರ್ಷಗಳ ಹಿಂದಿನ ದಾಖಲೆಯನ್ನು ಮುರಿದು ಆರ್ನಾ ಹೊಸ ದಾಖಲೆಯನ್ನು ಬರೆದಿದ್ದಾಳೆ. ಈಗಲೂ ಸಹ ಈ ದಾಖಲೆ ಆರ್ನಾಳ ಹೆಸರಿನಲ್ಲಿಯೇ ಇರುವುದು ಹೆಗ್ಗಳಿಕೆಯಾಗಿದೆ.

ಆರ್ನಾಳ ಕೋಚ್ ತಮಿಳ್ ವಣ್ಣನ್ ಅವರು ಬೆಂಗಳೂರಿನಿಂದ ಚೆನ್ನೈಗೆ ವರ್ಗಾವಣೆಯಾಗಿ ತೆರಳಿದ ಬಳಿಕ ತಮಿಳ್ ವಣ್ಣನ್ ಅವರ ಬಳಿ ತರಬೇತಿ ಪಡೆಯಲು ಆರ್ನಾಳು ಸಹ ಪೋಷಕರೊಂದಿಗೆ ಚೆನ್ನೈಗೆ ತೆರಳಿ ಅಲ್ಲಿ ಚೆಟ್ಟಿನಾಡ್ ವಿದ್ಯಾಶ್ರಮದಲ್ಲಿ ವ್ಯಾಸಂಗಕ್ಕೆ ಸೇರುವ ಮೂಲಕ ಓದಿನೊಂದಿಗೆ ಈಜು ಸ್ಪರ್ಧೆಯಲ್ಲೂ ತೊಡಗಿಸಿಕೊಂಡಿದ್ದಾಳೆ. ಇದೀಗ ಚೆಟ್ಟಿನಾಡ್ ವಿದ್ಯಾಶ್ರಮದಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡುತ್ತಿರುವ ಆರ್ನಾ, ತನ್ನ ಸಾಧನೆಗೆ ತನ್ನ ತರಬೇತುದಾರ ತಮಿಳ್ ವಣ್ಣನ್ ಹಾಗೂ ಈಜು ಸ್ಪರ್ಧೆಯೊಂದಿಗೆ ವ್ಯಾಸಂಗವನ್ನು ಮುಂದುವರೆಸಲು ವಿದ್ಯಾಸಂಸ್ಥೆಯ ಸಹಪಾಠಿಗಳು ಮತ್ತು ಶಿಕ್ಷಕರು ಸಹ ಸಹಕಾರ ನೀಡುತ್ತಿದ್ದಾರೆಂದು ಹೆಮ್ಮೆಯಿಂದ ಹೇಳಿದಳು.

ಪದಕಗಳ ಬೇಟೆ

ಆರ್ನಾ ಈಜು ಸ್ಪರ್ಧೆಯಲ್ಲಿ ಇದುವರೆಗೂ ರಾಜ್ಯ ಮಟ್ಟದಲ್ಲಿ 80 ಚಿನ್ನದ ಪದಕ, 15 ಬೆಳ್ಳಿ ಪದಕ ಹಾಗೂ 23 ಕಂಚಿನ ಪದಕಗಳನ್ನು ಜಯಿಸಿದ್ದಾಳೆ. ಝೋನಲ್ ಲೆವೆಲ್‌ನಲ್ಲಿ 23 ಚಿನ್ನದ ಪದಕ, 15 ಬೆಳ್ಳಿ ಪದಕ, 7 ಕಂಚಿನ ಪದಕಗಳನ್ನು ಹಾಗೂ ಇಂಟರ್‌ನ್ಯಾಷನಲ್ ಲೆವೆಲ್‌ನಲ್ಲಿ 3 ಚಿನ್ನದ ಪದಕ, 2 ಬೆಳ್ಳಿ ಪದಕ ಹಾಗೂ 1 ಕಂಚಿನ ಪದಕವನ್ನು ಗೆಲ್ಲುವ ಮೂಲಕ ಒಟ್ಟು 130 ಚಿನ್ನದ ಪದಕ, 81 ಬೆಳ್ಳಿ ಪದಕ ಹಾಗೂ 40 ಕಂಚಿನ ಪದಕಗಳನ್ನು ಗೆದ್ದಿದ್ದಾಳೆ. ತನ್ನ ಸಾಮರ್ಥ್ಯದ ಮೂಲಕವೇ ಒಟ್ಟು 251 ಪದಕಗಳನ್ನು ತನ್ನದಾಗಿಸಿಕೊಂಡ ಹಿರಿಮೆ ಆರ್ನಾಳದ್ದಾಗಿದೆ.

ಕಮಟೆ ಮಹಾದೇವರ ವಾರ್ಷಿಕೋತ್ಸವ

ಗೋಣಿಕೊಪ್ಪ, ಮಾ.2– ಮಾಯಮುಡಿ ಕಮಟೆ ಮಹಾದೇವರ ವಾರ್ಷಿಕೋತ್ಸವ ಮಾರ್ಚ್ 10 ರಿಂದ ಮಾ.14 ರವರೆಗೆ ಜರುಗಲಿದೆ.

ಮಾ.10 ರಂದು ರಾತ್ರಿ 7 ಗಂಟೆಗೆ ಕೊಡಿಮರ ಶಾಸ್ತ್ರ ಮೂಲಕ ಹಬ್ಬಕ್ಕೆ ಚಾಲನೆ ನೀಡಲಾಗುತ್ತದೆ. ಮಾ.11 ರಂದು ಬೆಳಗ್ಗೆ 11.30 ಗಂಟೆಗೆ ಗಣಪತಿಗೆ ಪಂಚಕಜ್ಜಾಯ, ಈಶ್ವರನಿಗೆ ಬಿಲ್ವಪತ್ರಾರ್ಚನೆ ನೆರವೇರಲಿದೆ. ಮಾ.12 ರಂದು ಬೆಳಗ್ಗೆ 11.30 ಗಂಟೆಗೆ ಈಶ್ವರನಿಗೆ ಕ್ಷೀರಾಭಿಷೇಕ, ಮಾ.13 ರಂದು ಬೆಳಗ್ಗೆ 11 ಗಂಟೆಯಿಂದ ಸುಬ್ರಮಣ್ಯನಿಗೆ ಕ್ಷೀರಾಭಿಷೇಕ, ಈಶ್ವರನಿಗೆ ಅಲಂಕಾರ ಪೂಜೆ, ಸಂಜೆ 6 ಗಂಟೆಗೆ ನೆರ್ಮೆ ಜರುಗಲಿದೆ. ಮಾ.14 ರಂದು ಮಧ್ಯಾಹ್ನ 12 ಗಂಟೆಗೆ ಮಹಾಪೂಜೆ, ಅನ್ನದಾನ, ಸಾಯಂಕಾಲ 6 ಗಂಟೆಗೆ ದೇವರ ದರ್ಶನ, ದೇವರ ಅಭ್ಯಂಜನ ಸ್ನಾನ, ದೇವರ ನೃತ್ಯ, ರಾತ್ರಿ ವಸಂತ ಪೂಜೆ, ವಿಷ್ಣುಮೂರ್ತಿ, ಗುಳಿಗನಿಗೆ ಪೂಜೆ ನೆರವೇರಲಿದೆ.

ಹಬ್ಬದ ಪ್ರತಿದಿನ ಮಂಗಳಾರತಿ, ಬೆಳಗ್ಗೆ, ಮಧ್ಯಾಹ್ನ, ರಾತ್ರಿ ಅನ್ನದಾನ, ಗುಡಿಗೆ ಸಾಮೂಹಿಕ ಅಲಂಕಾರ, ಮುಂಜಾನೆ 5.30 ಗಂಟೆಗೆ, ರಾತ್ರಿ 7 ಗಂಟೆಗೆ ತುಲಾಬಲಿ, ಬೊಳಕ್ ನೆರವೇರಲಿದೆ.

10 ಕೋಟಿ ವೆಚ್ಚದಲ್ಲಿ ವಿ.ಪೇಟೆಯಲ್ಲಿ ನೂತನ ಮಾರುಕಟ್ಟೆ ನಿರ್ಮಾಣ

ಕರ್ನಾಟಕ ಹಣಕಾಸು ಸಂಸ್ಥೆಯಿಂದ ಸಾಲ ಪಡೆಯಲು ಪುರಸಭೆಯ ಸಾಮಾನ್ಯ ಸಭೆಯಲ್ಲಿ ನಿರ್ಣಯ



ಮನೆಯಪಂಡ ದೇಚಮ್ಮ ಅವರ ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆ ನಡೆಯಿತು.

ವಿರಾಜಪೇಟೆ, ಮಾ.2– ವಿರಾಜಪೇಟೆ ಪಟ್ಟಣದ ನೂತನ ಮಾರುಕಟ್ಟೆಯ ನಿರ್ಮಾಣಕ್ಕೆ ಶಾಸಕರು 5 ಕೋಟಿ ನೀಡಿದ್ದು, 10 ಕೋಟಿ ರೂ.ಗಳ ಈ ಕಾಮಗಾರಿಗೆ ಕರ್ನಾಟಕ ಹಣಕಾಸು ಸಂಸ್ಥೆಯಿಂದ ಸಾಲ ಪಡೆಯಲು ವಿರಾಜಪೇಟೆ ಪುರಸಭೆಯ ವಿಶೇಷ ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಮನೆಯಪಂಡ ದೇಚಮ್ಮ ಅವರ ಅಧ್ಯಕ್ಷತೆಯಲ್ಲಿ ಪುರಭವನ ಸಭಾಂಗಣದಲ್ಲಿ ನಡೆದ ಈ ಸಾಮಾನ್ಯ ಸಭೆಯಲ್ಲಿ ಈ ಕುರಿತು ನಿರ್ಣಯ ಕೈಗೊಳ್ಳಲಾಯಿತು.

ಪುರಸಭೆಯ ಮಳಿಗೆ ಹರಾಜಿನ ವಿಚಾರದಲ್ಲಿ ಸದಸ್ಯ ಮಹಾದೇವ ಮಾಹಿತಿ ಬಯಸಿದರು. ಈ ವಿಚಾರವಾಗಿ ಅಧ್ಯಕ್ಷರು ಮಾತಿಗೆ ಅವಕಾಶ ನೀಡಲಿಲ್ಲ ಎಂಬ ಕಾರಣಕ್ಕೆ ಕೆಲಕಾಲ ಅಧ್ಯಕ್ಷರು ಹಾಗೂ ಮಹಾದೇವ ಮತ್ತು ಜೂನ ನಡುವೆ ಮಾತಿನ ಚಕಮಕಿ ನಡೆಯಿತು. ಮುಖ್ಯಾಧಿಕಾರಿ ಈ ಕುರಿತು ಮಾಹಿತಿ ನೀಡಿ 41 ಅವಧಿ ಮುಗಿದ ಮಳಿಗೆ ಇದೆ. ಜೊತೆಗೆ ಮಾರುಕಟ್ಟೆ ಸಂಕೀರ್ಣದಲ್ಲಿ 18 ಮಳಿಗೆ ಇದೆ 4 ನೆಲಬಾಡಿಗೆ ಮಳಿಗೆ ಇದೆ ಎಂದರು.

ಸದಸ್ಯೆ ರಂಜಿ ಪೂಣಚ್ಚ ಮಾತನಾಡಿ, ಮಾರುಕಟ್ಟೆ ಸಂಕೀರ್ಣ ಕಾಮಗಾರಿ ನಡೆಯುವುದರಿಂದ 18 ಮಳಿಗೆ ಹರಾಜು ಕೈಬಿಡಬೇಕಿದೆ, ಉಳಿದವುಗಳಿಗೆ ಶಾಸಕರ ಸೂಚನೆಯಂತೆ ಇ ಟೆಂಡರ್ ಕರೆಯುವಂತೆ ತಿಳಿಸಿದರು. ಸದಸ್ಯ ಶಬರೀಶ್ ಶೆಟ್ಟಿ ಮಾತನಾಡಿ, ಈಗ ವಿರಾಜಪೇಟೆ ಪುರಸಭೆ ಆಗಿದ್ದು ನಮಗೆ ಆದಾಯ ಹೆಚ್ಚು ಬೇಕಿದೆ. ಹಿಂದೆ ಕಡಿಮೆ ಆದಾಯ ಇತ್ತು. ಮುಂದೆ ಇದನ್ನು ಹೆಚ್ಚಿಸಿ ಠೇವಣಿ ಮತ್ತು ಬಾಡಿಗೆ ಈಗಿನ ಕಾಲಘಟ್ಟಕ್ಕೆ ಸರಿಯಾಗಿರುವಂತೆ ನೋಡಿಕೊಂಡು ಇ ಟೆಂಡರ್ ಕರೆದು ಮಳಿಗೆ ಹಂಚಿಕೆ ಮಾಡಿ ಎಂದರು. ಇ ಟೆಂಡರಿಗೆ ಸಭೆಯಲ್ಲಿದ್ದ ಬಹುತೇಕ ಸದಸ್ಯರು ಹಾಗೂ ಉಪಾಧ್ಯಕ್ಷರು ಅಧ್ಯಕ್ಷರು ಸಮ್ಮತಿ ವ್ಯಕ್ತಪಡಿಸಿದರು.

ಸದಸ್ಯ ಪೃಥ್ವಿನಾಥ್ ಮೀನುಪೇಟೆ ರುದ್ರಭೂಮಿಯ ಅವ್ಯವಸ್ಥೆಯ ಕುರಿತು ಮಾತನಾಡಿ, ಸಿಲಿಕಾನ್ ಛೇಂಬರ್ ದುಸ್ಥಿತಿಯಲ್ಲಿದೆ. ನೀರಿನ ವ್ಯವಸ್ಥೆ ಸರಿ ಇಲ್ಲ. ದೀಪ, ಶೆಡ್ ಇತ್ಯಾದಿಗಳ ನಿರ್ಮಾಣಕ್ಕೆ 2 ಲಕ್ಷ ರೂ. ಸಾಲದು. ಗೇಟ್ ಸರಿಯಾಗಿಲ್ಲ. ಯಾರಾರು ಬೇಕಾದರೂ ಪ್ರವೇಶಿಸಿ ತೋಚಿದನ್ನು ಮಾಡಬಹುದು ಎಂದರು.


ಇದಕ್ಕೆ ಅಧ್ಯಕ್ಷೆ ದೇಚಮ್ಮ ಈ ಬಾರಿ ಅಲ್ಲಿನ ಅಭಿವೃದ್ಧಿಗೆ 75 ಲಕ್ಷ ರೂ.ಗಳಿಗೂ ಹೆಚ್ಚು ಅನುದಾನ ಇದೆ ಎಂದರು. ಸದಸ್ಯೆ ಆಶಾ ಸುಬ್ಬಯ್ಯ ಪಟ್ಟಣದ ಬಸ್ ತಂಗುದಾಣ ಭಿಕ್ಷಕರುಗಳ ಆಶ್ರಯತಾಣವಾಗಿದ್ದು, ನಿರುಪಯುಕ್ತವಾಗಿದೆ ಎಂದಾಗ ಅಧ್ಯಕ್ಷೆ ದೇಚಮ್ಮ ನಾಗರಿಕ ವಿನ್ಯಾಸ ಯೋಜನೆಯಲ್ಲಿ 2 ಕೋಟಿ ಅನುದಾನ ವಿವಿಧ ಈ ರೀತಿಯ ಕೆಲಸಕ್ಕೆ ಇದ್ದು ಅದರಲ್ಲಿ ತಂಗುದಾಣ ದುರಸ್ತಿಯಾಗಲಿದೆ ಎಂದರು.

ಉಳಿದಂತೆ ಅನಾಥ ಶವ ಹಾಗೂ ನಿರಾಶಿತರ ಶವ ಮಡಿಕೇರಿ ಶವಾಗಾರಕ್ಕೆ ಸಾಗಿಸಬೇಕಿದ್ದು, ಇದರ ಸಾಗಣೆ ವೆಚ್ಚ ಪುರಸಭೆ ಭರಿಸುವಂತೆಯೂ ಈ ಶವ ಸಂಸ್ಕಾರಕ್ಕೆ ಪುರಸಭೆ ವಾರ್ಷಿಕವಾಗಿ ಮೀಸಲಿಟ್ಟಿರುವ ಹಣವನ್ನು 1 ಲಕ್ಷ ರೂ.ಗಳಿಂದ 2 ಲಕ್ಷಕ್ಕೆ ಏರಿಸುವಂತೆ ಸದಸ್ಯ ಪೃಥ್ವಿನಾಥ್ ಆಗ್ರಹಿಸಿದಾಗ 2 ಲಕ್ಷ ರೂ.ಗಳಿಗೆ ಏರಿಸಲು ಸಭೆ ಸಮ್ಮತಿಸಿತು. ಅದೇ ರೀತಿ ಸದಸ್ಯ ರಜನಿಕಾಂತ್ ಬಡ ವರ್ಗದ ಜನರ ಅಂತ್ಯಕ್ರಿಯೆಗೆ ಪುರಸಭೆ ಯಿಂದ ನೀಡುವ 2 ಸಾವಿರ ರೂ.ಗಳನ್ನು ಹೆಚ್ಚಿಸುವಂತೆ ಆಗ್ರಹಿಸಿದರು.

ಇದರಂತೆ ಮೂರು ಸಾವಿರ ರೂ. ನೀಡಲು ಸಭೆ ನಿರ್ಧಾರ ಮಾಡಿತು. ಪ್ರಶ್ನೆಯೊಂದಕ್ಕೆ ಉತ್ತರಿಸಿದ ಮುಖ್ಯಾಧಿಕಾರಿ ಪಟ್ಟಣದ ಕಲ್ಯಾಣ ಮಂಟಪದ ಕಸ ವಿಲೇವಾರಿ ಶುಲ್ಕದಿಂದ ಪುರಸಭೆಗೆ ವಾರ್ಷಿಕ 20 ಲಕ್ಷ ರೂ. ಆದಾಯ ಇದೆ ಎಂದರು.

ಸಭೆಯಲ್ಲಿ ಉಪಾಧ್ಯಕ್ಷೆ ಫಸಿಹಾ ತಬುಸುಂ ಮುಖ್ಯಾಧಿಕಾರಿ ಪಟ್ಟಚರಂವಂಡ ನಾಚಪ್ಪ ಸಿಬ್ಬಂದಿ ವರ್ಗದವರು ಉಪ ಸ್ಥಿತರಿದ್ದರು.

ಪಿ.ವೈ.ಸೂಫಿ ನಿಧನ



ನಾಪೋಕ್ಲು, ಮಾ.2– ಇಲ್ಲಿಗೆ ಸಮೀಪದ ಎಮ್ಮೆಮಾಡು ಗ್ರಾಮದ ಕೂರುಳಿ ಪರಂಬು ನಿವಾಸಿ ಪಿ.ವೈ.ಸೂಫಿ(51) ಅವರು ಹೃದಯಾಘಾತದಿಂದ ಭಾನುವಾರ ನಿಧನರಾದರು. ಮೃತರ ಅಂತಿಮ ಸಂಸ್ಕಾರವು ಭಾನುವಾರ ಎಮ್ಮೆ ಮಾಡು ತಾಜುಲ್ ಇಸ್ಲಾಂ ಮುಸ್ಲಿಂ ಜಮಾ ಅತ್‌ನ ಖಬರ್‌ಸ್ಥಾನದಲ್ಲಿ ನೆರವೇರಿಸಲಾಯಿತು. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ದೇವರಾಜ ಅರಸು ಆಡಳಿತ, ರಾಜಕಾರಣ ಎಲ್ಲರಿಗೂ ಆದರ್ಶ



ಉದ್ಘಾಟನಾ ಕಾರ್ಯಕ್ರಮದಲ್ಲಿ ಸಚಿವರು ಹಾಗೂ ಗಣ್ಯರು.

ಚಾಮರಾಜನಗರ, ಮಾ.2 – ರಾಜ್ಯ ಕಂಡ ಅಪ್ರತಿಮ ಆಡಳಿತಗಾರರಾಗಿದ್ದ ಡಿ.ದೇವರಾಜ ಅರಸು ಮುತ್ಸದ್ದಿ ರಾಜಕಾರಣಿ. ಜನರ ಕಲ್ಯಾಣಕ್ಕಾಗಿ ಯೋಜನೆಯನ್ನು ನೀಡಿದವರು. ಇಂತಹ ರಾಜಕಾರಣಿ ನಮ್ಮೆಲ್ಲರಿಗೂ ಆದರ್ಶವಾಗಿದ್ದಾರೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು.

ನಗರದ ವರನಟ ಡಾ.ರಾಜ್‌ಕುಮಾರ್ ಕಲಾಮಂದಿರದಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ ರಾಜ್ಯ ಘಟಕದಿಂದ ನಡೆದ ಕರ್ನಾಟಕ ಸುವರ್ಣ ಸಂಭ್ರಮ ಮಹೋತ್ಸವದ 50ನೇ ದಿನದ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮ ಹಾಗೂ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸುರವರ ಸ್ಮರಣೆ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

ತಮ್ಮ ಸಮುದಾಯದ ಬೆಂಬಲ ಇಲ್ಲದೇ ಅಧಿಕಾರಕ್ಕೆ ಬಂದ ದೇವರಾಜ ಅರಸು ಅವರು ಮುಖ್ಯಮಂತ್ರಿಗಳಾಗಿ ದೇಶವೇ ಮೆಚ್ಚುವಂತಹ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದರು. ಇಂತಹ ವ್ಯಕ್ತಿತ್ವವುಳ್ಳ ಅರಸು ಅವರ ಹೆಸರಿನ ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವುದು ನನ್ನ ಪುಣ್ಯ ಎಂದರು.

ನಂತರ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಮಾತನಾಡಿ, ದೇವರಾಜ ಅರಸು ಅತ್ಯಂತ ಯಶಸ್ವಿ ಮುಖ್ಯಮಂತ್ರಿಯಾಗಿದ್ದರು. ಬಡವರ ಪರವಾದ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದರು. ಅಂಥ ಮಹಾನ್ ಚೇತನದ ಹೆಸರಿನಲ್ಲಿ ನನ್ನ ಸ್ನೇಹಿತರಾದ ಮಹದೇವಪ್ಪ ಅವರಿಗೆ ಪ್ರಶಸ್ತಿ ನೀಡುತ್ತಿರುವುದು ತುಂಬ ಖುಷಿಯಾಗಿದೆ ಎಂದರು.

ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಸಿ.ಪಿ. ಕೃಷ್ಣಕುಮಾರ್, ಮಹಾಸಭಾದ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ, ವಾಟಾಳ್ ಮಠದ ಡಾ.ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಕುಮಾರ್, ವಿಧಾನಪರಿಷತ್ ಸದಸ್ಯರಾದ ಮಂಜೇಗೌಡ, ಡಾ.ತಿಮ್ಮಯ್ಯ, ಚಾ.ನಗರ ವಿವಿ ಉಪಕುಲಪತಿ ಎಂ.ಆರ್. ಗಂಗಾಧರ್, ಕಾಡಾಧ್ಯಕ್ಷ ಮರಿಸ್ವಾಮಿ, ಮಾಜಿ ಶಾಸಕ ಆರ್.ನರೇಂದ್ರ, ನಗರ ಸಭಾಧ್ಯಕ್ಷ ಸುರೇಶ್, ಚೂಡಾಧ್ಯಕ್ಷ ಮಹಮ್ಮದ್ ಅಸ್ಗರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು, ಜಿಪಂ ಮಾಜಿ ಅಧ್ಯಕ್ಷ ಕಾವೇರಿ ಶಿವಕುಮಾರ್, ಡಿಸಿ ಶಿಲ್ಪಾನಾಗ್, ಎಸ್‌ಪಿ ಡಾ.ಬಿ.ಟಿ. ಕವಿತಾ, ಜಿಪಂ ಸಿಇಒ ಮೋನಾರೋತ್, ಮುಖಂಡರಾದ ಹಳ್ಳಿಕೆರೆ ಹುಂಡಿ ಭಾಗ್ಯರಾಜ್, ಪುಟ್ಟಸ್ವಾಮಿಗೌಡ, ನವೀನ್ ಕೆರೆಹಳ್ಳಿ, ಆಲೂರು ಪ್ರದೀಪ್, ನಿಜಧ್ವನಿ ಗೋವಿಂದರಾಜು, ರವಿಚಂದ್ರ ಪ್ರಸಾದ್ ಕಹಳೆ, ಜಗದೀಶ್ ಹಾಜರಿದ್ದರು.

ಹಾಡಿಗಳಿಗೆ ಬೆಳಕು ನೀಡುವ ಕಾರ್ಯ ಸಾಕಾರ

ಪಾಲಾರ್‌ನಲ್ಲಿ ವಿದ್ಯುತ್ ಸಂಪರ್ಕಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಚಾಲನೆ



ಹಾಡಿಗಳಿಗೆ ಬೆಳಕು ನೀಡಿದ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಮತ್ತು ಗಣ್ಯರು.

ಚಾಮರಾಜನಗರ, ಮಾ.2– ಶತಮಾನಗಳಿಂದ ಕತ್ತಲು ತುಂಬಿದ್ದ ಜಿಲ್ಲೆಯ ಹಾಡಿಗಳಿಗೆ ಬೆಳಕು ನೀಡುವ ಯೋಜನೆ ಸಾಕಾರಗೊಳ್ಳುತ್ತಿದ್ದು, ಮೊದಲಿಗೆ ಮಲೆ ಮಹದೇಶ್ವರ ಬೆಟ್ಟ ವ್ಯಾಪ್ತಿಯ ಪಾಲಾರ್ ಹಾಡಿ ಇಂದು ವಿದ್ಯುತ್ ಸಂಪರ್ಕ ಪಡೆಯುವ ಮೂಲಕ ಬೆಳಕು ಕಂಡಿದೆ.

ಜಿಲ್ಲೆಯ 31 ಹಾಡಿಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕ ಕಲ್ಪಿಸುವ ಯೋಜನೆಗೆ ಕಳೆದ ನ.30 ರಂದು ಚಾಲನೆ ನೀಡಲಾಗಿತ್ತು ಮೂರು ತಿಂಗಳಿನಲ್ಲಿಯೇ ಯೋಜನೆಯ ಮೊದಲ ಹಂತದಲ್ಲಿ ಪಾಲಾರ್ ಹಾಡಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಮೂಲಕ ಅತ್ಯಂತ ಕ್ಷಿಪ್ರಗತಿಯಲ್ಲಿ ಯೋಜನೆ ತಲುಪಿದೆ.

ಒಟ್ಟು 31 ಹಾಡಿಗಳಿಗೆ 42 ಕೋಟಿ ರೂ. ವೆಚ್ಚದಲ್ಲಿ 2 ಸಾವಿರಕ್ಕೂ ಹೆಚ್ಚು ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಐತಿಹಾಸಿಕ ಯೋಜನೆ ಚಾಮರಾಜನಗರ ಜಿಲ್ಲೆಯಲ್ಲಿ ಆರಂಭಗೊಂಡಿದೆ. ಇದಕ್ಕೆ ಸಾಕ್ಷಿಯಾಗಿ ಪಾಲಾರ್ ಹಾಡಿ ಇಂದು ವಿದ್ಯುತ್ ಸೌಲಭ್ಯವನ್ನು ಪಡೆದುಕೊಂಡಿದೆ. ಪಾಲಾರ್ ಹಾಡಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸುವ ಮಹತ್ತರ ಸೇವೆಗೆ ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ ಇಂದು ಚಾಲನೆ ನೀಡಿದರು. ಪಾಲಾರ್ ಹಾಡಿಯ ಮಾದಮ್ಮ ಅವರ ಮನೆಯಲ್ಲಿ ವಿದ್ಯುತ್ ಗುಂಡಿಯನ್ನು ಒತ್ತುವ ಮೂಲಕ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ವಿದ್ಯುತ್ ಸಂಪರ್ಕ ಯೋಜನೆಯನ್ನು ವಿಧ್ಯುಕ್ತವಾಗಿ ಉದ್ಘಾಟಿಸಿದರು.

ಬಳಿಕ ಸಮೀಪದಲ್ಲಿಯೇ ಆಯೋಜಿಸಲಾಗಿದ್ದ ಸಮಾರಂಭವನ್ನು ದೀಪ ಬೆಳಗಿಸುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ವೆಂಕಟೇಶ್ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಮರಾಜನಗರ ಜಿಲ್ಲೆಗೆ ಭೇಟಿ ನೀಡಿದ್ದ ವೇಳೆ ಹಾಡಿ, ಪೋಡುಗಳ ಜನರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸೂಚಿಸಿದ್ದರು. ನಾನು ಸಹ ಬೆಟ್ಟಕ್ಕೆ ಮೊದಲ ಬಾರಿ ಭೇಟಿ ನೀಡಿದಾಗ ಸ್ಥಳೀಯ ಹಾಡಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಬೇಕೆಂಬ ಬೇಡಿಕೆ ಕೇಳಿ ಬಂದಿತ್ತು. ಜನರಿಗೆ ಶಾಶ್ವತವಾಗಿ ವಿದ್ಯುತ್ ಸಂಪರ್ಕ ಒದಗಿಸಬೇಕೆಂಬ ನಿರ್ಧಾರವನ್ನು ಸರ್ಕಾರ ಕೈಗೊಂಡು ಅದರಂತೆ ಯೋಜನೆಗೆ ಚಾಲನೆ ನೀಡಲಾಗಿತ್ತು. ಇಂದು ಯಶಸ್ವಿಯಾಗಿ ಪಾಲಾರ್‌ನಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿದ್ದೇವೆ ಎಂದರು. ಜಿಲ್ಲೆಯ ಎಲ್ಲಾ 31 ಹಾಡಿಗಳಿಗೂ ವಿದ್ಯುತ್ ಸಂಪರ್ಕ ಒದಗಿಸಲಿದ್ದೇವೆ. ಕಾಮಗಾರಿ ನಡೆಯುತ್ತಿದ್ದು, 2 ರಿಂದ 3 ತಿಂಗಳಲ್ಲಿ ಸಂಪೂರ್ಣವಾಗಿ ಎಲ್ಲಾ ಹಾಡಿಗಳಿಗೆ ವಿದ್ಯುತ್ ಸಂಪರ್ಕ ನೀಡುವ ಕಾರ್ಯ ಪೂರ್ಣವಾಗಲಿದೆ. ಯೋಜನೆ ಫಲಪ್ರದ ಜಾರಿಗೆ ಮುಖ್ಯಮಂತ್ರಿಗಳು, ಸಚಿವರು, ಶಾಸಕರು, ಅಧಿಕಾರಿಗಳು ಕಾರಣರಾಗಿದ್ದಾರೆ ಎಂದು ಉಸ್ತುವಾರಿ ಸಚಿವರು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಎಚ್.ಸಿ.ಮಹದೇವಪ್ಪ ಮಾತನಾಡಿ, ಅರಣ್ಯವಾಸಿಗಳು, ಕಾಡಂಚಿನ ಜನರು, ಎಲ್ಲಾ ವರ್ಗದ ಬಡವರ ಮುಖದಲ್ಲಿ ನಗು ಕಾಣಬೇಕು. ಅವರಿಗೆ ಪೂರಕವಾಗಿರುವ ಮೂಲ ಸೌಲಭ್ಯಗಳನ್ನು ಕಲ್ಪಿಸುವುದು ನಮ್ಮ ಹೊಣೆಗಾರಿಕೆಯಾಗಿದೆ. ಈ ನಿಟ್ಟಿನಲ್ಲಿ ಸರ್ಕಾರ ಎಲ್ಲಾ ಅವಶ್ಯಕ ಕ್ರಮಗಳಿಗೆ ಆದ್ಯತೆ ನೀಡಿದೆ ಎಂದರು. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ, ಶಾಸಕ ಎಂ.ಆರ್. ಮಂಜುನಾಥ್ ಮಾತನಾಡಿದರು. ಶಾಸಕ ಎ.ಆರ್. ಕೃಷ್ಣಮೂರ್ತಿ, ಮಾಜಿ ಶಾಸಕ ಆರ್.ನರೇಂದ್ರ ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಪಂ ಸಿಇಓ ಮೋನಾರೋತ್, ಎಸ್‌ಪಿ ಡಾ.ಬಿ.ಟಿ.ಕವಿತ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಮುನಿರಾಜ್ ಗೋಪಾಲ್, ಈ ಹಿಂದಿನ ವ್ಯವಸ್ಥಾಪಕ ನಿರ್ದೇಶಕರಾದ ಶೀಲ, ಇತರರು ಉಪಸ್ಥಿತರಿದ್ದರು.

6 ಕೋಟಿ ರೂ. ವೆಚ್ಚದ ರಸ್ತೆ ಕಾಮಗಾರಿಗೆ ಭೂಮಿಪೂಜೆ



ಯಳಂದೂರು ತಾಲೂಕಿನ ಬಿಳಿಗಿರಿರಂಗನಬೆಟ್ಟದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಂಸದ ಸುನೀಲ್ ಬೋಸ್ ಹಾಗೂ ಶಾಸಕ ಎ.ಆರ್. ಕೃಷ್ಣಮೂರ್ತಿ ಭೂಮಿಪೂಜೆ ನೆರವೇರಿಸಿದರು.

ಯಳಂದೂರು, ಮಾ.2– ತಾಲೂಕಿನ ಬಿಳಿಗಿರಿರಂಗನಬೆಟ್ಟದಲ್ಲಿ ಕೇಂದ್ರದ ಸಿಆರ್‌ಐಎಫ್ ಯೋಜನೆಯಡಿಯಲ್ಲಿನ ಸರಪಳಿ ರಸ್ತೆ ಕಾಮಗಾರಿಗೆ ಸಂಸದ ಸುನೀಲ್ ಬೋಸ್ ಹಾಗೂ ಶಾಸಕ ಎ.ಆರ್. ಕೃಷ್ಣಮೂರ್ತಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಸಂಸದ ಸುನೀಲ್ ಬೋಸ್ ಮಾತನಾಡಿ, ಬಿ.ಆರ್. ಹಿಲ್ಸ್ ರಸ್ತೆಯ ಸರಪಳಿ 69.60 ಕಿಮೀ ನಿಂದ 83 ಕಿಮೀ ವರೆಗಿನ ರಾಜ್ಯ ಹೆದ್ದಾರಿ 80ರ ನಂಜನಗೂಡು–ಬಿಳಿಗಿರಿರಂಗನಬೆಟ್ಟ ರಸ್ತೆ ಅಭಿವೃದ್ಧಿಗೆ 2023–24 ನೇ ಸಾಲಿನಲ್ಲಿ ಸಿಆರ್‌ಐಎಫ್ ಯೋಜನೆಯಡಿಯಲ್ಲಿ ಅನುಮೋದನೆ ನೀಡಲಾಗಿತ್ತು. ಬಿಳಿಗಿರಿರಂಗನಬೆಟ್ಟದ ಗಂಗಾಧರೇಶ್ವರ ದೇಗುಲದಿಂದ ಕೆ.ಗುಡಿವರೆಗಿನ ರಸ್ತೆಯ ಮರುಡಾಂಬರೀಕರಣಕ್ಕೆ ಈ ಅನುದಾನವನ್ನು ಬಳಸಿಕೊಳ್ಳಲಾಗುತ್ತಿದ್ದು ಇದರಿಂದ ಇಲ್ಲಿಗೆ ಬರುವ ಪ್ರವಾಸಿಗರು ಹಾಗೂ ಭಕ್ತರಿಗೆ ಅನುಕೂಲವಾಗಲಿದೆ ಎಂದರು.

ಬೆಟ್ಟವನ್ನು ಕೇಂದ್ರ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಅನುದಾನವನ್ನು ತಂದು ಇದರ ಸಮಗ್ರ ಅಭಿವೃದ್ಧಿಗೆ ಕ್ರಮ ವಹಿಸುತ್ತೇನೆ. ಇಲ್ಲಿರುವ ಸೋಲಿಗರು ಇಲ್ಲಿನ ಮೂಲ ನಿವಾಸಿಗಳಾಗಿದ್ದಾರೆ. ಇವರನ್ನು ಒಕ್ಕಲೆಬ್ಬಿಸುವ ಕೆಲಸವಾಗಬಾರದು, ಅರಣ್ಯ ಇಲಾಖೆಯವರು ಇವರಿಗೆ ತೊಂದರೆಯನ್ನು ನೀಡಬಾರದು ಎಂದು ಸಲಹೆ ನೀಡಿದರು. ಜಿಲ್ಲೆಯಲ್ಲಿ ಸಿದ್ದು ನಿವಾಸ್ ಯೋಜನೆಯಡಿಯಲ್ಲಿ ಗಿರಿಜನರಿಗೆ 3 ಸಾವಿರ ಮನೆಗಳು ಮಂಜೂರಾಗಿದ್ದು ಆದಷ್ಟು ಬೇಗ ಇದರ ಕಾಮಗಾರಿ ಆರಂಭವಾಗುತ್ತದೆ ಎಂದು ಮಾಹಿತಿ ನೀಡಿದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ನಮ್ಮ ತಂದೆ ಬಿ.ರಾಚಯ್ಯರವರ ಕಾಲದಲ್ಲಿ ಸೋಲಿಗರೂ ಸೇರಿದಂತೆ ಕಾಡಂಚಿನಲ್ಲಿ ಎಲ್ಲಾ ವರ್ಗದ ಜನರಿಗೂ ಕುದಾಯ ಭೂಮಿಯನ್ನು ನೀಡಲಾಗಿತ್ತು. ಆದರೆ ನಂತರ ಅರಣ್ಯ ಇಲಾಖೆಯವರು ಇವರ ಜಮೀನನ್ನು ವಶಪಡಿಸಿಕೊಂಡಿದ್ದರು. ಇವರಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಯಾರೊಬ್ಬ ಸಂಸದರಾಗಲಿ, ಶಾಸಕರಾಗಲಿ ಇತರೆ ಜನಪ್ರತಿನಿಧಿಗಳು ಇದುವರೆವಿಗೂ ಪ್ರಯತ್ನ ಪಡಲಿಲ್ಲ. ನಾನು ಇವರಿಗೆ ನ್ಯಾಯ ದೊರಕಿಸಿಕೊಡಲು ಕಟಿಬದ್ಧನಾಗಿದ್ದೇನೆ ಇವರಿಗೆ ನೀಡಿರುವ ಭೂದಾಖಲೆಗಳು ಕೆಲವು ಕಾರಣಗಳಿಂದ ಕಳೆದು ಹೋಗಿದ್ದು ಇವರಿಗೆ ನ್ಯಾಯ ದೊರಕಿಸುವಲ್ಲಿ ನಾನು ಧ್ವನಿ ಎತ್ತಿದ್ದು ಎಲ್ಲರಿಗೂ ಆ ಕಾಲದಲ್ಲಿ ವಿತರಣೆಯಾಗಿದ್ದ ತಲಾ 4 ಎಕರೆ ಭೂಮಿಯನ್ನು ನೀಡಬೇಕು ಇಲ್ಲವೇ ಇವರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಒತ್ತಾಯಿಸುತ್ತೇನೆ ಎಂದರು.

ಗ್ಯಾರಂಟಿ ಯೋಜನೆಯ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು ಜಿಪಂ ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್, ಗ್ರಾಪಂ ಅಧ್ಯಕ್ಷ ಸಿ.ಡಿ.ಮಹದೇವ, ಉಪಾಧ್ಯಕ್ಷೆ ಕಮಲಮ್ಮ, ದೇಗುಲ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಜೆ.ಶ್ರೀನಿವಾಸ್, ಸದಸ್ಯರಾದ ಗುಂಬಳ್ಳಿ ರಾಜಣ್ಣ, ಕೇತಮ್ಮ, ಮುಖಂಡರಾದ ಮಾಂಬಳ್ಳಿ ನಂಜುಂಡಸ್ವಾಮಿ, ವೆಂಕಟೇಶ್, ಕಂದಹಳ್ಳಿ ನಂಜುಂಡಸ್ವಾಮಿ, ಬ್ಲಾಕ್ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಕಾಶ್, ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಎಇಇ ವಿಜಯಲಕ್ಷ್ಮಿ ಸೇರಿದಂತೆ ಅನೇಕರು ಇದ್ದರು.

ಉಪ್ಪಾರ ಸಮುದಾಯಕ್ಕೆ ಶಿಕ್ಷಣವೇ ಆಸ್ತಿ



ಉಪ್ಪಾರ ಸಮಾಜದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಚಾಮರಾಜನಗರ: ಉಪ್ಪಾರ ಸಮುದಾಯಕ್ಕೆ ಶಿಕ್ಷಣವೇ ಆಸ್ತಿಯಾಗಿರುವ ಹಿನ್ನೆಲೆಯಲ್ಲಿ ಸಮುದಾಯ ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಎಂದು ಎಂಎಸ್‌ಐಎಲ್ ಅಧ್ಯಕ್ಷರು, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಸಲಹೆ ನೀಡಿದರು.

ನಗರದ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಜಿಲ್ಲಾ ಉಪ್ಪಾರ ಸಂಘ, ಜಿಲ್ಲಾ ವ್ಯಾಪ್ತಿಯ ಎಲ್ಲಾ ಗಡಿಮನೆ, ಕಟ್ಟೆಮನೆ ಹಾಗೂ ಎಲ್ಲಾ ಗ್ರಾಮಗಳ ಯಜಮಾನರು, ಗ್ರಾಮಸ್ಥರು, ಜಿಲ್ಲೆಯ ತಾಲೂಕು ಉಪ್ಪಾರ ಸಂಘಗಳು, ಉಪ್ಪಾರ ನೌಕರರ ಸಂಘಗಳು, ಉಪ್ಪಾರ ಸಂಘ, ಸಂಸ್ಥೆಗಳಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಮುದಾಯದಲ್ಲಿ ಶೇ. 80ರಷ್ಟು ಜನರು ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಆಸ್ತಿವಂತರು ಕಡಿಮೆ ಇದ್ದಾರೆ. ಉಪ್ಪಾರ ಸಮುದಾಯಕ್ಕೆ ಶಿಕ್ಷಣವೇ ಆಸ್ತಿಯಾಗಿದೆ. ನಾವು ಓದುವ ಸಂದರ್ಭದಲ್ಲಿ ಯಾವುದೇ ಸರ್ಕಾರಿ ಸೌಲಭ್ಯಗಳು ಇರಲಿಲ್ಲ. ತುಂಬಾ ಕಷ್ಟದಲ್ಲಿ ವಿದ್ಯಾಭ್ಯಾಸ ಮಾಡಿದ್ದೇವೆ ಎಂದರು.

ಸಮಾಜದವರು ಮೌಢ್ಯಗಳಿಂದ ಹೊರಬರಬೇಕು. ಹಬ್ಬಗಳ ಆಚರಣೆ ಕಡಿಮೆ ಮಾಡಬೇಕು. ಜಿಲ್ಲಾ ಕೇಂದ್ರದಲ್ಲಿ ಸುಸಜ್ಜಿತ ಉಪ್ಪಾರ ಭವನ ಆಗಲಿದ್ದು, ಮುಂದಿನ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಅಲ್ಲೇ ಮಾಡಲು ಚಿಂತಿಸಲಾಗಿದೆ ಎಂದರು.

ನಂತರ ಜಿಪಂ ಮಾಜಿ ಉಪಾಧ್ಯಕ್ಷ ಯೋಗೇಶ್ ಮಾತನಾಡಿ, ಸ್ವಾತಂತ್ರ್ಯ ಬಂದ ಮೇಲೆ ಅಂಬೇಡ್ಕರ್‌ರವರು ಸಂವಿಧಾನ ಬರೆದು ನಮಗೆಲ್ಲ ಶಿಕ್ಷಣ ಕಲಿಯುವ ಅವಕಾಶ ದೊರಕಿಸಿದರು. ಕೇಂದ್ರ ಸರ್ಕಾರ ಮಹಿಳೆಯರಿಗೆ ಶೇ. 33ರಷ್ಟು ಮೀಸಲಾತಿ ನೀಡಿದೆ ಎಂದರು.

ಇದೇ ವೇಳೆ 250ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು. ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಸದಸ್ಯ ಮಧುವಿನಹಳ್ಳಿ ಶಿವಕುಮಾರ್, ಮೈಸೂರು ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ಹನುಮಶೆಟ್ಟಿ, ಚಿಕ್ಕರಾಜಶೆಟ್ಟಿ, ಸೋಮಣ್ಣ, ಪ್ರಿಯಶಂಕರ್, ತೇಜಸ್ವಿನಿ, ಮಮತಾ, ಬಸವಣ್ಣ, ಪುಟ್ಟಸ್ವಾಮಿ, ಮಹದೇವಶೆಟ್ಟಿ, ಗೋವಿಂದಶೆಟ್ಟಿ, ಪ್ರಕಾಶ್, ಜಯಸ್ವಾಮಿ, ರುದ್ರಶೆಟ್ಟಿ, ನಾಗಶೆಟ್ಟಿ ಇತರರು ಹಾಜರಿದ್ದರು.

ಮೈಸೂರು ಮಿತ್ರ ಸೋಮವಾರ 3 ಮಾರ್ಚ್ 2025

ಗೋಪಾಲಪುರದ ಮಾದಿಗ ಸಮಾಜಕ್ಕೆ ಮೂಲ ಸೌಕರ್ಯ ಕಲ್ಪಿಸಿ

ಉಸ್ತುವಾರಿ ಸಚಿವರಿಗೆ ಪುರಸಭಾ ಸದಸ್ಯ ಅರ್ಜುನ್ ರಮೇಶ್ ಮನವಿ



ಗೋಪಾಲಪುರ ನಿವಾಸಿಗಳಿಗೆ ಪುರಸಭೆ ಸದಸ್ಯ ಅರ್ಜುನ್ ರಮೇಶ್ ಬೆಂಬಲ ಸೂಚಿಸಿದರು.

ತಿ.ನರಸೀಪುರ, ಮಾ.2– ಪುರಸಭೆ ವ್ಯಾಪ್ತಿಯ ಸರ್ವೆ ನಂ.7ರಲ್ಲಿ ಗುಡಿಸಲು ನಿರ್ಮಿಸಿಕೊಂಡು ವಾಸಿಸುತ್ತಿರುವ ಗೋಪಾಲ ಪುರ ಗ್ರಾಮದ ಮಾದಿಗ ಸಮಾಜದವರಿಗೆ ಮೂಲ ಸೌಕರ್ಯ ಕಲ್ಪಿಸಿ ಕೊಡಬೇಕಾದ ಉಸ್ತುವಾರಿ ಸಚಿವರು ಯಾವುದೇ ಕ್ರಮಕ್ಕೆ ಮುಂದಾಗದಿರುವುದು ಸರಿಯಲ್ಲ ಎಂದು ಪುರಸಭೆ ಸದಸ್ಯ ಹಾಗೂ ನಟ ಅರ್ಜುನ್ ರಮೇಶ್ ಆರೋಪಿಸಿದರು.

ಗೋಪಾಲಪುರ ಗ್ರಾಮದ ಸರ್ವೆ ನಂ.7 ರಲ್ಲಿ ಮಾದಿಗ ಸಮುದಾಯದವರು ಗುಡಿಸಲು ನಿರ್ಮಾಣ ಮಾಡಿಕೊಂಡು ವಾಸಿಸುತ್ತಿರುವ ಜಾಗಕ್ಕೆ ಭೇಟಿ ನೀಡಿ ನಿವಾಸಿಗಳಿಗೆ ಬೆಂಬಲ ಸೂಚಿಸಿ ಅವರು ಮಾತನಾಡಿದರು.

ನಾನಿಲ್ಲಿಗೆ ಸಿನಿಮಾ ನಟ ಅಥವಾ ಪುರಸಭೆ ಸದಸ್ಯನಾಗಿ ಬಂದಿಲ್ಲ. ಗ್ರಾಮದ ಸದಸ್ಯನಾಗಿ, ನನ್ನೂರಿನ ವಿಚಾರಕ್ಕಾಗಿ ಬಂದಿದ್ದೇನೆ. ಸರ್ವೆ ನಂ.7 ನಿವೇಶನದ ವಿಚಾರ ನಿನ್ನೆ ಮೊನ್ನೆಯದಲ್ಲ. ಹಲವು ವರ್ಷಗಳಿಂದ ಸಾಕಷ್ಟು ಚರ್ಚೆಗಳಾಗಿವೆ. ಅಷ್ಟೇ ರಾಜಕೀಯ ಬೆಳವಣಿಗೆ ಸಹ ನಡೆದಿದೆ. ಇಂತಹ ಬೆಳವಣಿಗೆ ಸಿಎಂ ಹಾಗೂ ಉಸ್ತುವಾರಿ ಸಚಿವ ಕ್ಷೇತ್ರದಲ್ಲಿ ನಡೆದಿರುವುದು ಮಾದಿಗ ಸಮುದಾಯಕ್ಕೆ ಮಾತ್ರವಲ್ಲ, ಇಡೀ ತಿ.ನರಸೀಪುರಕ್ಕೆ ಆದ ಕಪ್ಪು ಚುಕ್ಕೆ ಎಂದೇ ಹೇಳಬಹುದಾಗಿದೆ. ಈ ಜಾಗದಲ್ಲಿ ಮಾದಿಗ ಸಮುದಾಯದವರು ಹಲವು ವರ್ಷಗಳಿಂದ ವಾಸಿಸುತ್ತಿದ್ದು, ಮಾದಿಗ ಸಮಾಜದ ಹದ್ದುಬಸ್ತಿನಲ್ಲಿದೆ. ಇದು ನನ್ನ ಜನಾಂಗಕ್ಕೆ ಸೇರಬೇಕಾದ ಜಾಗ. ಹೀಗಾಗಿ ಇಲ್ಲಿಗೆ ಮೂಲ ಸೌಕರ್ಯ ಕಲ್ಪಿಸುವ ಜೊತೆಗೆ ನಿವೇಶನಕ್ಕೆ ನಂಬರ್ ಹಾಕಿ ಮಾದಿಗ ಸಮಾಜದ ಅರ್ಹರಿಗೆ ಹಂಚಿಕೆ ಮಾಡಿ ಎಂದು ಒತ್ತಾಯಿಸುತ್ತಲೇ ಬಂದಿದ್ದೇವೆ. ಆದರೆ ಇದ್ಯಾವ ಕೆಲಸವೂ ಇಲ್ಲಿ ಆಗಿಲ್ಲ. ಬೇಕಾದಾಗ ಕೆಲವರು ನಿವೇಶನ ಕ್ಲೀನ್ ಮಾಡಿ ಹೋಗುತ್ತಿದ್ದರು. ಹಾಗಾಗಿ ಬೇರೆ ಬೇರೆ ವಿಚಾರಗಳು ಕಿವಿಗೆ ಬೀಳಲಾಗಿ ಇಂದು ಗೋಪಾಲಪುರ ಗ್ರಾಮದ ಜನತೆ ಎಚ್ಚೆತ್ತುಕೊಂಡಿದೆ ಎಂದರು.

ಉಸ್ತುವಾರಿ ಸಚಿವರಿಗೆ ನಾಚಿಕೆಯಾಗಬೇಕು: ನಾವ್ಯಾರು ಉಸ್ತುವಾರಿ ಸಚಿವರನ್ನಾಗಲೀ ಅಥವಾ ಶಾಸಕರನ್ನಾಗಲೀ ಭಿಕ್ಷೆ ಕೇಳುತ್ತಿಲ್ಲ. ಜಾಗ ನಮ್ಮದೇ ಇದೆ. ಇಲ್ಲಿಗೆ ಮೂಲ ಸೌಕರ್ಯ ಬೇಕೆಂದು ಕೇಳುತ್ತಿದ್ದೇವೆ. ಆದರೆ ಮಾದಿಗ ಸಮಾಜದವರು ಕಳೆದ 11 ದಿನಗಳಿಂದ ಹಗಲು ರಾತ್ರಿಯೆನ್ನದೇ ಇಲ್ಲೇ ನ್ಯಾಯಕ್ಕಾಗಿ ಕಾದು ಕುಳಿತಿದ್ದಾರೆ. ಉಸ್ತುವಾರಿ ಸಚಿವರಾಗಲೀ, ಶಾಸಕರಾಗಲೀ ಈ ಕಡೆ ತಲೆ ಹಾಕದೇ ಮಾದಿಗ ಸಮಾಜ ಕಡೆಗಣನೆ ಮಾಡುತ್ತಿದ್ದೀರಾ. ನಿಮ್ಮ ನಡೆಯೇ ಮಾದಿಗ ಸಮಾಜದವರನ್ನು ನೀವು ಎಲ್ಲಿಟ್ಟಿದ್ದೀರಾ ಎಂಬುದನ್ನು ತೋರಿಸುತ್ತದೆ. ಇದು ಅಮಾನವೀಯ ವಿಚಾರ. ಬಹುಶಃ ನೀವು ಕ್ಷೇತ್ರಕ್ಕೆ ಶಾಸಕರಾಗಿದ್ದೇವೆ ಎಂಬುದನ್ನೇ ಮರೆತಿರುವಂತೆ ಕಾಣುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಕ್ಕಿಗಾಗಿ ಪ್ರಾಣ ತ್ಯಾಗಕ್ಕೂ ಸಿದ್ಧ: ಹಳೇ ಕಾಲದ ಮಾದಿಗ ಜನಾಂಗ ಈಗಿಲ್ಲ. ಗೋಪಾಲಪುರ ಗ್ರಾಮಕ್ಕೆ ತನ್ನದೇ ಆದ ಇತಿಹಾಸವಿದೆ. ಗಾರೆ ಕೆಲಸದವರ ಮಕ್ಕಳಾಗಿ ಹುಟ್ಟಿ ಶಾಸಕರಾಗಿದ್ದಾರೆ. ನ್ಯಾಯಾಧೀಶರು, ಇಂಜಿನಿಯರ್ ಆಗಿರುವವರು ಇದ್ದಾರೆ. ಇದೆಲ್ಲದಕ್ಕೂ ವಿದ್ಯಾಭ್ಯಾಸ ಮುಖ್ಯ. ಇಲ್ಲಿ ಹಕ್ಕಿಗಾಗಿ ಮಾದಿಗ ಸಮುದಾಯ ನಡೆಸುತ್ತಿರುವ ಹೋರಾಟಕ್ಕೆ ಕೊನೆ ಉಸಿರಿನ ತನಕ ಬೆಂಬಲ ವ್ಯಕ್ತಪಡಿಸುತ್ತೇನೆ. ಪ್ರಾಣ ತ್ಯಾಗ ಮಾಡುವ ಸಂದರ್ಭ ಬಂದರೂ ಎದೆಗುಂದುವುದಿಲ್ಲ. ಈ ಜಾಗಕ್ಕೆ ಹಾಕಿರುವ ಬೇಲಿಯನ್ನು ಯಾರೂ ಅಲುಗಾಡಿಸಲು ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ನಿವೇಶನ ಕಬಳಿಸಲು ಬಿಡೆವು: ಉಸ್ತುವಾರಿ ಸಚಿವರು ತಮ್ಮ ಚೇಲಾಗಳನ್ನು ಅನಧಿಕೃತವಾಗಿ ಇಲ್ಲಿ ಕೂರಿಸಲು ಷಡ್ಯಂತ್ರ ಮಾಡುತ್ತಿದ್ದಾರೆಂಬ ಮಾಹಿತಿ ನಮಗಿದೆ. ಸಾಕಷ್ಟು ಬಾರಿ ಜಾಗದ ವಿಚಾರವಾಗಿ ಮುಖ್ಯಾಧಿಕಾರಿಗಳಿಗೆ ಫೋನ್ ಮಾಡಿರುವ ವಿಷಯ ನಮಗೂ ಗೊತ್ತಿದೆ. ಇದು ಮಾದಿಗ ಸಮುದಾಯದವರ ಜಾಗ ಇಲ್ಲಿ ಅವರು ಮಾತ್ರವೇ ಇರುತ್ತಾರೆ. ಬೇರೆ ಯಾರಿಗೂ ಇಲ್ಲಿ ನಿವೇಶನ ಸಿಗದು ಎಂದರು.

ಪರಿಣಾಮ ಮುಂದಿನ ದಿನಗಳಲ್ಲಿ ಸ್ಫೋಟ: ಇದು ಹೋರಾಟವಲ್ಲ ನಮ್ಮ ಹಕ್ಕು. ನಮ್ಮ ಜನಾಂಗ ಎಚ್ಚೆತ್ತುಕೊಂಡಿದೆ. ಮೂಲ ಸೌಕರ್ಯ ಸಿಗದಿದ್ದಲ್ಲಿ ಇದರ ಪರಿಣಾಮವನ್ನು ಮುಂದಿನ ದಿನಗಳಲ್ಲಿ ಅನುಭವಿಸಬೇಕಾಗುತ್ತದೆ. ಬಿಳಿ ಬಟ್ಟೆ ಹಾಕಿಕೊಂಡಿರುವ ಮಾದಿಗ ಸಮಾಜದ ಮುಖಂಡರು ಸಚಿವರಿಗೆ ತಮ್ಮ ಸಮಾಜಕ್ಕಾಗುತ್ತಿರುವ ಅನ್ಯಾಯ ಹೇಳಬೇಕು. ಸಮಸ್ಯೆ ಬಗೆಹರಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಸಮಾಜದ ಮತ ಕೇಳಲು ಬಾರದಂತೆ ಅವರ ಮೇಲೆ ಒತ್ತಡ ಹೇರಬೇಕಿದೆ. ಅಧಿಕಾರಿಗಳ ಕೃಪಾಕಟಾಕ್ಷದಿಂದ ಪಟ್ಟಣದಲ್ಲಿ ನಾಯಿ ಕೊಡೆಗಳಂತೆ ಲೇಔಟ್‌ಗಳು ತಲೆ ಎತ್ತುತ್ತಿವೆ. ಮಾದಿಗ ಸಮಾಜದ ಜಾಗವನ್ನು ಅದೇ ರೀತಿ ಎಂದು ಭಾವಿಸಬೇಡಿ. ಇದು ಮಾದಿಗ ಸಮಾಜದ ಆಸ್ತಿ, ಮಾದಿಗ ಸಮಾಜದ ಹಕ್ಕು ಎಂದು ಪರೋಕ್ಷವಾಗಿ ಪುರಸಭೆ ಅಧಿಕಾರಿಗಳಿಗೂ ಎಚ್ಚರಿಕೆ ನೀಡಿದರು.

ಮಹೇಂದ್ರ ಬೊಲೇರೋ ಪಿಕಪ್ ವಾಹನ ಕೊಡುಗೆ



ಲಮಾ ಕ್ಯಾಂಪಿನ ಸೆರಾ ಲಚ್ಚಿ ದೇವಸ್ಥಾನಕ್ಕೆ ಮಹೇಂದ್ರ ಬೊಲೇರೋ ಪಿಕಪ್ ವಾಹನ ಕೊಡುಗೆ ನೀಡಲಾಯಿತು.

ಬೈಲಕುಪ್ಪೆ, ಮಾ.2– ಯೂನಿಯನ್ ಬ್ಯಾಂಕ್ ಸೋಶಿಯಲ್ ಫೌಂಡೇಶನ್ ವತಿಯಿಂದ ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆಯ ಲಮಾ ಕ್ಯಾಂಪಿನ ಸೆರಾ ಲಚ್ಚಿ ದೇವಸ್ಥಾನಕ್ಕೆ ಮಹೇಂದ್ರ ಬೊಲೇರೋ ಪಿಕಪ್ ವಾಹನ ಕೊಡುಗೆ ನೀಡಲಾಯಿತು.

ಟಿಬೆಟಿಯನ್ನರ ಲೋಸಾರ್ ಹಬ್ಬದ ಪ್ರಯುಕ್ತ, ಟಿಬೆಟಿಯನ್ನರ ಹೊಸ ವರ್ಷದ ಆಚರಣೆ ಸಂದರ್ಭ ಆಗಮಿಸಿದ 40ಕ್ಕೂ ಹೆಚ್ಚು ಯೂನಿಯನ್ ಬ್ಯಾಂಕ್ ಸಂಸ್ಥೆ ಉನ್ನತ ಅಧಿಕಾರಿಗಳು ಮತ್ತು ಬೈಲಕುಪ್ಪೆ ಯೂನಿಯನ್ ಬ್ಯಾಂಕ್ ಶಾಖೆ ಸಿಬ್ಬಂದಿ ಟಿಬೆಟಿಯನ್ನರಿಗೆ ಹೊಸ ವರ್ಷದ ಹಾಗೂ ಲೋಸರ್ ಹಬ್ಬದ ಶುಭಾಶಯ ತಿಳಿಸಿ ಅಲ್ಲಿನ ಅಧಿಕಾರಿಗಳಿಗೆ ವಾಹನವನ್ನು ಯೂನಿಯನ್ ಬ್ಯಾಂಕ್ ಸಂಸ್ಥೆ ಚೇರ್ಮನ್ ಶ್ರೀನಿವಾಸನ್ ವರದರಾಜನ್ ಕೀ ಹಸ್ತಾಂತರಿಸಿದರು.

ಬೆಳ್ಳಂಬೆಳಗ್ಗೆ ಆಗಮಿಸಿದ ಯೂನಿಯನ್ ಬ್ಯಾಂಕ್ ಸಿಬ್ಬಂದಿಗಳಿಗೆ ಇಲ್ಲಿನ ಬೌದ್ಧ ಬಿಕ್ಷುಗಳು ಟಿಬೆಟಿಯನ್ ಮಾದರಿ ಸಾಂಪ್ರದಾಯಿಕ ಸ್ವಾಗತ ಕೋರಿದರು. ಬಳಿಕ ದೇವಸ್ಥಾನದಲ್ಲಿ ಕೆಲಸಮಯ ಟಿಬೆಟಿಯನ್ ಮಂತ್ರ ಪಠಣಗಳನ್ನು ಜಪಿಸಿದರು.

ಈ ವೇಳೆ ಜೋನಲ್ ಹೆಡ್ ನವನೀತ್ ಕುಮಾರ್, ರಿಜನಲ್ ಹೆಡ್ ಸುನೀಲ್ ವಿ.ಪಾಟೀಲ್, ಬ್ರಾಂಚ್ ಮ್ಯಾನೇಜರ್ ಚೈತನ್ಯ ಭರತ್, ಬ್ಯಾಂಕ್ ಸಿಬ್ಬಂದಿಗಳು, ಸೆರಾ ಲಾಚಿ ದೇವಸ್ಥಾನದ ಹಿರಿಯ ಬೌದ್ಧ ಬಿಕ್ಷುಗಳು ಇದ್ದರು.

ಮೊಬೈಲ್ ಗೀಳಿಗೆ ಬೀಳದೆ ಮೌಲ್ಯಾಧಾರಿತ ಶಿಕ್ಷಣ ಪಡೆಯಿರಿ

ವಿದ್ಯಾರ್ಥಿಗಳಿಗೆ ರಾಜ್ಯ ಸಂಪನ್ಮೂಲ ವ್ಯಕ್ತಿ ಉಮೇಶ್ ಸಲಹೆ



ಪಡುಕೋಟೆ ಗ್ರಾಪಂನಿಂದ ಮಕ್ಕಳ ಗ್ರಾಮ ಸಭೆ ನಡೆಯಿತು.

ಹೆಚ್.ಡಿ.ಕೋಟೆ, ಮಾ.2– ವಿದ್ಯಾರ್ಥಿಗಳು ಮೊಬೈಲ್ ಗೀಳಿಗೆ ಬೀಳದೆ ಮೌಲ್ಯಾಧಾರಿತ, ಗುಣಮಟ್ಟದ ಶಿಕ್ಷಣ ಪಡೆಯಬೇಕು ಎಂದು ಜೀವಿಕ ರಾಜ್ಯ ಸಂಪನ್ಮೂಲ ವ್ಯಕ್ತಿ ಉಮೇಶ್ ಬಿ.ನೂರಲಕುಪ್ಪೆ ತಿಳಿಸಿದರು.

ತಾಲೂಕಿನ ಪಡುಕೋಟೆ ಗ್ರಾಪಂ ಆವರಣದಲ್ಲಿ ನಡೆದ ಮಕ್ಕಳ ಗ್ರಾಮ ಸಭೆಯಲ್ಲಿ ಮಾತನಾಡಿದ ಅವರು, ಮಕ್ಕಳು ಮೌಲ್ಯಾಧಾರಿತ ಮತ್ತು ಗುಣಮಟ್ಟದ ಶಿಕ್ಷಣ ಪಡೆಯಬೇಕಾದರೆ ಮೊಬೈಲ್ ಗೀಳಿಗೆ ಬೀಳಬಾರದು. ಬದಲಿಗೆ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ಕಡೆ ಗಮನಹರಿಸಬೇಕು. ಪ್ರಸ್ತುತ ತಂತ್ರಜ್ಞಾನ ಇಡೀ ಜಗತ್ತನ್ನೇ ಆವರಿಸಿಕೊಂಡಿದೆ. ಇದು ಪೂರಕವೂ ಹೌದು. ಮಾರಕವೂ ಹೌದು. ಆದ್ದರಿಂದ ನಾವು ಸಕಾರಾತ್ಮಕ ಚಿಂತನೆ ಮೂಲಕ ಜಗತ್ತಿನೊಂದಿಗೆ ವಿಸ್ತರಿಸಿಕೊಳ್ಳಬೇಕಾಗಿದೆ. ಇದರಿಂದ ಮಕ್ಕಳ ಮೇಲೆ ಅಥವಾ ಮಕ್ಕಳ ಹಕ್ಕುಗಳ ಮೇಲಾಗುವ ದುಷ್ಪರಿಣಾಮ ತಡೆಯಬೇಕಾಗಿದೆ ಎಂದರು.

ಗ್ರಾಪಂ ಕಾರ್ಯದರ್ಶಿ ವೆಂಕಟೇಶ್ ಮಾತನಾಡಿ, ಸರ್ಕಾರದ ಆದೇಶದಂತೆ ನಾವು ಇಂದು ನಮ್ಮ ವ್ಯಾಪ್ತಿಯ 7 ಶಾಲೆಗಳ ಮಕ್ಕಳು, ಪೋಷಕರು ಮತ್ತು ಮುಖ್ಯಶಿಕ್ಷಕರನ್ನು ಒಳಗೊಂಡ ಮಕ್ಕಳ ಗ್ರಾಮ ಸಭೆ ನಡೆಸುತ್ತಿದ್ದು, ಕಳೆದ ಸಭೆಯಲ್ಲಿ ಮಕ್ಕಳಿಂದ ಬಂದ ಕೆಲವು ಸಮಸ್ಯೆಗಳಾದ ಶೌಚಾಲಯ, ಮೈದಾನ, ಕುಡಿಯುವ ನೀರು, ರಂಗಮಂದಿರದ ಕೆಲಸ ಪೂರ್ಣಗೊಳಿಸಿದ್ದು ಉಳಿದಂತೆ ಈ ಸಾಲಿನಲ್ಲಿ ಮುಂದಿನ ಕಾಮಗಾರಿಗಳನ್ನು ಪೂರ್ಣಗೊಳಿಸುತ್ತೇವೆ ಎಂದರು.

ಸಭೆಯಲ್ಲಿ ಗ್ರಾಪಂ ಅಧ್ಯಕ್ಷೆ ನಜ್ ಮುನ್ನುಸಾ, ಉಪಾಧ್ಯಕ್ಷೆ ಸುಮಿತ್ರಾ, ಸದಸ್ಯರಾದ ಲೈಲಾ, ಪಿಡಿಓ ಅಂಕಪ್ಪ, ಮುಖ್ಯಶಿಕ್ಷಕ ಆನಂದ್, ಶ್ರೀಪಾದ, ಸಿಸ್ಟರ್ ಅಪೋಲಿಯನ್, ಸಿಸ್ಟರ್ ಜೆಸ್ಸಿ, ಗೀತಾ, ನಿಂಗೇಗೌಡ, ಸುಬ್ರಹ್ಮಣ್ಯ, ಉಷಾ, ನಾಗಸುಂದ್ರ, ಸ್ವಾಮಿ, ಧನಂಜಯ, ಪೀಪಲ್ ಟ್ರೀ ಸಂಸ್ಥೆ ರುದ್ರಪ್ಪ, ಜವರೇಗೌಡ, ಚೆನ್ನಬಸಪ್ಪ, ಮಣಿಕಂಠ, ಮಂತ್ರಿ ಮಂಡಲದ ಸಹೀದ್, ನಯನ, ಸಿಬ್ಬಂದಿಗಳಾದ ಮಂಜುನಾಥ್, ದಾಸನಾಂಯ್ಕ, ಸದಾನಂದ, ವಸಂತ ಕುಮಾರ್, ಮಾನಸ, ವಿಜಯ್ ಮತ್ತು ಮಕ್ಕಳು ಭಾಗವಹಿಸಿದ್ದರು.

ಭಗವಾನ್ ಶ್ರೀಪಾರ್ಶ್ವನಾಥ ತೀರ್ಥಂಕರ ಪೂಜಾ ಮಹೋತ್ಸವ



ಕಾರ್ಯಕ್ರಮದಲ್ಲಿ ಸ್ವಾಮೀಜಿಗಳನ್ನು ಸನ್ಮಾನಿಸಲಾಯಿತು.

ಸರಗೂರು, ಮಾ.2– ತಾಲೂಕಿನ ಬಿ.ಮಟಕೆರೆಯಲ್ಲಿ 1008 ಭಗವಾನ್ ಶ್ರೀಪಾರ್ಶನಾಥ ತೀರ್ಥಂಕರ ಜೈನ ಬಸದಿಯ 18ನೇ ವರ್ಷದ ಪೂಜಾ ಮಹೋತ್ಸವ ಹಾಗೂ 108 ಕಳಸ ಮಹಾಭಿಷೇಕ ಪೂಜೆ ಕಾರ್ಯಕ್ರಮ ನಡೆಯಿತು.

ಕನಕಗಿರಿ ಜೈನ ಮಠದ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ ಮಾತನಾಡಿ, ಧರ್ಮಾತ್ಮರಿಲ್ಲದೆ ಧರ್ಮ ಉಳಿಯುವುದಿಲ್ಲ. ಧರ್ಮಾತ್ಮರು ಧರ್ಮ ಎರಡು ಸಮಾನವಾಗಿರುವುದರಿಂದಲೇ ಇಂದು ಗ್ರಾಮದಲ್ಲಿ ಕಾರ್ಯಕ್ರಮವನ್ನು ನಗರ ಪ್ರದೇಶದಲ್ಲಿ ಮಾಡುವ ಹಾಗೆ ಮಾಡಿದ್ದೀರಿ ಎಂದು ತಿಳಿಸಿದರು.

ಕಾಡಂಚಿನ ಪ್ರದೇಶದಲ್ಲಿ ಧರ್ಮ ಸಂದೇಶ ಸಾರುವ ಸಾಧನೆ ಶ್ಲಾಘನೀಯ. ಆರ್ಥಿಕ, ರಾಜಕೀಯವಾಗಿ ಸಮಾಜ ಬೆಳೆಯಬೇಕು. ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಿ ವಿದ್ಯಾವಂತರನ್ನಾಗಿ ಮಾಡಬೇಕು ಎಂದು ತಿಳಿಸಿದ ಅವರು ಜೈನ ಧರ್ಮದ ಮತ ಮಾನ್ಯಗಳ ಉಳಿಸಿ ಬೆಳಸಲು ಯುವಕರು ಮುಂದಾಗಬೇಕು ಎಂದು ಕಿವಿಮಾತು ಹೇಳಿದರು.

ಶ್ರವಣಬೆಳಗೊಳ ಜೈನ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರು ಮಾತನಾಡಿ, ಬಿ.ಮಟಕೆರೆ ಗ್ರಾಮದ ಜನರಲ್ಲಿ ಸಂಸ್ಕಾರಯುತ ಧರ್ಮಪಾಲನೆ, ದೇವರ ಮೇಲೆ ಗುರುಗಳ ಮೇಲೆ ನಂಬಿ ಇದೆ ಎಂದರೆ ಇದಕ್ಕೆ ಮೂಲ ಕಾರಣ ಕನಕಗಿರಿ ಜೈನ ಮಠದ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು. ಹಲವು ವರ್ಷಗಳಿಂದ ಸಣ್ಣಮಟ್ಟ ಗ್ರಾಮವನ್ನು ಬಿಡದೆ ಭೇಟಿ ನೀಡಿ ಯಾರಿಗೂ ನೋವಾ ಗದಂತೆ ಜನರ ಸಮಸ್ಯೆಗೆ ನೆರವಾಗಿದ್ದಾರೆ. ಅದರಲ್ಲೂ ಬಡ ಜನರ ಬಗ್ಗೆ ಅತೀವ ಕಾಳಜಿ ಹೊಂದಿದ್ದಾರೆ. ಸಾಮಾನ್ಯರಲ್ಲಿ ಸಾಮಾನ್ಯರಾಗಿ ಕೇವಲ ಜೈನ ಸಮಾಜದವ ರಿಷ್ಟೆ ಅಲ್ಲದೇ ಎಲ್ಲರಿಗೂ ಮಾರ್ಗದರ್ಶನ ಮಾಡಿದ್ದಾರೆ. ಈ ಭಾಗದಲ್ಲಿ ರೈತಾಪಿ ವರ್ಗದ ಬಡ ಕುಟುಂಬದ ವಿದ್ಯಾರ್ಥಿಗಳಿಗೆ ಶ್ರವಣಬೆಳಗೊಳದ ಗುರು ಕುಲದಲ್ಲಿ ಶಿಕ್ಷಣ ನೀಡಲು ತಿಳಿಸಿದ್ದೀರಿ. ಶ್ರೀಗಳ ಇಚ್ಛೆಯಂತೆ ಜೈನ ಧರ್ಮದ ಬಡ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲಾಗುವುದು ಎಂದರು.

ಜಿಪಂ ಮಾಜಿ ಸದಸ್ಯ ಪಿ.ರವಿ ಮಾತನಾಡಿ, ಅಖಿಲ ನಾಮಧಾರಿಗೌಡ ಸಮಾಜದ ತಾಲೂಕು ಅಧ್ಯಕ್ಷ ಎಂ.ಎನ್. ಭೀಮರಾಜ್ ಮಾತನಾಡಿದರು. ಇದೇ ವೇಳೆ ಶಾಸಕ ಅನಿಲ್ ಅವರ ತಾಯಿ ನಾಗಮ್ಮ ಹಾಗೂ ಕಾರ್ಯಕ್ರಮಕ್ಕೆ ಸಹಕಾರ ನೀಡಿದ ಜೈನ ಸಮಾಜದ ಹಿರಿಯರು ಹಾಗೂ ಮುಖಂಡರನ್ನು ಸನ್ಮಾನಿಸಲಾಯಿತು.

ಗ್ರಾಮದ ಜೈನ ಸಮಾಜದ ಅಧ್ಯಕ್ಷ ಸುಬ್ರಹ್ಮಣ್ಯ, ಸಮಾಜದ ಹಿರಿಯ ಮುಖಂಡ ಡಿ.ಸುಂದರದಾಸ್, ಅಖಿಲ ನಾಮಧಾರಿಗೌಡ ಸಮಾಜದ ಗೌರವಾಧ್ಯಕ್ಷ ಜಿ.ಕೃಷ್ಣ, ಕಾರ್ಯದರ್ಶಿ ಗುಣಪಾಲ್, ಅಕ್ರಮ ಸಕ್ರಮ ಸಮಿತಿ ಸದಸ್ಯ ಸೀತಾ ಮಹಾವೀರ, ಗ್ರಾಪಂ ಅಧ್ಯಕ್ಷ ಎಂ.ನಾಗೇಂದ್ರ, ಉಪಾಧ್ಯಕ್ಷೆ ಭಾರತಿ, ಸದಸ್ಯರಾದ ಎಂ.ಡಿ.ರತ್ನಯ್ಯ, ಎಂ.ಕೆ. ಹರಿದಾಸ್, ಹೆಚ್.ಕೃಷ್ಣ, ಅಶ್ವಿನಿ, ಮಾಜಿ ಅಧ್ಯಕ್ಷ ಅಜಿತ್ ಕುಮಾರ್, ಮಾಜಿ ಉಪಾಧ್ಯಕ್ಷ ದೇವದಾಸ್, ಸರಗೂರು ಜೈನ ಸಮಾಜದ ಅಧ್ಯಕ್ಷ ನಾಗರಾಜು, ಸಿ.ಡಿ.ನಾಗರಾಜು, ಸಂಪತ್ ಕುಮಾರ್, ಮೈಸೂರು ಜೈನ ಸಮಾಜದ ಅಧ್ಯಕ್ಷ ಸುನೀಲ್ ಕುಮಾರ್, ಗ್ರಾಮದ ಪದ್ಮರಾಜು, ಹೆಚ್.ವಿ. ಶ್ರೀನಿವಾಸ್, ಪಿ.ನಾಗೇಶ್, ವರ್ಧಮಾನ್, ಬಿ.ಮಟಕೆರೆ ಅಕ್ಕಪಕ್ಕದ ಗ್ರಾಮಗಳ ಶ್ರಾವಕ ಶ್ರಾವಕಿಯರು ಉಪಸ್ಥಿತರಿದ್ದರು.



ಹುಲಿ ಪ್ರತ್ಯಕ್ಷ

ಹೆಚ್.ಡಿ.ಕೋಟೆ ತಾಲೂಕಿನ ತೆರಣಿಮುಂಟಿ ಗ್ರಾಮದ ಶ್ರೀ ರವಿರಾಮೇಶ್ವರ ಹಾಗೂ ಮಹದೇಶ್ವರ ದೇವಾಲಯ ಸಮೀಪ ಸುನೀಲ್ ಎಂಬುವರು ತಮ್ಮ ಜಮೀನಿನಿಂದ ಟ್ರಾಕ್ಟರ್‌ನಲ್ಲಿ ಬರುತ್ತಿದ್ದ ವೇಳೆ ರಸ್ತೆ ಬದಿ ಹುಲಿ ಪ್ರತ್ಯಕ್ಷವಾಗಿದೆ. ತಕ್ಷಣ ಸುನೀಲ್ ಟ್ರಾಕ್ಟರ್ ನಿಲ್ಲಿಸಿ ತಮ್ಮ ಮೊಬೈಲ್‌ನಲ್ಲಿ ಹುಲಿ ಚಿತ್ರ ಸೆರೆ ಹಿಡಿದಿದ್ದಾರೆ.

ನಂದಿ ಬಸವೇಶ್ವರಸ್ವಾಮಿ ಬಂಡಿ ಉತ್ಸವ

ಬನ್ನೂರು, ಮಾ.2– ಇಲ್ಲಿಗೆ ಸಮೀಪದ ಬೀಡನಹಳ್ಳಿ ಗ್ರಾಮದಲ್ಲಿ ನಂದಿ ಬಸವೇಶ್ವರಸ್ವಾಮಿ 13ನೇ ಕೊಂಡೋತ್ಸವದ ಪ್ರಯುಕ್ತ ಭಾನುವಾರ ಬಂಡಿ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಕೊಂಡೋತ್ಸವ ಅಂಗವಾಗಿ ನಂದಿ ಬಸವೇಶ್ವರ ದೇವಾಲಯವನ್ನು ಬಗೆ ಬಗೆಯ ಹೂ, ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು. ಅಲ್ಲದೇ ದೇವಾಲಯದಲ್ಲಿ ಹೋಮ ಸೇರಿ ದಂತೆ ವಿವಿಧ ಧಾರ್ಮಿಕ ಕೈಂಕರ್ಯ ಗಳನ್ನು ನೆರವೇರಿಸಲಾಯಿತು. ಬಳಿಕ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ನಂತರ ಸೋಮವಾರ 5 ಗಂಟೆಗೆ ನಡೆಯುವ ಕೊಂಡೋತ್ಸವಕ್ಕೆ ಸಿದ್ಧತೆ ಮಾಡಲಾಯಿತು. ನಂತರ ವಿವಿಧ ಗ್ರಾಮದಿಂದ ಬಂದಿದ್ದ ಸುಮಾರು 30 ಜೊತೆ ಬಂಡಿಗಳು ಉತ್ಸವದಲ್ಲಿ ಭಾಗವಹಿಸಿ ದೇವಾಲಯದ ಸುತ್ತ ಓಡಿದವು.

ಹಾಸ್ಟೆಲ್ ಬಹುಮಹಡಿ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ



ಹಾಸ್ಟೆಲ್ ಬಹುಮಹಡಿ ಕಟ್ಟಡ ನಿರ್ಮಾಣಕ್ಕೆ ಸಚಿವ ಕೆ.ವೆಂಕಟೇಶ್ ಭೂಮಿ ಪೂಜೆ ನೆರವೇರಿಸಿದರು.

ಬೆಟ್ಟದಪುರ, ಮಾ.2– ಗ್ರಾಮೀಣ ಭಾಗದ ರೈತಾಪಿ ವರ್ಗದ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗಬಾರದೆಂದು ತಾಲೂಕಿನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದು ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್ ತಿಳಿಸಿದರು.


ಇಲ್ಲಿಗೆ ಸಮೀಪದ ಆನಿವಾಳು ಗ್ರಾಮದಲ್ಲಿ ಅಲ್ಪಸಂಖ್ಯಾತ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಸ್ಟೆಲ್ ಬಹುಮಹಡಿ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, 7.26 ಕೋಟಿ ರೂ. ವೆಚ್ಚದಲ್ಲಿ 52 ಕೊಠಡಿ ನಿರ್ಮಾಣವಾಗಲಿದ್ದು ಇದರಿಂದ 315 ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಅಲ್ಲದೇ 2 ಕೋಟಿ ರೂ. ವೆಚ್ಚದಲ್ಲಿ 485 ಮೀಟರ್ ಕಾಂಪೌಂಡ್ ನಿರ್ಮಾಣವಾಗಲಿದೆ ಮುಂದಿನ ವರ್ಷದಿಂದ ವಾಣಿಜ್ಯ ಹಾಗೂ ವಿಜ್ಞಾನ ವಿಷಯಗಳ ತರಗತಿಗಳು ಪ್ರಾರಂಭವಾಗಲಿವೆ. ಪಜಾತಿ, ಪಪಂಗಡದ ಸಮುದಾಯದವರಿಗೆ ಹಸುವಿನ ಕಾವಲು ಗ್ರಾಮದಲ್ಲಿ ಮೊರಾರ್ಜಿ ಶಾಲೆ ಮಂಜೂರಾಗಿದೆ. ಸಚಿವ ಜಮೀರ್ ಅಹಮದ್ ಬಳಿ ಬೈಲಕುಪ್ಪೆ ಭಾಗಕ್ಕೆ ಒಂದು ಶಾಲೆ ಕೊಡಬೇಕೆಂದು ಮನವಿ ಸಲ್ಲಿಸಿದ್ದೇನೆ. ಅದಕ್ಕೆ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಮುಂದಿನ ದಿನಗಳಲ್ಲಿ ಆ ಕೆಲಸವು ಆಗಲಿದೆ. ಪಿರಿಯಾಪಟ್ಟಣದ ಪಾಲಿಟೆಕ್ನಿಕ್ ಕಾಲೇಜಿನ ಅಭಿವೃದ್ಧಿಗೆ 5 ಕೋಟಿ ರೂ. ಮಂಜೂರು ಮಾಡಿಸಿದ್ದೇನೆ ಎಂದರು.

ಗ್ರಾಮೀಣ ಭಾಗದಲ್ಲಿ ಪದವಿ ಶಿಕ್ಷಣ ದೊರೆಯುತ್ತಿರುವುದರಿಂದ ಗ್ರಾಮಾಂತರ ವಿದ್ಯಾರ್ಥಿನಿಯರು ಪದವೀಧರರಾಗುತ್ತಿರುವುದು ತಾಲೂಕಿಗೆ ಹೆಮ್ಮೆಯ ವಿಚಾರ. ನಮ್ಮ ಕ್ಷೇತ್ರದಲ್ಲಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ಕಲಿಕೆಗೆ ಉತ್ತಮ ವಾತಾವರಣ ಸೃಷ್ಟಿಸುವುದು ನಮ್ಮ ಧ್ಯೇಯವಾಗಿದೆ ಎಂದರು.

ಬಳಿಕ ರಾಗಿ ಆಲದಮರ ಗ್ರಾಮದಲ್ಲಿ ಸಿಸಿ ಚರಂಡಿ ಕಾಮಗಾರಿಗೆ ಭೂಮಿ ಪೂಜೆ, ಹಸುವಿನ ಕಾವಲು ಗ್ರಾಮದಲ್ಲಿ ಕೊಡಿ ನಾಲೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು. ಈ ವೇಳೆ ಆಶ್ರಯ ಸಮಿತಿ ಅಧ್ಯಕ್ಷ ನಿತಿನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಹಮದ್ ಜಾನ್ ಬಾಬು, ಡಿ.ಟಿ.ಸ್ವಾಮಿ, ಗ್ರಾಪಂ ಅಧ್ಯಕ್ಷೆ ಕಮಲಾಕ್ಷಮ್ಮ, ಮುಖಂಡರಾದ ವೀಣಾ, ಪುಟ್ಟರಾಜು, ಸುಹೇಲ್, ಭೀಮಣ್ಣ, ಜ್ಯೋತಿ, ಗೌರಮ್ಮ, ತಹಸೀಲ್ದಾರ್ ನಿಸರ್ಗ ಪ್ರಿಯ, ಇಓ ಸುನೀಲ್, ಶಿಲ್ಪಾ, ಕೃಷಿ ಸಹಾಯಕ ನಿರ್ದೇಶಕ ಪ್ರಸಾದ್, ಸಿಡಿಪಿಓ ಮಮತಾ, ಪಿಡಬ್ಲ್ಯೂಡಿ ವೆಂಕಟೇಶ್, ಎಇ ಶಿವಕುಮಾರ್, ಪ್ರಶಾಂತ್, ಹಿತೇಂದ್ರ, ಕುಮಾರ್, ಪ್ರಾಂಶುಪಾಲೆ ಕುಮಾರಿ, ಉಪನ್ಯಾಸಕ ಸುನೀಲ್, ಭಾಸ್ಕರ್, ಚನ್ನಕೇಶವ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಮುಖಂಡರು ಭಾಗವಹಿಸಿದ್ದರು.

ಡಿಕೆಶಿಯಿಂದ ಸರ್ಕಾರ ಬದಲಾಗುವ ಮುನ್ಸೂಚನೆ

ಮಾಜಿ ಸಚಿವ ಶ್ರೀರಾಮುಲು ಭವಿಷ್ಯ



ಡಾ.ಬಿ.ಆರ್.ಅಂಬೇಡ್ಕರ್ ಪ್ರತ್ಥಳಿಗೆ ಮಾಜಿ ಸಚಿವ ಶ್ರೀರಾಮುಲು ಮಾಲಾರ್ಪಣೆ ಮಾಡಿದರು.

ನಂಜನಗೂಡು, ಮಾ.2– ಮಹಾರಾಷ್ಟ್ರದಂತೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಂದ ಕರ್ನಾಟದಲ್ಲೂ ಹೊಸ ವಿದ್ಯಮಾನಗಳು ಘಟಿಸಿ ಸರ್ಕಾರ ಬದಲಾಗುವ ಮುನ್ಸೂಚನೆ ಇದೆ ಎಂದು ಮಾಜಿ ಸಚಿವ ಶ್ರೀರಾಮುಲು ಭವಿಷ್ಯ ನುಡಿದರು.

ಕಾರ್ಯ ನಿಮಿತ್ತ ಶುಕ್ರವಾರ ಚಾಮರಾಜನಗರಕ್ಕೆ ತೆರಳುತ್ತಿದ್ದ ಮಾರ್ಗಮಧ್ಯೆ ನಂಜನಗೂಡಿನ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಬಳಿ ಅವರನ್ನು ಅದ್ಧೂರಿಯಾಗಿ ಬರಮಾಡಿಕೊಂಡು ನೀಡಿದ ಸನ್ಮಾನ ಸ್ವೀಕರಿಸಿ ನಂತರ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಕಾಂಗ್ರೆಸ್ ಪಕ್ಷದೊಳಗಿನ ಆಂತರಿಕ ಕಚ್ಚಾಟ ಮಿತಿ ಮೀರಿದೆ. ಮಹಾರಾಷ್ಟ್ರದಲ್ಲಿ ಶಿವಸೇನೆ ಮತ್ತು ಕಾಂಗ್ರೆಸ್ ಸರ್ಕಾರ ಪತನವಾದಂತೆ ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲಿ ಡಿ.ಕೆ.ಶಿವಕುಮಾರ್ ಅವರ ನಿರ್ಧಾರದಿಂದ ಹೊಸ ವಿದ್ಯಮಾನಗಳು ಘಟಿಸಲಿವೆ. ಆದ ಕಾರಣ ಮುಖ್ಯಮಂತ್ರಿ ಗಳು ಬದಲಾವಣೆಯಾಗಿ ಸರ್ಕಾರವೇ ಬದಲಾವಣೆಯಾಗುವ ಸಾಧ್ಯತೆ ಹೆಚ್ಚಾಗಿದೆ ಎಂದರು.

ಡಿ.ಕೆ.ಶಿವಕುಮಾರ್ ಬಿಜೆಪಿಗೆ ಬರಲಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಡಿ.ಕೆ.ಶಿವಕುಮಾರ್ ಅವರನ್ನು ಬಿಜೆಪಿ ಪಕ್ಷಕ್ಕೆ ಕರೆತರುವ ಬಗ್ಗೆ ಬಿಜೆಪಿ ವರಿಷ್ಠರು ನಿರ್ಧಾರ ಮಾಡಲಿದ್ದಾರೆ. ಡಿ.ಕೆ.ಶಿವಕುಮಾರ್ ಅವರು ಬಿಜೆಪಿ ಪಕ್ಷಕ್ಕೆ ಬಂದಲ್ಲಿ ಪಕ್ಷದ ಬಲ ಹೆಚ್ಚಲಿದೆ ಎಂದರು.

ಈ ವೇಳೆ ಮಾಜಿ ಶಾಸಕರಾದ ಎಸ್. ಬಾಲರಾಜು, ನಿರಂಜನ್ ಕುಮಾರ್, ಬಿಜೆಪಿ ರಾಜ್ಯ ಮುಖಂಡ ಮುನಿರಾಜು, ಶಿರಹಟ್ಟಿ ಶಾಸಕ ಚಂದ್ರು ಲಮಾಣಿ, ಬಿಜೆಪಿ ಮಂಡಲ ಅಧ್ಯಕ್ಷ ಮಹದೇವಸ್ವಾಮಿ, ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಧುರಾಜ್, ತಾಲೂಕು ಯುವ ಮೋರ್ಚಾ ಅಧ್ಯಕ್ಷ ಸಿದ್ದರಾಜು, ಮುಖಂಡರಾದ ಮಂಜುನಾಥ್, ಪ್ರಕಾಶ್, ಸುಧೀಂದ್ರ, ಪ್ರಭಾಕರ್, ರಂಗಸ್ವಾಮಿ ಸೇರಿದಂತೆ ಬಿಜೆಪಿ ಕಾರ್ಯಕರ್ತರು ಉಪಸ್ಥಿತರಿದ್ದರು.

ಮಾ.8, ಆಲಗೂಡು ಪಿಎಸಿಎಸ್ ನಿರ್ದೇಶಕರ ಚುನಾವಣೆ

ಉತ್ತಮ ಆಡಳಿತ, ಅಭಿವೃದ್ಧಿ ಕಾರ್ಯಗಳೇ ನನ್ನ ಗೆಲುವಿಗೆ ಶ್ರೀರಕ್ಷೆ

ಆಲಗೂಡು ಪಿಎಸಿಎಸ್ ಮಾಜಿ ಅಧ್ಯಕ್ಷ ಬಿ.ವೀರಭದ್ರಪ್ಪ ವಿಶ್ವಾಸ



ಮಾಜಿ ಅಧ್ಯಕ್ಷ ಬಿ.ವೀರಭದ್ರಪ್ಪ ಸೇರಿದಂತೆ ಇತರರು ನಾಮಪತ್ರ ಸಲ್ಲಿಸಿದರು.

ತಿ.ನರಸೀಪುರ, ಮಾ.2– ಆಲಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷನಾಗಿದ್ದ ವೇಳೆ ನಾನು ನಡೆಸಿದ ಉತ್ತಮ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಗಳು ಪ್ರಸಕ್ತ ಚುನಾವಣೆಯಲ್ಲಿ ನನ್ನ ಗೆಲುವಿಗೆ ಶ್ರೀರಕ್ಷೆಯಾಗಲಿದೆ ಎಂದು ಸಂಘದ ಮಾಜಿ ಅಧ್ಯಕ್ಷ ಬಿ.ವೀರಭದ್ರಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ಮಾ.8ರಂದು ಆಲಗೂಡು ಪಿಎಸಿಎಸ್ ನಿರ್ದೇಶಕರ ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ತಮ್ಮ ನೇತೃತ್ವದ ತಂಡದೊಂದಿಗೆ ನಾಮಪತ್ರ ಸಲ್ಲಿಸಿ, ಗೆಲುವಿನ ವಿಶ್ವಾಸ ವ್ಯಕ್ತಪಡಿಸಿ ಅವರು ಮಾತನಾಡಿದರು.

ಪ್ರಸಕ್ತ ಚುನಾವಣೆಯಲ್ಲಿ ನನ್ನ ನೇತೃತ್ವದಲ್ಲಿ 12 ನಿರ್ದೇಶಕರ ಸ್ಥಾನಕ್ಕೆ 11 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದೇನೆ. 11ಕ್ಕೆ 11 ಸ್ಥಾನಗಳಲ್ಲೂ ಬಹುಮತ ಪಡೆದು ನಮ್ಮ ತಂಡದ ಸದಸ್ಯರು ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಳೆದ ಚುನಾವಣೆ ವೇಳೆ ಬಹುಮತ ಪಡೆದು ಅಧ್ಯಕ್ಷನಾಗಿದ್ದ ವೇಳೆ ನಮ್ಮ ತಂಡದಲ್ಲಿದ್ದ ಕೆಲ ಸದಸ್ಯರು ರಾಜೀನಾಮೆ ಕೊಟ್ಟ ಹಿನ್ನೆಲೆಯಲ್ಲಿ 3 ವರ್ಷ 6 ತಿಂಗಳು ಮಾತ್ರ ಅಧಿಕಾರ ದೊರೆಕಿತ್ತು. ಸಿಕ್ಕ ಅವಧಿಯಲ್ಲೇ ಉತ್ತಮ ಕೆಲಸ ಮಾಡಿದ್ದೇನೆ. ಯಾರ ಅವಧಿಯಲ್ಲೂ ಆಗದ ಉತ್ತಮವಾದ ಸಂಘದ ಕಟ್ಟಡ ನಿರ್ಮಾಣ ಮಾಡಿದ್ದೇನೆ. ನನ್ನ ಅವಧಿಗೂ ಮುಂಚೆ ಇದ್ದಕ್ಕಿಂತಲೂ ಹೆಚ್ಚಿನ ಲಾಭಾಂಶ ದೊರಕಿಸಿಕೊಟ್ಟು ಸಂಘದ ಏಳಿಗೆಗೆ ಶ್ರಮಿಸಿದ್ದೇನೆ. ಸಂಘದ ಅಭಿವೃದ್ಧಿಗೆ ಹೆಚ್ಚಿನ ಗುರಿ ಇಟ್ಟುಕೊಂಡಿದ್ದ ನನಗೆ ನಮ್ಮಲ್ಲಿದ್ದ ಸದಸ್ಯರೇ ಅಡ್ಡಗಾಲು ಹಾಕಿ ಅವಕಾಶ ಮಾಡಿಕೊಡದೇ ಅಧಿಕಾರ ಮೊಟಕುಗೊಳಿಸಿದ್ದರಿಂದ ನನ್ನ ಅಭಿವೃದ್ಧಿ ಕನಸು ನನಸಾಗೇ ಉಳಿಯುವಂತಾ ಯಿತು ಎಂದು ಬೇಸರ ವ್ಯಕ್ತಪಡಿಸಿದರು.

ಈಗ ಮತ್ತೆ ಚುನಾವಣೆ ಬಂದಿದೆ. ಉತ್ತಮ ತಂಡದೊಂದಿಗೆ ಸ್ಪರ್ಧೆಗಿಳಿದಿದ್ದೇನೆ. ನನ್ನ ಅಭಿವೃದ್ಧಿ ಕಾರ್ಯಗಳನ್ನು ಸಂಘದ ಷೇರುದಾರರು ಗಮನಿಸಿದ್ದಾರೆ. ನನಗೆ ಅನ್ಯಾಯ ಆಗಿರುವ ವಿಷಯ ಮತದಾರನ ಮನಸ್ಸಿನಲ್ಲಿದೆ. ಹಾಗಾಗಿ ಈ ಬಾರಿ ಮತದಾರರು ನನ್ನ ತಂಡಕ್ಕೆ ಬೆಂಬಲಿಸಿ ಅದ್ಭುತ ಜಯ ತಂದುಕೊಡುತ್ತಾರೆಂಬ ಭರವಸೆ ತಮಗಿದೆ ಎಂದರು.

ಕೋಲ್ಡ್ ಸ್ಟೋರೇಜ್ ನಿರ್ಮಾಣದ ಗುರಿ: ಕಳೆದ ಅವಧಿಯಲ್ಲಿ ನನ್ನ ಜೊತೆ ಇದ್ದ ಸದಸ್ಯರೇ ನನಗೆ ಅಭಿವೃದ್ಧಿ ಕೆಲಸ ಮಾಡಲು ಬಿಡಲಿಲ್ಲ. ಈ ಬಾರಿ ಮತದಾರರು ನನ್ನ ಪರವಿದ್ದು 11 ಸ್ಥಾನದಲ್ಲೂ ಜಯ ತಂದು ಕೊಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದ ವೀರಭದ್ರಪ್ಪ ಮುಂದೆ ಈ ಹಿಂದಿನ ಯೋಜನೆಯಂತೆ ಸಂಘದಲ್ಲಿ 10 ಗುಂಟೆ ಜಮೀನು ಖರೀದಿ ಮಾಡಿ 2 ಕೋಟಿ ರೂ. ವೆಚ್ಚದಲ್ಲಿ ಕೋಲ್ಡ್ ಸ್ಟೋರೇಜ್ ನಿರ್ಮಾಣ ಮಾಡಬೇಕೆಂಬ ಗುರಿ ಹೊಂದಿದ್ದು, ಇದರಿಂದ ರೈತರಿಗೆ ಅನುಕೂಲವಾಗಲಿದೆ ಎಂದರು.

ಅಲ್ಲದೇ ಷೇರುದಾರರಿಗೆ 55 ಪೈಸೆ ಬಡ್ಡಿ ದರದಲ್ಲಿ ಚಿನ್ನದ ಸಾಲ ಕೊಡುವ ಉದ್ದೇಶದಿಂದ ಸಹಕಾರ ಸಂಘದಲ್ಲಿ ಲಾಕರ್ ರೂಂ ಸಹ ನಿರ್ಮಾಣ ಮಾಡಿಸಿದ್ದೆ. ಈಗ ಇದನ್ನು ಕಾರ್ಯಗತಗೊಳಿಸಲಿದ್ದೇನೆ. ಸಹಕಾರ ಸಂಘಕ್ಕೆ ಈ ಹಿಂದೆ ಯಾವುದೇ ಆದಾಯದ ಮೂಲಗಳಿರಲಿಲ್ಲ. ನನ್ನ ಅಧ್ಯಕ್ಷ ಸ್ಥಾನದ ಅವಧಿಯಲ್ಲಿ ವಾಣಿಜ್ಯ ಉದ್ದೇಶದ ಕಟ್ಟಡ ನಿರ್ಮಾಣ ಮಾಡುವ ಮೂಲಕ 35 ಸಾವಿರ ರೂ. ಬಾಡಿಗೆ ಬರುವಂತೆ ಮಾಡಿದ್ದು, ಇದೆಲ್ಲವನ್ನೂ ಗಮನಿಸಿರುವ ಮತದಾರರು ನನಗೆ ನನ್ನ ತಂಡಕ್ಕೆ ಆಶೀರ್ವದಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿ.ವೀರಭದ್ರಪ್ಪ ಬಣದ ಅಭ್ಯರ್ಥಿಗಳು

ಸಾಲಗಾರರ ಕ್ಷೇತ್ರದಿಂದ ಸಾಮಾನ್ಯ ವರ್ಗಕ್ಕೆ ಮೀಸಲಾದ ಸ್ಥಾನಕ್ಕೆ ಬಿ.ವೀರಭದ್ರಪ್ಪ, ಬನ್ನಹಳ್ಳಿಹುಂಡಿ ನಾಗೇಶ್, ಹೊಸೂರುಹುಂಡಿ ಪರಶಿವ, ಹೆಳವರಹುಂಡಿ ಕುಮಾರ್, ಮುದ್ದುಬೀರನಹುಂಡಿ ಹುಚ್ಚೇಗೌಡ, 2 ಎ ಗೆ ಮೀಸಲಾದ ಸ್ಥಾನಕ್ಕೆ ಪುಟ್ಟಬುದ್ಧಿ, ಪ.ಜಾತಿಯಿಂದ ಸಿದ್ದರಾಜು, ಬಿಸಿಎಂ ಬಿ ಯಿಂದ ಕರೋಹಟ್ಟಿ ಉಮೇಶ್, ಮಹಿಳಾ ಮೀಸಲು ಸ್ಥಾನಕ್ಕೆ ಸುಂದರಮ್ಮ, ಹೊಸೂರುಂಡಿ ಪುಟ್ಟತಾಯಮ್ಮ ಹಾಗೂ ಸಾಲಗಾರರ ಕ್ಷೇತ್ರದಿಂದ ಬಸಪ್ಪ ಸ್ಪರ್ಧಿಸಿದ್ದಾರೆ. ಮಾ.8 ರಂದು ನಡೆವ ಚುನಾವಣೆಯಲ್ಲಿ ಸಾಲಗಾರರ ಕ್ಷೇತ್ರದಿಂದ 624 ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ 267 ಮಂದಿ ಮತ ಚಲಾಯಿಸಲು ಅರ್ಹರಾಗಿದ್ದು, ಅಂದು ಸಂಜೆಯೇ ಫಲಿತಾಂಶ ಹೊರಬೀಳಲಿದೆ.

ಸರ್ಕಾರದ ಪ್ರೋತ್ಸಾಹವಿಲ್ಲದೆ ವಿವಿಗಳು ರೋಗಗ್ರಸ್ಥವಾಗಿವೆ

ಮೈಸೂರು ವಿವಿ ಹಳೆ ವಿದ್ಯಾರ್ಥಿಗಳ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪ ವಿಷಾದ

ಮೈಸೂರು, ಮಾ.2(ಜಿಎ)–ಪ್ರಸ್ತುತ ದಿನಗಳಲ್ಲಿ ಸರ್ಕಾರದ ಪ್ರೋತ್ಸಾಹವಿಲ್ಲದೆ ವಿಶ್ವವಿದ್ಯಾನಿಲಯಗಳು ರೋಗಗ್ರಸ್ಥವಾಗಿವೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಹಳೆ ವಿದ್ಯಾರ್ಥಿಗಳ ಸಂಘದ ಉಪಾಧ್ಯಕ್ಷರಾದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ವಿಷಾದ ವ್ಯಕ್ತಪಡಿಸಿದರು.

ಭಾನುವಾರ ಬೆಳಗ್ಗೆ ನಗರದ ಸರಸ್ವತಿಪುರಂ ಅಗ್ನಿಶಾಮಕ ದಳ ಕಚೇರಿ ಮುಂಭಾಗವಿರುವ ಸಂಘದ ಕಚೇರಿಯಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯದ ಹಳೆ ವಿದ್ಯಾರ್ಥಿಗಳ ಸಂಘದ (ಅಲೂಮ್ನಿ ಅಸೋಸಿಯೇಷನ್) ಸರ್ವ ಸದಸ್ಯರ ವಾರ್ಷಿಕ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು.

ಹಳೆ ವಿದ್ಯಾರ್ಥಿಗಳ ಸಂಘ 1999 ರಿಂದಲೂ ಇದೆ. ಆದರೆ ಅದು ನಿಷ್ಕ್ರಿಯಗೊಂಡಿತ್ತು. ಈ ಹಿಂದೆ ನಾನು ಮೈಸೂರು ವಿ.ವಿಗೆ ಕುಲಪತಿಯಾಗಿ ನೇಮಕಗೊಂಡ ಬಳಿಕ ಸಂಘವನ್ನು ಮತ್ತೆ ಪುನರ್ ರಚನೆ ಮಾಡಿ ಸಕ್ರಿಯೆಗೊಳಿಸಿದ್ದೇನೆ ಎಂದ ಅವರು, ಬೇರೆ ಬೇರೆ ದೇಶಗಳಲ್ಲಿ ಹಳೇ ವಿದ್ಯಾರ್ಥಿ ಸಂಘಟನೆಗಳಿಂದಲೇ ಕೆಲವೊಂದು ವಿವಿಗಳೇ ಸ್ಥಾಪನೆ ಆಗಿವೆ. ಪ್ರಸ್ತುತ ದಿನಮಾನಗಳಲ್ಲಿ ಸರ್ಕಾರದ ಪ್ರೋತ್ಸಾಹ ಇಲ್ಲದೆ ವಿಶ್ವವಿದ್ಯಾನಿಲಯಗಳು ರೋಗಗ್ರಸ್ಥವಾಗಿ ನಡೆಯುತ್ತಿವೆ. ಉನ್ನತ ಶಿಕ್ಷಣ ಎನ್ನುವುದು ನನೆಗುದಿಗೆ ಬಿದ್ದಿದೆ ಎಂದರು.



ಮೈಸೂರಿನ ಸರಸ್ವತಿಪುರಂನಲ್ಲಿರುವ ಸಂಘದ ಕಚೇರಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಹಳೆ ವಿದ್ಯಾರ್ಥಿಗಳ ಸಂಘದ (ಅಲೂಮ್ನಿ ಅಸೋಸಿಯೇಷನ್) ಸರ್ವ ಸದಸ್ಯರ ವಾರ್ಷಿಕ ಸಭೆಯನ್ನು ನಡೆಸಲಾಯಿತು.

ಸೈನ್ಸ್ ಅಂಡ್ ಟೆಕ್ನಾಲಜೀಸ್ ನೆನೆಗುದಿಗೆ ಬಿದ್ದಿದೆ. ಹಾಗಾಗಿ ಇಂತ ಪರಿಸ್ಥಿತಿಯಲ್ಲಿ ನಾವೆಲ್ಲ ಒಂದು ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಟ್ರಸ್ಟ್ ಸ್ಥಾಪಿಸಿ ವಿದೇಶದಲ್ಲಿ ನೆಲೆಸಿರುವ ಮೈಸೂರು ವಿವಿ ಹಳೇ ವಿದ್ಯಾರ್ಥಿಗಳ ದೇಣಿಯ ಹಣವನ್ನು ಸದುಪಯೋಗ ಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ. ಆ ಮೂಲಕ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡುವ ಯೋಜನೆ ಜಾರಿಗೊಳಿಸಲು ಉದ್ದೇಶಿಸಲಾಗಿದೆ ಎಂದರು.

ಈ ಎಲ್ಲಾ ಅಂಶಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ರೂಪುರೇಷೆ ಸಿದ್ಧಪಡಿಸಲು ಇಂದು ಹಳೆ ವಿದ್ಯಾರ್ಥಿ ಸಂಘದ ಸಭೆ ಕರೆದಿದ್ದೆವು. ಜತೆಗೆ ಸಂಘಕ್ಕೆ ನೂತನ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ ನಡೆಯಬೇಕಿದೆ. ಈಗಾಗಲೇ ಮೂರು ವರ್ಷಗಳ ಅವಧಿ ಮುಗಿದಿದೆ. ನಮ್ಮಲ್ಲೇ ಇರುವ ಒಬ್ಬ ಸದಸ್ಯ ಚುನಾವಣೆ ನಡೆಸಲು ಆಕ್ಷೇಪ ಎತ್ತಿ ಕೋರ್ಟ್ ಮೊರೆ ಹೋಗಿದ್ದಾರೆ. ನಮ್ಮಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯ ಸರಿಪಡಿಸಿಕೊಂಡು ಶೀಘ್ರದಲ್ಲೇ ಸಂಘದ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಮಾಡಲಾಗುತ್ತದೆ. ನಮ್ಮಲ್ಲಿ 13 ಜನ ಕಾರ್ಯಕಾರಿ ಸಮಿತಿಗೆ ಆಯ್ಕೆ ಮಾಡಲಾಗುತ್ತದೆ. ಬಳಿಕ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ ನಡೆಯುತ್ತದೆ ಎಂದು ಅವರು ಮಾಹಿತಿ ನೀಡಿದರು.

ಪ್ರೊ.ತರೀನ್ ಮಾತನಾಡಿ, ಮೈಸೂರು ವಿವಿ ಹಳೇ ವಿದ್ಯಾರ್ಥಿಗಳ ಸಂಘದ ಸದಸ್ಯರೆಲ್ಲಾ ಒಂದೇ ಕುಟುಂಬಕ್ಕೆ ಸೇರಿದವರು. ಈ ಸಂಘದ ಉದ್ದೇಶಕ್ಕೆ ಪೂರಕವಾಗಿ ಪ್ರತಿಷ್ಠೆ ಬದಿಗಿಟ್ಟು ಎಲ್ಲರೂ ಕಾರ್ಯ ನಿರ್ವಹಿಸಬೇಕು. ಆ ಮೂಲಕ ವಿವಿಯ ಅಭಿವೃದ್ಧಿಗೆ ಹಾಗೂ ವಿದ್ಯಾರ್ಥಿಗಳ ಭವಿಷ್ಯದ ಸಲುವಾಗಿ ಸಂಘಟಿತವಾಗಿ ಕಾರ್ಯ ನಿರ್ವಹಿಸಬೇಕು ಎಂದು ಸಭೆಯಲ್ಲಿ ಕಿವಿಮಾತು ಹೇಳಿದರು.

ಸಂಘದ ಅಧ್ಯಕ್ಷ ವಿಶ್ರಾಂತ ಕುಲಪತಿ ಪ್ರೊ.ಎಸ್.ಎನ್. ಹೆಗ್ಡೆ, ವಿಶ್ರಾಂತ ಕುಲಪತಿಗಳಾದ ಪ್ರೊ.ರಾಮೇಗೌಡ, ಪ್ರೊ.ಹೇಮಂತ್ ಕುಮಾರ್, ಸಿಂಡಿಕೇಟ್ ಸದಸ್ಯ ಚಂದ್ರಶೇಖರ್ ಹಾಗೂ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಶಭಾಷ್ ಬಡ್ಡಿಮಗ್ನೆ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಡ್ರ್ಯಾಗನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
1990's (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭಾವಾ (ಹಿಂ)	4 ಪ್ರದರ್ಶನಗಳು
ರಾಜಕಮಲ್	
ಶಬ್ದಂ(ತ)	4 ಪ್ರದರ್ಶನಗಳು
ಸಂಗಂ	
ಅಪಾಯವಿದೆ ಎಚ್ಚರಿಕೆ + FIR (ಕ)	2+2 ಪ್ರದರ್ಶನಗಳು
ಲಿಡೋ	
1990's (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
FORST (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂಣನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೆಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ವಿವಿಗೆ ಎಸ್‌ಬಿಐನಿಂದ ಶುದ್ಧ ಕುಡಿಯುವ ನೀರಿನ ಘಟಕ



ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ ಹಾಗೂ ವಿದ್ಯಾರ್ಥಿನಿಲಯಕ್ಕೆ ಭಾರತೀಯ ಸ್ಟೇಟ್ ಬ್ಯಾಂಕ್ ವತಿಯಿಂದ ಸಿಎಸ್‌ಆರ್ ಫಂಡ್‌ನಲ್ಲಿ ಕೊಡುಗೆ ನೀಡಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಭಾರತೀಯ ಸ್ಟೇಟ್ ಬ್ಯಾಂಕ್‌ನ ಮೈಸೂರು ವಲಯ ಕಚೇರಿಯ ಉಪ ಮಹಾ ಪ್ರಬಂಧಕ ಅರುಣ್ ಕುಮಾರ್ ಪಾಣಿಗ್ರಹಿ ಉದ್ಘಾಟಿಸಿದರು.

ಮೈಸೂರು,ಮಾ.2(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ ಹಾಗೂ ವಿದ್ಯಾರ್ಥಿನಿಲಯಕ್ಕೆ ಭಾರತೀಯ ಸ್ಟೇಟ್ ಬ್ಯಾಂಕ್ ವತಿಯಿಂದ ಸಿಎಸ್‌ಆರ್ ಫಂಡ್‌ನಲ್ಲಿ ಕೊಡುಗೆ ನೀಡಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ವಿದ್ಯಾರ್ಥಿಗಳ ಸೇವೆಗೆ ಸಮರ್ಪಿಸಲಾಯಿತು.

ವಿದ್ಯಾರ್ಥಿಗಳಿಗೆ ಶುದ್ಧ ಕುಡಿಯುವ ನೀರು ಪೂರೈಸುವ ನಿಟ್ಟಿನಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್(ಎಸ್‌ಬಿಐ) ಸಿಎಸ್‌ಆರ್ ಫಂಡ್‌ನಲ್ಲಿ ಮೂರು ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆಗೆ ನೆರವು ನೀಡಿದ್ದು, ಗಂಗೋತ್ರಿ ಗ್ರಂಥಾಲಯ, ಸ್ನಾತಕೋತ್ತರ ಪದವಿ ಹುಡುಗರ ವಿದ್ಯಾರ್ಥಿನಿಲಯ ಹಾಗೂ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲಾಗಿದೆ.

ನೂತನ ಶುದ್ಧ ಕುಡಿಯುವ ನೀರಿನ ಘಟಕವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಭಾರತೀಯ ಸ್ಟೇಟ್ ಬ್ಯಾಂಕ್‌ನ ಮೈಸೂರು ವಲಯ ಕಚೇರಿಯ ಉಪ ಮಹಾ ಪ್ರಬಂಧಕ ಅರುಣ್ ಕುಮಾರ್ ಪಾಣಿಗ್ರಹಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್‌ನ ಪ್ರಾದೇಶಿಕ ವ್ಯವಸ್ಥಾಪಕ ಪಿ.ವಿ.ಎಸ್.ರಂಗನಾಥ್, ಮೈಸೂರು ವಿಶ್ವವಿದ್ಯಾನಿಲಯದ ಗೋವಿಂದ ಗೌಡ, ಹಣಕಾಸು ಅಧಿಕಾರಿ ಕೆ.ಎಸ್.ರೇಖಾ, ಎಸ್‌ಬಿಐ ಮುಖ್ಯ ವ್ಯವಸ್ಥಾಪಕರಾದ ಸುಧಾ ಕೋಟೇಶ್ವರ, ನೇತ್ರಾವತಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ರಕ್ತದಾನ ಮಾಡಿ, ಜೀವ ಉಳಿಸಲು ಮುಂದಾಗಬೇಕು

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸಲಹೆ

ಮೈಸೂರು, ಮಾ.2(ಎಂಟಿವೈ)– ದಾನಗಳಲ್ಲಿ ಅಮೂಲ್ಯ ದಾನವಾಗಿರುವ ರಕ್ತದಾನ ಮಾಡಿ ರೋಗಿಗಳ ಜೀವ ಉಳಿಸಲು ಯುವ ಜನತೆ ಮುಂದಾಗಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸಲಹೆ ನೀಡಿದ್ದಾರೆ.

ಮೈಸೂರಿನ ಸರಸ್ವತಿಪುರಂ ರೋಟರಿ ಸಭಾಂಗಣದಲ್ಲಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ಜಿಲ್ಲಾ ಘಟಕ ಮೈಸೂರು ಜಿಲ್ಲೆ ಹಾಗೂ ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಸಂಸ್ಥೆ ವತಿಯಿಂದ ಆಯೋಜಿಸಿದ್ದ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಕ್ತದಾನ ಮಾಡಲು ಹಿಂಜರಿಯಬಾರದು. ಪ್ರತಿಯೊಬ್ಬರೂ ರಕ್ತದಾನ ಮಾಡಲು ಮುಂದಾಗಬೇಕು. ಅಪಘಾತ ಸೇರಿದಂತೆ ವಿವಿಧ ಕಾರಣಗಳಿಂದ ಆಸ್ಪತ್ರೆಗಳಲ್ಲಿ ಸಾವು ಬದುಕಿನ ನಡುವೆ ಹೋರಾಡುತ್ತಿರುವ ರೋಗಿಗೆ ಒಂದು ಬಾಟಲ್ ರಕ್ತ ನೀಡಿದರೆ ಅವರು ಬದುಕುತ್ತಾರೆ. ಆರೋಗ್ಯವಂತರಾಗಿರುವ ವ್ಯಕ್ತಿ ಎರಡು ವರ್ಷಕ್ಕೆ ಒಮ್ಮೆಯಾದರೂ ರಕ್ತದಾನ ಮಾಡಬೇಕು. ಯಾವುದೇ ಸಮಸ್ಯೆ ಆಗುವುದಿಲ್ಲ ಮೈಸೂರಿನಲ್ಲಿ ಅನೇಕ ಬ್ಲಡ್ ಬ್ಯಾಂಕ್‌ಗಳಿದ್ದು ರಕ್ತವನ್ನು ಸಂಗ್ರಹಿಸಿ ಅವಶ್ಯಕತೆ ಇರುವ ರೋಗಿಗಳಿಗೆ ನೀಡುವ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ರಕ್ತವನ್ನು ಸ್ವಯಂ ಪ್ರೇರಿತವಾಗಿ ನೀಡಲು ಜನರಲ್ಲಿ ಜಾಗೃತಿ ಮೂಡಿಸಿ, ಪ್ರೋತ್ಸಾಹ ನೀಡಬೇಕು, ಮಾಜಿ ಸೈನಿಕರ ಜಿಲ್ಲಾ ಸಂಘ ಮತ್ತು ರೋಟರಿ ಹೆರಿಟೇಜ್ ಮೈಸೂರುರವರು ಪ್ರತೀ ವರ್ಷ ಆರೋಗ್ಯ ತಪಾಸಣೆ ಜೊತೆಗೆ ರಕ್ತದಾನ ಶಿಬಿರವನ್ನು ಯಶಸ್ವಿಯಾಗಿ ಮಾಡಿಕೊಂಡು ಬರುತ್ತಿದ್ದಾರೆ ಎಂದು ಶ್ಲಾಘಿಸಿದರು.



ರಕ್ತದಾನ ಶಿಬಿರದಲ್ಲಿ ರಕ್ತದಾನ ಮಾಡಿದ ದಾನಿಯೊಬ್ಬರಿಗೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಪ್ರಮಾಣ ಪತ್ರ ನೀಡುತ್ತಿರುವುದು.

ಈ ಸಂದರ್ಭದಲ್ಲಿ ಶಾಸಕರಾದ ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ, ರೋಟರಿ ಹೆರಿಟೇಜ್ ಅಧ್ಯಕ್ಷ ಆರ್ ರಾಜೇಶ್, ಮಾಜಿ ಸೈನಿಕರ ಸಂಘದ ಅಧ್ಯಕ್ಷ ಕೆ.ಪಿ ದಿವಾಕರ್, ಕಾರ್ಯದರ್ಶಿ ಗೌರವ್ ಜಿ ಶರ್ಮ, ಎಸ್.ನಟರಾಜು, ಉಪಾಧ್ಯಕ್ಷ ನೀಲಕಂಠಕುಮಾರ ಶೆಟ್ಟಿ, ಸಂಘದ ಪದಾಧಿಕಾರಿಗಳು ಹಾಜರಿದ್ದರು. ರೋಟರಿ ಹೆರಿಟೇಜ್ ಅಧ್ಯಕ್ಷ ಆರ್ ರಾಜೇಶ್ 50ನೇ ಬಾರಿ ರಕ್ತದಾನ ಮಾಡಿದ್ದು ವಿಶೇಷವಾಗಿತ್ತು.

ಹುಟ್ಟುಹಬ್ಬದ ಶುಭಾಶಯಗಳು



ಮೈಸೂರಿನ ವಾರ್ಡ್ ನಂ.4ರ ಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್ ಅವರ ಹುಟ್ಟುಹಬ್ಬದ ಪ್ರಯುಕ್ತ ಆಯೋಜಿಸಿದ್ದ ಆರೋಗ್ಯ ತಪಾಸಣೆ ಶಿಬಿರದಲ್ಲಿ ಶಾಸಕ ಕೆ.ಹರೀಶ್‌ಗೌಡರು ಭಾಗವಹಿಸಿ ಶುಭ ಹಾರೈಸಿದರು. ವಿವಿಧ ಆಸ್ಪತ್ರೆಗಳ ಮುಖ್ಯಸ್ಥರು, ವೈದ್ಯರು, ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ತಮ್ಮ ಏಳಿಗೆಗೆ ಅನ್ಯರ ಅವಲಂಬಿಸಿದರೆ ಸಾಧನೆ ಸಾಧ್ಯವಿಲ್ಲ

ಸಹಾಯಕ ಪ್ರಾಧ್ಯಾಪಕ ಕೆ.ಎಂ.ಪ್ರಸನ್ನಕುಮಾರ್ ಅಭಿಮತ

ಮೈಸೂರು, ಮಾ.2(ಎಂಟಿವೈ)– ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳಲು ಕಠಿಣ ಪರಿಶ್ರಮಪಡಬೇಕು ಎಂದು ಮಂಡ್ಯದ ಜಿಎಫ್‌ಜಿಸಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಕೆ.ಎಂ.ಪ್ರಸನ್ನ ಕುಮಾರ್ ಸಲಹೆ ನೀಡಿದ್ದಾರೆ.

ಮೈಸೂರಿನ ರಾಘವೇಂದ್ರನಗರದಲ್ಲಿರುವ ಇಂದಿರಾ ಗಾಂಧಿ ಮೆಟ್ರಿಕ್ ನಂತರದ ಮಹಿಳಾ ನರ್ಸಿಂಗ್ ವಿದ್ಯಾರ್ಥಿನಿಲಯದಲ್ಲಿ ನಡೆದ ನೂತನ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ತಮ್ಮ ಏಳಿಗೆಗಾಗಿ ಅನ್ಯರನ್ನು ಅವಲಂಬಿಸಬಾರದು. ಒಂದು ವೇಳೆ ಅನ್ಯರ ಅವಲಂಬನೆ ಹೆಚ್ಚಾದರೆ ಸಾಧನೆ ಮಾಡಲು ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ತಮ್ಮ ಭವಿಷ್ಯ ರೂಪಿಸಿಕೊಳ್ಳಲು ತಾವೇ ಪಣ ತೊಡಬೇಕು ಎಂದರು.

ವಿದ್ಯಾರ್ಥಿನಿಲಯಗಳಲ್ಲಿ ವಾಸ್ತವ್ಯ ಹೂಡಿರುವ ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಶ್ರಮ ಪಡಬೇಕು. ಅಧ್ಯಯನ ಮಾಡಲು ಪೂರಕ ವ್ಯವಸ್ಥೆ ವಿದ್ಯಾರ್ಥಿನಿಲಯಗಳಲ್ಲಿ ಸಿಗುವುದರಿಂದ ಉತ್ತಮ ಗುರಿಯೊಂದಿಗೆ ಓದಬೇಕು. ವಿದ್ಯಾರ್ಥಿನಿಲಯಗಳಲ್ಲಿ ನಿಜವಾದ ಬದುಕನ್ನು ಕಟ್ಟಿಕೊಡುವುದನ್ನು ಕಲಿಸುತ್ತದೆ. ದೇಶದಲ್ಲಿ ಶೇ.28ರಷ್ಟು ವಿದ್ಯಾರ್ಥಿಗಳು ಹಾಗೂ ಶೇ.19ರಷ್ಟು ವಿದ್ಯಾರ್ಥಿನಿಯರು ಹಾಸ್ಟಲ್‌ಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ನೆರವಾದ ವರನ್ನು ನೆನಪಿಸಿಕೊಳ್ಳಬೇಕು. ಹಾಸ್ಟೆಲ್ ವಿದ್ಯಾರ್ಥಿಗಳ ಏಳಿಗೆಗೆ ಸಾಕಷ್ಟು ಜನ ಶ್ರಮಿಸಿದ್ದಾರೆ. ಅದನ್ನು ವಿದ್ಯಾರ್ಥಿಗಳು ನೆನಪಿಸಿಕೊಂಡು ಉತ್ತಮ ನಾಗರಿಕರಾಗಿ ರೂಪುಗೊಳ್ಳುವಂತೆ ತಿಳಿಸಿದರು.




ಮೈಸೂರಿನ ರಾಘವೇಂದ್ರನಗರದಲ್ಲಿರುವ ಇಂದಿರಾ ಗಾಂಧಿ ಮೆಟ್ರಿಕ್ ನಂತರದ ಮಹಿಳಾ ನರ್ಸಿಂಗ್ ವಿದ್ಯಾರ್ಥಿನಿಲಯದಲ್ಲಿ ನಡೆದ ನೂತನ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಮಂಡ್ಯದ ಜಿಎಫ್‌ಜಿಸಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಕೆ.ಎಂ.ಪ್ರಸನ್ನ ಕುಮಾರ್ ಚಾಲನೆ ನೀಡಿದರು.

ಮೇ.12ರಂದು ವಿಶ್ವ ದಾದಿಯರ ದಿನಾಚರಣೆ ಆಚರಿಸುತ್ತಾರೆ. ಆರೋಗ್ಯ ಕ್ಷೇತ್ರದಲ್ಲಿ ಫ್ಲಾರೆನ್ಸ್ ನೈಟಿಂಗೇಲ್ ವಿಶೇಷ ವ್ಯಕ್ತಿಯಾಗಿದ್ದಾರೆ. ಅವರಿಗೆ ವೃತ್ತಿಯ ಬಗ್ಗೆ ಅವರಿಗೆ ಬಹಳ ಗೌರವವಿತ್ತು, ನೀವು ಚನ್ನಾಗಿ ಓದಿಕೊಂಡು ಧನಾತ್ಮಕವಾದ ನಂಬಿಕೆ ಇಟ್ಟುಕೊಂಡು ನಿಮ್ಮ ಭವಿಷ್ಯದ ಬದುಕನ್ನು ಕಲ್ಪನೆ ಮಾಡಿಕೊಂಡು ಕನಸುಗಳನ್ನು ಕಟ್ಟಿಕೊಂಡು ಗುರಿ ಸಾಧಿಸಲು ಪ್ರಯತ್ನಿಸಿರಿ, ಸರ್ಕಾರದ ಉನ್ನತ ಹುದ್ದೆಗಳನ್ನು ಅಲಂಕರಿಸಿ ನಿಮ್ಮ ಮಕ್ಕಳು ನಿಮ್ಮನ್ನು ಹೊಗಳುವ ಹಾಗೆ ಬದುಕಬೇಕು ಎಂದು ಅಭಿಪ್ರಾಯಪಟ್ಟರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿಸ್ತರಣಾಧಿಕಾರಿ ಸುಜೇಂದ್ರಕುಮಾರ್ ಮಾತನಾಡಿ, ಸರ್ಕಾರ ಕೋಟ್ಯಾಂತರ ರೂ. ಖರ್ಚು ಮಾಡಿ ವಿದ್ಯಾರ್ಥಿನಿಲಯ ನಿರ್ಮಿಸಿ, ವಿದ್ಯಾರ್ಥಿಗಳಿಗೆ ಅಗತ್ಯ ವ್ಯವಸ್ಥೆ ಕಲ್ಪಿಸಿದೆ ವಿದ್ಯಾರ್ಥಿಗಳು ಇತ್ತೀಚಿನ ದಿನಗಳಲ್ಲಿ ಮೊಬೈಲ್‌ಗೆ ದಾಸರಾಗುತ್ತಿರುವುದು ವಿಷಾದನೀಯ. ವಿದ್ಯಾರ್ಥಿ ದೆಸೆಯಲ್ಲಿ ಮೊಬೈಲ್ ಬಳಕೆ ತ್ಯಜಿಸಿ ಚೆನ್ನಾಗಿ ಓದಿ ತಂದೆ ತಾಯಿಗೆ ಒಳ್ಳೆಯ ಹೆಸರನ್ನು ತರುವಂತಹ ಸಾಧನೆ ಮಾಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಸಹಾಯಕ ಪ್ರಾಧ್ಯಾಪಕಿ ರೇಖಾ ಬಿ, ಮನಿತ್, ನಿಲಯಪಾಲಕರಾದ ಲೀಲಾ, ನಾಗರತ್ನ, ರಾಜಮ್ಮ ಹಾಜರಿದ್ದರು. ವಿದ್ಯಾರ್ಥಿನಿಯರಾದ ಮಾಲಾಶ್ರೀ ನಿರೂಪಿಸಿದರು. ಗಾಯತ್ರಿ ಸ್ವಾಗತಿಸಿದರು, ಕೀರ್ತನಾ ವಂದಿಸಿದರು, ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು.

ಅಭಿನಂದನೆ



ಬೇಬಿ ಬೆಟ್ಟದ ದನಗಳ ಜಾತ್ರೆಯಲ್ಲಿ ಹಳ್ಳಿಕಾರ್ ತಳಿಯ ಹೋರಿಗಳ ಪ್ರದರ್ಶನ ಮತ್ತು ಮಾರಾಟ ಮಾಡಲು ನಿರ್ಮಿಸಿದ್ದ ಭವ್ಯವಾದ ವೇದಿಕೆಯಲ್ಲಿ ಒಂಟಿಕೊಪ್ಪಲ್ ಪೈಲ್ವಾನ್ ಪ್ರಕಾಶ್ ಅವರನ್ನು ಕೆ.ಜಿ.ಕೊಪ್ಪಲ್ ದೀಪು ಮತ್ತು ಒಂಟಿಕೊಪ್ಪಲ್ ಗುರುರಾಜ್ ಅಭಿನಂದಿಸಿದರು.

ದೇಶ - ವಿದೇಶ

ಅಮೆರಿಕ ಜೊತೆ ಖನಿಜ ಒಪ್ಪಂದಕ್ಕೆ ಸಿದ್ಧ: ಝೆಲೆನ್‌ಸ್ಕಿ ಮಹತ್ವದ ಟ್ವೀಟ್



ವಾಷಿಂಗ್ಟನ್: ಅಮೆರಿಕ ಮತ್ತು ಉಕ್ರೇನ್ ನಡುವೆ ಶುಕ್ರವಾರ ಶ್ವೇತಭವನದಲ್ಲಿ ನಡೆದ ರಾಜತಾಂತ್ರಿಕ ಮಾತುಕತೆಯು ಪರಸ್ಪರ ವಾಗ್ಯುದ್ಧಕ್ಕೆ ದಾರಿ ಮಾಡುವ ಮೂಲಕ ಜಾಗತಿಕ ಮಟ್ಟದಲ್ಲಿ ತೀವ್ರ ಗಮನ ಸೆಳೆದಿತ್ತು. ಈ ಹಿನ್ನೆಲೆಯಲ್ಲಿ ಖನಿಜ ಒಪ್ಪಂದಕ್ಕೆಂದು ಬಂದಿದ್ದ ಉಕ್ರೇನ್ ಅಧ್ಯಕ್ಷ ವ್ಲಾಡಿಮಿರ್ ಝೆಲೆನ್‌ಸ್ಕಿ ಖನಿಜ ಒಪ್ಪಂದಕ್ಕೆ ಸಹಿ ಹಾಕದೆ ಸಭೆಯಿಂದ ಹೊರ ನಡೆದಿದ್ದರು.

ಇದೀಗ ಸುದೀರ್ಘ ಟ್ವೀಟ್ ಮಾಡಿರುವ ಅವರು, ಈ ಮೂರು ವರ್ಷಗಳ ಪೂರ್ಣ ಪ್ರಮಾಣದ ಆಕ್ರಮಣದ ಸಮಯದಲ್ಲಿ ನೀಡಿದ ಬೆಂಬಲಕ್ಕಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಅಮೆರಿಕನ್ನರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಅಲ್ಲದೆ ಖನಿಜಗಳ ಒಪ್ಪಂದಕ್ಕೆ ಸಹಿ ಹಾಕಲು ಉಕ್ರೇನ್ ಒಪ್ಪಿಕೊಂಡಿದೆ ಎಂದು ತಿಳಿಸಿದ್ದಾರೆ. ಭದ್ರತಾ ಖಾತರಿಗಳಿಲ್ಲದೆ ಕದನ ವಿರಾಮ ಉಕ್ರೇನ್ ಪಾಲಿಗೆ ಅಪಾಯಕಾರಿ. ನಾವು 3 ವರ್ಷಗಳಿಂದ ಹೋರಾಡುತ್ತಿದ್ದೇವೆ ಮತ್ತು ಉಕ್ರೇನಿನ ಜನರು ಅಮೆರಿಕ ನಮ್ಮ ಪರವಾಗಿದ್ದಾರೆ ಎಂದು ತಿಳಿದುಕೊಳ್ಳಬೇಕು ಎಂದು ಹೇಳಿದ್ದಾರೆ.

ಟರ್ಕಿಯ ಕುರ್ದಿಸ್ತಾನ್ ವರ್ಕರ್ಸ್ ಪಾರ್ಟಿಯಿಂದ ಕದನ ವಿರಾಮ ಘೋಷಣೆ

ಅಂಕಾರಾ(ಟರ್ಕಿ): ಕುರ್ದಿಸ್ತಾನ್ ವರ್ಕರ್ಸ್ ಪಾರ್ಟಿ (ಪಿಕೆಕೆ) ಮಿಲಿಶಿಯಾ ಸಂಘಟನೆಯು ಶನಿವಾರ (ಸ್ಥಳೀಯ ಸಮಯ)ದಿಂದ ಜಾರಿಗೆ ಬರುವಂತೆ ತಕ್ಷಣದ ಕದನ ವಿರಾಮ ಘೋಷಿಸಿದೆ ಎಂದು ಸಿಎನ್‌ಎನ್ ವರದಿ ಮಾಡಿದೆ. ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಸಂಘಟನೆಯನ್ನು ವಿಸರ್ಜಿಸುವಂತೆ ಜೈಲಿನಲ್ಲಿರುವ ಕುರ್ದಿಸ್ತಾನ್ ವರ್ಕರ್ಸ್ ಪಾರ್ಟಿ (ಪಿಕೆಕೆ)ಯ ನಾಯಕ ಅಬ್ದುಲ್ಲಾ ಒಕಲಾನ್ ಅವರು ಹೋರಾಟಗಾರರಿಗೆ ಕರೆ ನೀಡಿದ ಎರಡು ದಿನಗಳ ನಂತರ ಈ ಕದನ ವಿರಾಮ ಘೋಷಣೆಯಾಗಿದೆ.

ಒಂದೊಮ್ಮೆ ಟರ್ಕಿ ಈ ಪ್ರಸ್ತಾವನೆಯನ್ನು ಅಂಗೀಕರಿಸಿದರೆ ಕನಿಷ್ಠ 40 ಸಾವಿರ ಜನರ ಸಾವಿಗೆ ಕಾರಣವಾದ ಮತ್ತು ನೆರೆಯ ದೇಶಗಳಲ್ಲೂ ಪರಿಣಾಮ ಬೀರಿದ್ದ ದಶಕಗಳ ಕಾಲ ನಡೆದ ಸಂಘರ್ಷ ಅಂತ್ಯವಾಗಲಿದೆ ಎಂದು ಸಿಎನ್‌ಎನ್ ವರದಿ ಮಾಡಿದೆ.

ನಾಯಕ ಒಕಲಾನ್ ಅವರ ಕದನ ವಿರಾಮದ ಕರೆಯನ್ನು ನಾವು ಸಂಪೂರ್ಣವಾಗಿ ಒಪ್ಪಿದ್ದೇವೆ. ಅದರಂತೆ ಇಂದಿನಿಂದ ಜಾರಿಗೆ ಬರುವಂತೆ ಕದನ ವಿರಾಮವನ್ನು ಘೋಷಿಸುತ್ತಿದ್ದೇವೆ ಎಂದು ಪಿಕೆಕೆ ಕಾರ್ಯಕಾರಿ ಸಮಿತಿಯು ಪ್ರಕಟಿಸಿರುವುದಾಗಿ ಫಿರಾತ್ ನ್ಯೂಸ್ ಏಜೆನ್ಸಿ ವರದಿ ಮಾಡಿದೆ.

ಕೇಂದ್ರ ಸಚಿವೆ ರಕ್ಷಾ ಖಾಡ್ಸೆ ಪುತ್ರಿಗೆ ಯುವಕರ ಗುಂಪಿನಿಂದ ಕಿರುಕುಳ: ದೂರು ದಾಖಲು



ಜಲಗಾಂವ್: ಮಹಾರಾಷ್ಟ್ರದ ಜಲಗಾಂವ್ ಜಿಲ್ಲೆಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಯುವಕರ ಗುಂಪೊಂದು ತನ್ನ ಮಗಳು ಮತ್ತು ಆಕೆಯ ಸ್ನೇಹಿತೆಯರಿಗೆ ಕಿರುಕುಳ ನೀಡಿದ ಬಗ್ಗೆ ಕೇಂದ್ರ ಸಚಿವೆ ರಕ್ಷಾ ಖಾಡ್ಸೆ ಭಾನುವಾರ ಪೊಲೀಸರಿಗೆ ದೂರು ದಾಖಲಿಸಿದ್ದಾರೆ.

ಆರೋಪಿಗಳು ರಾಜಕೀಯ ಪಕ್ಷವೊಂದಕ್ಕೆ ಸೇರಿದವರಾಗಿದ್ದು, ಕೆಲವರನ್ನು ಬಂಧಿಸಲಾಗಿದೆ ಎಂದು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಹೇಳಿದ್ದಾರೆ. ಶುಕ್ರವಾರ ರಾತ್ರಿ ಮುಕ್ತೈನಗರದ ಕೊಥಲಿ ಗ್ರಾಮದ ಸಂತ ಮುಕ್ತಾಯಿ ಯಾತ್ರೆಯಲ್ಲಿ ಸಂಭವಿಸಿದ ಘಟನೆಗೆ ಸಂಬಂಧಿಸಿದಂತೆ ಖಾಡ್ಸೆ ಅವರು ಮುಕ್ತೈನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಚಿವೆ, ಕಾರ್ಯಕ್ರಮದಲ್ಲಿ ನನ್ನ ಮಗಳು ಮತ್ತು ಆಕೆಯ ಸ್ನೇಹಿತೆಯರನ್ನು ಹಿಂಬಾಲಿಸಿ, ಭದ್ರತಾ ಸಿಬ್ಬಂದಿಯನ್ನು ತಳ್ಳಲಾಗಿದೆ. ಅವರ ಫೋಟೊ ಮತ್ತು ವಿಡಿಯೋಗಳನ್ನು ತೆಗೆದುಕೊಳ್ಳಲಾಗಿದೆ. ಇದಕ್ಕೆ ನನ್ನ ಸಿಬ್ಬಂದಿ ಆಕ್ಷೇಪಿಸಿದಾಗ ಹುಡುಗರು ಅಶಿಸ್ತಿನ ವರ್ತನೆ ತೋರಿದ್ದಾರೆ ಮತ್ತು 30 ರಿಂದ 40 ಜನರ ಗುಂಪು ಸೇರಿದೆ ಎಂದು ತಿಳಿಸಿದರು.

ತಂದೆಯ ಬೈಗುಳದಿಂದ ಮನನೊಂದು ನೀಟ್ ಆಕಾಂಕ್ಷಿ ಆತ್ಮಹತ್ಯೆ



ಚೆನ್ನೈ: ನೀಟ್ ವೈದ್ಯಕೀಯ ಪ್ರವೇಶ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದ ವಿದ್ಯಾರ್ಥಿನಿಯೊಬ್ಬಳು ತನ್ನ ತಂದೆ ಗದರಿಸಿದ್ದಕ್ಕೆ ಮನನೊಂದು ಆತ್ಮಹತ್ಯೆಗೆ ಶರಣಾಗಿದ್ದಾಳೆ.

ವಿಲುಪ್ಪುರಂನ 19 ವರ್ಷದ ಇಂಧು ಮೃತ ವಿದ್ಯಾರ್ಥಿನಿಯಾಗಿದ್ದಾರೆ. ಇತರ ಹಿಂದುಳಿದ ವರ್ಗ (ಒಬಿಸಿ) ಪ್ರಮಾಣಪತ್ರಕ್ಕೆ ಅರ್ಜಿ ಸಲ್ಲಿಸುವಾಗ ತಪ್ಪು ಪಿನ್ ನೀಡಿದ್ದಕ್ಕಾಗಿ ಆಕೆಯ ತಂದೆ ಬೈದಿದ್ದರಿಂದ ಆಕೆ ಅಸಮಾಧಾನಗೊಂಡಿದ್ದಳು.

ಆಕೆಯ ತಂದೆ ಅರ್ಜಿ ಸಲ್ಲಿಸಲು ಸರ್ಕಾರಿ ಕೇಂದ್ರಕ್ಕೆ ಹೋಗಿದ್ದರು. ಮತ್ತು ಅವರು ಅವಳಿಗೆ ಕರೆ ಮಾಡಿದಾಗ ಅವಳು ಎರಡು ಬಾರಿ ತಪ್ಪು ಪಿನ್ ಹೇಳಿದ್ದಳು. ಅರ್ಜಿ ಪ್ರಕ್ರಿಯೆಯ ಭಾಗವಾಗಿ ಪಿನ್‌ನ್ನು ಅವಳಿಗೆ ಕಳುಹಿಸಲಾಗಿತ್ತು.

ಆದಾಗ್ಯೂ ಆ ವ್ಯಕ್ತಿ ಹೇಗೋ ಸಮಯಕ್ಕೆ ಸರಿಯಾಗಿ ಅರ್ಜಿ ಸಲ್ಲಿಸುವಲ್ಲಿ ಯಶಸ್ವಿಯಾದರು. ಆದರೆ ಮನೆಗೆ ಹಿಂದಿರುಗಿದ ನಂತರ ಅವಳನ್ನು ಗದರಿಸಿದ್ದಾರೆ ಎಂದು ಆರೋಪಿಸಲಾಗಿದೆ. ಪರೀಕ್ಷೆಯಲ್ಲಿ ಕಳಪೆ ಸಾಧನೆ ಮಾಡುವ ಭಯದಿಂದ ಆಕೆ ಆತ್ಮಹತ್ಯೆಗೆ ಶರಣಾಗಿದ್ದಾಳೆ ಎಂಬ ವರದಿಗಳು ಪ್ರಕಟವಾಗಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಮೊದಲ ಇ–ಎಫ್‌ಐಆರ್ ದಾಖಲಿಸಿದ ಬಾರಾಮುಲ್ಲಾ ಪೊಲೀಸರು



ಬಾರಾಮುಲ್ಲಾ: ಡಿಜಿಟಲ್ ಪೊಲೀಸಿಂಗ್‌ನ ಮಹತ್ವದ ಹೆಜ್ಜೆಯಾಗಿ, ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಪಟ್ಟಾನ್ ಪೊಲೀಸ್ ಠಾಣೆಯು ಫೆ.28 ರಂದು ವಾಟ್ಸಾಪ್ ಮೂಲಕ ಸಲ್ಲಿಸಿದ ದೂರಿನ ನಂತರ ತನ್ನ ಮೊದಲ ಎಲೆಕ್ಟ್ರಾನಿಕ್ ಪ್ರಥಮ ಮಾಹಿತಿ ವರದಿಯನ್ನು (ಇ–ಎಫ್‌ಐಆರ್) ದಾಖಲಿಸಿದೆ ಎಂದು ಬಾರಾಮುಲ್ಲಾ ಪೊಲೀಸರು ತಿಳಿಸಿದ್ದಾರೆ. ತೋಟಗಾರಿಕಾ ಇಲಾಖೆಯ ಸರ್ಕಾರಿ ನೌಕರರಾಗಿರುವ ಶ್ರೀನಗರದ ಬೆಮಿನಾ ನಿವಾಸಿಯೊಬ್ಬರು ವಾಟ್ಸಾಪ್ ಮೂಲಕ ಅದೇ ಇಲಾಖೆಯಲ್ಲಿ ಉದ್ಯೋಗಿಯಾಗಿರುವ ಶಕೀಲ್ ಉರ್ ರೆಹಮಾನ್ ಎಂಬುವವರ ವಿರುದ್ಧ ವಾಟ್ಸಾಪ್ ಮೂಲಕ ದೂರು ದಾಖಲಿಸಿದ್ದಾರೆ. ದೂರುದಾರರು ಲೈಂಗಿಕ ಕಿರುಕುಳ, ಅತ್ಯಾಚಾರ ಯತ್ನ ಮತ್ತು ಕ್ರಿಮಿನಲ್ ಬೆದರಿಕೆಯ ಆರೋಪ ಹೊರಿಸಿದ್ದಾರೆ. ದೂರನ್ನು ಪರಿಶೀಲಿಸಿದ ನಂತರ, ಸಂಬಂಧಿತ ಕಾನೂನು ಸೆಕ್ಷನ್‌ಗಳ ಅಡಿಯಲ್ಲಿ ಪೊಲೀಸರು ಪ್ರಕರಣದಲ್ಲಿ ಇ–ಎಫ್‌ಐಆರ್ ದಾಖಲಿಸಿದ್ದಾರೆ.

ಬೆಳಗಾವಿಯಲ್ಲಿ ಎಂಇಎಸ್ ಪುಂಡರ ಪುಂಡಾಟಿಕೆಗೆ ಕಡಿವಾಣ ಹಾಕಲು ಆಗ್ರಹಿಸಿ

ಕರ್ನಾಟಕ ಸೇನಾ ಪಡೆ ಸದಸ್ಯರು ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ



ಬೆಳಗಾವಿಯಲ್ಲಿ ಎಂಇಎಸ್ ಪುಂಡರ ಪುಂಡಾಟಿಕೆಗೆ ಕಡಿವಾಣ ಹಾಕುವಂತೆ ಆಗ್ರಹಿಸಿ, ಕರ್ನಾಟಕ ಸೇನಾ ಪಡೆಯ ಸದಸ್ಯರು ಕಪ್ಪು ಪಟ್ಟಿ ಧರಿಸಿ ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಭಾನುವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಮಾ.2(ಜಿಎ)–ರಾಜ್ಯ ಸರ್ಕಾರ ಬೆಳಗಾವಿಯಲ್ಲಿ ಎಂಇಎಸ್ ಪುಂಡರ ಪುಂಡಾಟಿಕೆಗೆ ಕಡಿವಾಣ ಹಾಕಿ ಕನ್ನಡಿಗರಿಗೆ ರಕ್ಷಣೆ ಕೊಡಬೇಕು ಎಂದು ಆಗ್ರಹಿಸಿ, ಕರ್ನಾಟಕ ಸೇನಾ ಪಡೆಯ ಸದಸ್ಯರು ಕಪ್ಪು ಪಟ್ಟಿ ಧರಿಸಿ ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಭಾನುವಾರ ಪ್ರತಿಭಟನೆ ನಡೆಸಿದರು.

ಬೆಳಗಾವಿಯಲ್ಲಿ ಎಂಇಎಸ್ ಕಾರ್ಯಕರ್ತರು, ರಾಜ್ಯದ ಸಾರಿಗೆ ಬಸ್‌ಗಳಿಗೆ ಪದೇ ಪದೆ ಕಪ್ಪು ಮಸಿ ಬಳಿದು, ನಿರ್ವಾಹಕ ಹಾಗೂ ಚಾಲಕರಿಗೂ ಸಹ ಕಪ್ಪು ಮಸಿ ಬಳಿದು, ಅವರ ಮೇಲೆ ದೌರ್ಜನ್ಯವೆಸಗುತ್ತಿದ್ದು, ದಿನೇ ದಿನೆ ಬೆಳಗಾವಿಯಲ್ಲಿ ಇವರ ದಬ್ಬಾಳಿಕೆ ಹೆಚ್ಚಾಗುತ್ತಿದೆ. ಬಸ್ ನಿರ್ವಾಹಕನ ಮೇಲೆ ಹಲ್ಲೆ ನಡೆಸಿ, ತದನಂತರ ಪ್ರಕರಣವನ್ನು ದಾಖಲಿಸಿರುವುದು ಅತ್ಯಂತ ಖಂಡನೀಯ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ರಾಜ್ಯದ ಕನ್ನಡಪರ ಸಂಘಟನೆ, ರಾಜ್ಯ ಸಾರಿಗೆ ಬಸ್ ಚಾಲಕರಿಗೆ ಹಾಗೂ ನಿರ್ವಾಹಕರಿಗೆ ನೀವು ಮಸಿ ಬಳಿದರೆ, ನಾವು ಸನ್ಮಾನ ಮಾಡುತ್ತೇವೆ ಎಂದು ಇತ್ತೀಚೆಗೆ ಮಹಾರಾಷ್ಟ್ರ ಬಸ್ ಚಾಲಕನಿಗೆ ಸನ್ಮಾನ ಮಾಡಿದೆ. ಕನ್ನಡಿಗರು ಶಾಂತಿಪ್ರಿಯರು, ಎಲ್ಲಾ ರಾಜ್ಯದ ಜನರನ್ನು ಗೌರವಿಸಿ, ಬೆಂಗಳೂರಿನಲ್ಲಿ ನಮ್ಮ ರಾಜ್ಯದಲ್ಲಿ ಜಾಗ ನೀಡಿದ್ದೇವೆ. ನಮ್ಮ ಸಹನೆ, ಶಾಂತಿಯನ್ನು ಕೆಣಕಬೇಡಿ ಎಂದು ಎಚ್ಚರಿಕೆ ನೀಡಿದರು.

ರಾಜ್ಯದ ಗಡಿಯಲ್ಲಿ ಸೌಹಾರ್ದತೆ ಹಾಳು ಮಾಡಿ, ಎರಡು ರಾಜ್ಯಗಳ ನಡುವೆ ಅಶಾಂತಿ ಉಂಟು ಮಾಡುತ್ತಿರುವ ಈ ಎಂಇಎಸ್ ಸಂಘಟನೆಯನ್ನು ರಾಜ್ಯ ಸರಕಾರ ಈ ಕೂಡಲೇ ಬ್ಯಾನ್ ಮಾಡಬೇಕು. ಕಾನೂನು ವ್ಯವಸ್ಥೆಗೆ ಭಂಗ ತರುತ್ತಿರುವ ಇವರುಗಳ ವಿರುದ್ಧ ಗೃಹ ಸಚಿವರು ಸೂಕ್ತ ಕ್ರಮ ಕೈಗೊಂಡು ಇದಕ್ಕೆ ಶಾಶ್ವತವಾಗಿ ಅಂತ್ಯ ಹಾಡಬೇಕು ಹಾಗೂ ಕನ್ನಡ ನಾಡು, ನುಡಿ, ಸಂಸ್ಕೃತಿ ಭಾಷೆ ಬಗ್ಗೆ ಅಭಿಮಾನವಿಲ್ಲದ ಹೊರ ರಾಜ್ಯಗಳ ಐಎಎಸ್, ಐಪಿಎಸ್ ಅಧಿಕಾರಿಗಳ ಬದಲು ನಮ್ಮ ಕನ್ನಡ ನಾಡಿನ ಅಧಿಕಾರಿಗಳನ್ನು ಗಡಿ ಜಿಲ್ಲೆಗಳಿಗೆ ನೇಮಿಸಬೇಕು ಎಂದು ಒತ್ತಾಯಿಸಿದರು.

ಕಳೆದ ಚುನಾವಣೆಯಲ್ಲಿ ಎಲ್ಲಾ ಕನ್ನಡಪರ ಸಂಘಟನೆಗಳು ಕಾಂಗ್ರೆಸ್ ಪಕ್ಷವನ್ನು ಕನ್ನಡಕ್ಕಾಗಿ, ಕನ್ನಡದ ಒಳಿತಿಗಾಗಿ ಬೆಂಬಲಿಸಿದ್ದರು ಎನ್ನುವುದನ್ನು ಗೃಹ ಮಂತ್ರಿಗಳು ಮರೆತಂತಿದೆ. ನೀವು ಎಚ್ಚರಿಕೆ ಕೊಡಬೇಕಾದದ್ದು ಕನ್ನಡದ ಅನ್ನ ತಿಂದು, ನೀರು ಕುಡಿದು, ಈ ನೆಲಕ್ಕೆ ದ್ರೋಹ ಬಗೆಯುತ್ತಿರುವ ಪುಂಡ ಮರಾಠಿ ಸಂಘಟನೆಗಳಿಗೆ ಹೊರತು, ಕನ್ನಡ ಹೋರಾಟಗಾರರಿಗಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಕಾಂಗ್ರೆಸ್ ಸರಕಾರದ ಯಾವೊಬ್ಬ ಚುನಾಯಿತ ಪ್ರತಿನಿಧಿಗಳು, ಬೆಳಗಾವಿ ಸಚಿವರು ಕಂಡಕ್ಟರ್ ಹಾಗೂ ಕನ್ನಡಿಗರ ಪರವಾಗಿ ಮಾತನಾಡದಿರುವುದು ಅತ್ಯಂತ ನೋವಿನ ಸಂಗತಿ. ಕನ್ನಡಿಗರನ್ನು ನಿರ್ಲಕ್ಷಿಸುವ ರಾಜಕಾರಣಿಗಳು ಮುಂಬರುವ ಚುನಾವಣೆಗಳಲ್ಲಿ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ರಾಜ್ಯ ಸರಕಾರ ಈ ಕೂಡಲೇ ಮರಾಠಿಗಳ ಪುಂಡಾಟಿಕೆ ಅಟ್ಟಹಾಸಕ್ಕೆ ಬ್ರೇಕ್ ಹಾಕಿ ಎಂಇಎಸ್ ಸಂಘಟನೆಯನ್ನು ನಿಷೇಧ ಮಾಡಿ, ಸಾರಿಗೆ ಕಂಡಕ್ಟರ್ ಮೇಲಿನ ದಾಳಿಯನ್ನು ಸಮಗ್ರವಾಗಿ ತನಿಖೆಗೆ ಒಳಪಡಿಸಿ ತಪ್ಪಿತಸ್ಥರಿಗೆ ಶಿಕ್ಷೆಯನ್ನು ನೀಡಬೇಕೆಂದು ಅಗ್ರಹಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಪ್ರಭುಶಂಕರ್, ಕೃಷ್ಣಪ್ಪ, ಪ್ರಜೇಶ್, ಕುಮಾರ್ ಗೌಡ, ಬೋಗಾದಿ ಸಿದ್ದೇಗೌಡ, ಶಿವಲಿಂಗಯ್ಯ, ಮಧುವನ ಚಂದ್ರು, ಕೃಷ್ಣೇಗೌಡ, ಶಿವಕುಮಾರ್, ನಾಗರಾಜು, ನೇಹಾ, ಅಂಬಾ ಅರಸ್, ಭಾಗ್ಯಮ್ಮ, ಡಾ.ಶಾಂತರಾಜೇ ಅರಸ್ ಮತ್ತಿತರರು ಪಾಲ್ಗೊಂಡಿದ್ದರು.

ಕ್ಷೇತ್ರ ಪುನರ್ ವಿಂಗಡಣೆ ವಿಚಾರ ಇನ್ನೂ ಚರ್ಚಾ ಹಂತದಲ್ಲಿದೆ



ಬೆಂಗಳೂರು: ಕ್ಷೇತ್ರ ಪುನರ್ ವಿಂಗಡಣೆ ವಿಚಾರ ಇನ್ನೂ ಚರ್ಚಾ ಹಂತದಲ್ಲಿ ಇದೆ. ಯಾವ ರೀತಿ ಗೈಡ್‌ಲೈನ್ಸ್ ಬರುತ್ತದೆ ಅಂತ ನೋಡಿಕೊಂಡು ಚರ್ಚೆ ಮಾಡೋಣ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ತಿಳಿಸಿದ್ದಾರೆ.

ಕ್ಷೇತ್ರ ಪುನರ್ ವಿಂಗಡಣೆಗೆ ಕಾಂಗ್ರೆಸ್ ವಿರೋಧ ವಿಚಾರಕ್ಕೆ ಬೆಂಗಳೂರಿನಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಕ್ಷೇತ್ರ ಪುನರ್ ವಿಂಗಡಣೆ ಇನ್ನೂ ಪ್ರೀ ಮೆಚ್ಯೂರ್ ಹಂತದಲ್ಲಿ ಇದೆ. ಆದರೆ ದಕ್ಷಿಣದ ರಾಜ್ಯಗಳ ಕ್ಷೇತ್ರ ಕಡಿಮೆ ಆಗಬಹುದು ಎಂಬ ಭಾವನೆ ಎಲ್ಲರಿಗೂ ಇದೆ. ಜನಸಂಖ್ಯೆ ಆಧಾರ ತೆಗೆದುಕೊಂಡಾಗ ಲೋಕಸಭೆ ಸ್ಥಾನ ಕಡಿಮೆ ಆಗುವ ಚರ್ಚೆ ಅನೇಕ ದಿನಗಳಿಂದ ನಡೆಯುತ್ತಿದೆ. ಯಾವ ರೀತಿ ಗೈಡ್‌ಲೈನ್ಸ್ ಅಳವಡಿಕೆ ಮಾಡುತ್ತಾರೆ ಎಂದು ಮುಂದೆ ನೋಡೋಣ ಎಂದರು.

ಒಕ್ಕೂಟದ ವ್ಯವಸ್ಥೆಯಲ್ಲಿ ಯಾವುದೇ ರಾಜ್ಯಗಳಿಗೆ ಅನ್ಯಾಯ ಆಗಬಾರದು. ಸ್ವಾತಂತ್ರ್ಯ ಬಂದ ನಂತರದಿಂದ 50 ವರ್ಷ ದೇಶ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರ ಮಾಡಿದೆ. ಎಲ್ಲಾ ಲೋಕಸಭೆ ಸಂಪೂರ್ಣ ಬಹುಮತ ಕಾಂಗ್ರೆಸ್‌ಗೆ ಇತ್ತು. ಅದಾದ ನಂತರ ಕೆಲ ಬದಲಾವಣೆ ಆಗಿದೆ. ಈ ಕಾಂಗ್ರೆಸ್ ಅವರಿಗೆ ಸ್ವಲ್ಪ ಮನವರಿಕೆ ಆಗಿದೆ. ಏನೋ ತಪ್ಪು ಆಗಿದೆ ಎಂದು ಧ್ವನಿ ಎತ್ತಿದ್ದಾರೆ. ಯಾವ ರೀತಿ ಗೈಡ್‌ಲೈನ್ಸ್ ಬರುತ್ತೆ ನೋಡೋಣ. ದಕ್ಷಿಣ ಭಾರತದ ವಿಚಾರದಲ್ಲಿ ಯಾವ ರೀತಿ ವಾತಾವರಣ ನಿರ್ಮಾಣ ಆಗುತ್ತೋ ಹಾಗೆ ಚರ್ಚೆ ಮಾಡೋಣ ಎಂದು ತಿಳಿಸಿದರು.

BUILDING CONSTRUCTION
including Interior works
Starts from Rs. 1799/sqft.,
Call: 7897891986



ದಿ. ಪುಟ್ಟಮ್ಮ ಮತ್ತು ಸಾಹುಕಾರ್ ಜಿ. ತಿಮ್ಮಯ್ಯ
ಬ್ಯಾಟೆ ತಿಮ್ಮನಕೊಪ್ಪಲು
ಇವರ 25ನೇ ವರ್ಷದ ಪುಣ್ಯ ಸ್ಮರಣೆ ಹಾಗೂ ನೆನಪು
—ಕುಟುಂಬವರ್ಗ

10ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 10 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ,
ದುಃಖತಪ್ತರು:
ಪತ್ನಿ, ಸೊಸೆ, ಮಕ್ಕಳು ಅಳಿಯಂದಿರು ಮತ್ತು ಕುಟುಂಬ ವರ್ಗದವರು
ತೆನ್ನೀರಾ ಟಿ.ಎಂ. ಪೂವಯ್ಯ
ನಿವೃತ್ತರು, ಪೊಲೀಸ್ ಇಲಾಖೆ

ಅನುತ್ತೀರ್ಣರಾದ ವಿದ್ಯಾರ್ಥಿಗಳು ಭರವಸೆ ಕಳೆದುಕೊಳ್ಳದೆ ಮರು ಪರೀಕ್ಷೆಗೆ ಸಜ್ಜಾಗಬೇಕು

ಪ್ರೇರಣಾ ಫೌಂಡೇಶನ್ ರಜತ ಮಹೋತ್ಸವದಲ್ಲಿ ಶಿಕ್ಷಣ ತಜ್ಞ ಗುರುರಾಜ ಕರಜಗಿ ಸಲಹೆ



ಮೈಸೂರು ಮೆಡಿಕಲ್ ಕಾಲೇಜಿನ ಅಮೃತೋತ್ಸವ ಸಭಾಂಗಣದಲ್ಲಿ ಆಯೋಜಿಸಿದ್ದ ಪ್ರೇರಣಾ ಫೌಂಡೇಶನ್ ರಜತ ಮಹೋತ್ಸವ ಕಾರ್ಯಕ್ರಮವನ್ನು ದಾರಿದೀಪ ಸಂಶೋಧನಾ ಕೇಂದ್ರದ ಮುಖ್ಯಸ್ಥ ಪ್ರೊ.ಬೋರಲಿಂಗಯ್ಯ ಉದ್ಘಾಟಿಸಿದರು.

ಮೈಸೂರು, ಮಾ.2(ಎಂಟಿವೈ)– ಯಾವುದೇ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಭರವಸೆ ಕಳೆದುಕೊಳ್ಳದೇ, ಮರು ಪರೀಕ್ಷೆಗೆ ಸಜ್ಜಾಗಬೇಕು ಎಂದು ಶಿಕ್ಷಣ ತಜ್ಞ ಗುರುರಾಜ ಕರಜಗಿ ಸಲಹೆ ನೀಡಿದ್ದಾರೆ.

ಮೈಸೂರಿನ ಜೆ.ಕೆ.ಮೈದಾನದಲ್ಲಿರುವ ಮೈಸೂರು ಮೆಡಿಕಲ್ ಕಾಲೇಜಿನ ಅಮೃತೋತ್ಸವ ಸಭಾಂಗಣದಲ್ಲಿ ಆಯೋಜಿಸಿದ್ದ ಪ್ರೇರಣಾ ಫೌಂಡೇಶನ್ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಫೇಲ್ ಆದರೆ ಅದನ್ನು ಸವಾಲಾಗಿ ಸ್ವೀಕರಿಸಬೇಕು. ಪರೀಕ್ಷೆಯಲ್ಲಿ ಫೇಲ್ ಆದರೆ, ಜೀವನದಲ್ಲಿ ಫೇಲ್ ಆದಂತೆ ಎಂದು ಭಾವಿಸುವುದು ಸರಿಯಲ್ಲ. ಜೀವನ ಎಂಬುದು ದೊಡ್ಡದಾಗಿದ್ದು, ಅದರಲ್ಲಿ ನೂರಾರು ಪರೀಕ್ಷೆಗಳು ಎದುರಾಗುತ್ತವೆ. ಆ ಕಾರಣದಿಂದ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಭರವಸೆ ಕಳೆದುಕೊಳ್ಳಬಾರದು. ಅನುತ್ತೀರ್ಣರಾದವರು ಮರು ಪರೀಕ್ಷೆಗೆ ಸಜ್ಜಾಗಬೇಕು ಎಂದರು.

ಪೋಷಕರು ತಮ್ಮ ಮಕ್ಕಳನ್ನು ದಡ್ಡರು ಎಂದು ಹೇಳುವುದಿಲ್ಲ. ಯಾವುದೋ ಒಂದು ವಿಷಯದಲ್ಲಿ ಕಡಿಮೆ ಅಂಕ ತೆಗೆದಿದ್ದಾನೆ. ಆದರೆ, ಬೇರೆಲ್ಲಾ ವಿಷಯದಲ್ಲೂ ಬುದ್ಧಿವಂತ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಈ ಮಾತು ಸತ್ಯ. ಯಾವುದೋ ಒಂದು ವಿಷಯದಲ್ಲಿ ಆಸಕ್ತಿ ಇಲ್ಲ ಎಂಬ ಮಾತ್ರಕ್ಕೆ ಉಳಿದ ವಿಷಯಗಳಲ್ಲೂ ದುರ್ಬಲ ಎಂದು ಹೇಳಲು ಸಾಧ್ಯವೇ ಎಂದರು.

ವಿದ್ಯಾರ್ಥಿಗಳು ಕೇವಲ ಅಂಕಗಳ ಹಿಂದೆ ಬೀಳುವ ಮಾರ್ಕ್ಸ್‌ವಾದಿಗಳಾಗಬೇಡಿ. ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಗುರುತಿಸಿ, ಅವರನ್ನು ಅರ್ಥಮಾಡಿಕೊಂಡು ಕಲಿಕೆಯಲ್ಲಿ ತೊಡಗಿಸಬೇಕು. ಆಗ ಮಾತ್ರ ಉನ್ನತ ಸಾಧನೆಯನ್ನು ಎದುರು ನೋಡಬಹುದು ಎಂದು ಅಭಿಪ್ರಾಯಪಟ್ಟರು.

ಅನುತ್ತೀರ್ಣರಾದ ವಿದ್ಯಾರ್ಥಿಗಳಲ್ಲಿ ಭರವಸೆ ಮೂಡಿಸಿ, ಪ್ರೋತ್ಸಾಹ ನೀಡುವ ಮೂಲಕ ಭವಿಷ್ಯ ರೂಪಿಸುತ್ತಿರುವ ಪ್ರೇರಣಾ ಸಂಸ್ಥೆ ಸಮಾಜದಲ್ಲಿ ಮಾದರಿ ಸ್ಥಾನದಲ್ಲಿ ನಿಲ್ಲುತ್ತದೆ. ಪ್ರೇರಣಾ ಸಂಸ್ಥೆಯ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಇಂಥ ಸಾಧನೆಯನ್ನು ಹೊಮ್ಮಿಸುವಲ್ಲಿ ಸಫಲರಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಗೀತ ನಿರ್ದೇಶಕ ವಿ.ನಾಗೇಂದ್ರ ಪ್ರಸಾದ್ ಮಾತನಾಡಿ, ಸಾಂಪ್ರದಾಯಿಕ ಶಿಕ್ಷಣ ಸಂಸ್ಥೆಗಳ ವಿಫಲತೆಯು ಪ್ರೇರಣಾದಂಥ ಸಂಸ್ಥೆಯ ಉದಯಕ್ಕೆ ಕಾರಣವಾಗುತ್ತದೆ. ಮಕ್ಕಳನ್ನು ಸಂತೈಸುವ, ಅವರನ್ನು ಅರ್ಥಮಾಡಿಕೊಳ್ಳುವಲ್ಲಿ ಹಲವು ಸಂಸ್ಥೆಗಳು ಸೋಲುತ್ತಿವೆ. ಪ್ರೇರಣಾ ಯಾವುದೇ ಶಿಕ್ಷಣ ಸಂಸ್ಥೆಗೂ ಕಡಿಮೆಯಿಲ್ಲದ ಸಾಧನೆಯನ್ನು ಮಾಡಿದೆ ಎಂದರು.

ಇದಕ್ಕೂ ಮುನ್ನ ದಾರಿದೀಪ ಸಂಶೋಧನಾ ಕೇಂದ್ರದ ಮುಖ್ಯಸ್ಥ ಪ್ರೊ.ಬೋರಲಿಂಗಯ್ಯ, ಪ್ರೊ.ಸರಸ್ವತಿ ದಂಪತಿ ಕಾರ್ಯಕ್ರಮ ಉದ್ಘಾಟಿಸಿದರು. ಸಂಸ್ಥೆ ನಡೆದು ಬಂದ ಹಾದಿಯನ್ನು ಸ್ಮರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಾಗ್ಮಿ ಪ್ರೊ. ಎಂ.ಕೃಷ್ಣೇಗೌಡ ವಹಿಸಿದ್ದರು. ಸಂಗೀತ ನಿರ್ದೇಶಕ ಶ್ರೀಧರ್ ವಿ.ಸಂಭ್ರಮ್, ವ್ಯಕ್ತಿತ್ವ ವಿಕಸನ ಮತ್ತು ಕಲಿಕಾ ತರಬೇತುದಾರ ಆರ್.ಎ. ಚೇತನ್‌ರಾಮ್ ಉಪಸ್ಥಿತರಿದ್ದರು.

ಡಿಜಿಪಿ ಅಲೋಕ್ ಮೋಹನ್ ಅಧಿಕಾರಾವಧಿ ವಿಸ್ತರಣೆ



ಬೆಂಗಳೂರು, ಮಾ.2– ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರ ಅಧಿಕಾರಾವಧಿ 4 ತಿಂಗಳು ವಿಸ್ತರಣೆಯಾಗಲಿದೆ ಎಂಬ ವಿಷಯ ಪೊಲೀಸ್ ಇಲಾಖೆಯಲ್ಲಿ ಸಂಚಲನ ಮೂಡಿಸಿದೆ.

ಇದೇ ವರ್ಷ ಏ.30ಕ್ಕೆ ಅಲೋಕ್ ಮೋಹನ್ ಸೇವಾ ನಿವೃತ್ತಿ ಹೊಂದಬೇಕಿದೆ. ಆದರೆ ಸುಪ್ರೀಂ ಕೋರ್ಟ್ ಆದೇಶದನ್ವಯ ಅವರ ಅಧಿಕಾರಾವಧಿ ಆಗಸ್ಟ್‌ವರೆಗೆ ವಿಸ್ತರಣೆಯಾಗಲಿದೆ ಎಂಬ ಚರ್ಚೆ ನಡೆದಿದೆ. ಈ ಸಂಬಂಧ ಕೇಂದ್ರ ಗೃಹ ಇಲಾಖೆಗೆ ರಾಜ್ಯ ಸರ್ಕಾರದಿಂದ ಶಿಫಾರಸು ಮಾಡಿದ್ದು, ಕೇಂದ್ರ ಸಮ್ಮತಿಸಿದರೆ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಮೊದಲ ಬಾರಿಗೆ ಡಿಜಿ–ಐಜಿಪಿ ಅಧಿಕಾರಾವಧಿ ವಿಸ್ತರಣೆಯಾದಂತಾಗುತ್ತದೆ.

ಈ ಹಿನ್ನೆಲೆಯಲ್ಲಿ ನಿವೃತ್ತಿಗೂ 3 ತಿಂಗಳ ಮುನ್ನ ಗೃಹ ಇಲಾಖೆಗೆ ಸಲ್ಲಿಕೆಯಾದ ಐಪಿಎಸ್ ಅಧಿಕಾರಿಗಳ ಹೆಸರಿನ ಪಟ್ಟಿಯಲ್ಲಿ ಅಲೋಕ್ ಮೋಹನ್ ಅವರ ಹೆಸರು ಉಲ್ಲೇಖವಾಗಿಲ್ಲ ಎಂದು ಮೂಲಗಳು ಹೇಳಿವೆ.

ಆಡಳಿತಾತ್ಮಕ ದೃಷ್ಟಿಯಿಂದ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಕನಿಷ್ಠ 2 ವರ್ಷಗಳ ಅಧಿಕಾರಾವಧಿ ಹೊಂದಿರಬೇಕು ಎಂದು ಸುಪ್ರೀಂ ಆದೇಶವಿದೆ. ಈ ಆದೇಶ ಮುಂದಿಟ್ಟು ತಮಗೆ 4 ತಿಂಗಳು ಅಧಿಕಾರಾವಧಿ ವಿಸ್ತರಿಸುವಂತೆ ರಾಜ್ಯ ಸರ್ಕಾರಕ್ಕೆ ಅಲೋಕ್ ಮೋಹನ್ ಕೋರಿಕೆ ಸಲ್ಲಿಸಿದ್ದಾರೆ. ಈ ಮನವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ತಿಳಿದು ಬಂದಿದೆ.

ಕೇಂದ್ರ ತನಿಖಾ ದಳ (ಸಿಬಿಐ) ನಿರ್ದೇಶಕರಾಗಿ ಪ್ರವೀಣ್ ಸೂದ್ ಅವರು ತೆರಳಿದ ಬಳಿಕ ಅವರಿಂದ ತೆರವಾದ ಡಿಜಿಪಿ ಹುದ್ದೆಗೆ 2023ರ ಮೇ.23ರಂದು ಸೇವಾ ಹಿರಿತನದ ಆಧಾರದ ಮೇರೆಗೆ ಅಲೋಕ್ ಮೋಹನ್ ನೇಮಕಗೊಂಡರು. ಆದರೆ ಮೊದಲು ಪ್ರಭಾರ ಡಿಜಿಪಿಯಾಗಿ ಕಾರ್ಯನಿರ್ವಹಿಸಿದ್ದ ಅವರಿಗೆ 4 ತಿಂಗಳ ಬಳಿಕ ಹುದ್ದೆ ಕಾಯಂಗೊಂಡಿತು. ಈಗ 4 ತಿಂಗಳು ಪ್ರಭಾರ ಅವಧಿಯನ್ನು ಪರಿಗಣಿಸದೆ ಕಾಯಂ ಅವಧಿ ಮಾತ್ರ ಪರಿಗಣಿಸುವಂತೆ ಡಿಜಿಪಿ ಕೋರಿದ್ದಾರೆ. ಈ ಹಿನ್ನೆಲೆಯಲ್ಲಿ ಏಪ್ರಿಲ್‌ನಲ್ಲಿ ನಿವೃತ್ತಿಯಾಗಬೇಕಿದ್ದ ಅವರಿಗೆ ಬೋನಸ್ ಆಗಿ ನಾಲ್ಕು ತಿಂಗಳು ಅಧಿಕಾರ ಸಿಗುವ ಸಾಧ್ಯತೆಗಳಿವೆ ಎಂದು ತಿಳಿದು ಬಂದಿದೆ.

ಅಲೋಕ್‌ಕುಮಾರ್ ಮುಂಬಡ್ತಿ ವಿಳಂಬ: ಡಿಜಿಪಿ ಅಧಿಕಾರಾವಧಿ ವಿಸ್ತರಣೆಯಾದರೆ ಸೇವಾ ಹಿರಿತನ ಮೇರೆಗೆ ಎಡಿಜಿಪಿ ಅಲೋಕ್‌ಕುಮಾರ್ ಅವರಿಗೆ ಮುಂಬಡ್ತಿ 3 ತಿಂಗಳು ವಿಳಂಬವಾಗಲಿದೆ. ಅಲೋಕ್ ಮೋಹನ್ ನಿವೃತ್ತಿಯಾದರೆ ಅವರಿಂದ ತೆರವಾದ ಸ್ಥಾನಕ್ಕೆ ಡಿಜಿಪಿ ಹುದ್ದೆಗೆ ಅಲೋಕ್‌ಕುಮಾರ್ ಪದೋನ್ನತಿ ಪಡೆಯಬೇಕಿದೆ. ಆದರೆ ಡಿಜಿ–ಐಜಿ ಅಧಿಕಾರಾವಧಿ ವಿಸ್ತರಣೆಯಾದರೆ ಇವರಿಗೆ ಮುಂಬಡ್ತಿ ಪಡೆಯುವುದು ತಡವಾಗಲಿದೆ. ಇದೇ ವರ್ಷದ ಜುಲೈನಲ್ಲಿ ಕಾರಾಗೃಹ ಮತ್ತು ಸುಧಾರಣಾ ಇಲಾಖೆ ಡಿಜಿಪಿ ಮಾಲಿನಿ ಕೃಷ್ಣಮೂರ್ತಿ ನಿವೃತ್ತಿ ಬಳಿಕ ಅಲೋಕ್ ಕುಮಾರ್ ಅವರಿಗೆ ಹುದ್ದೆ ಒಲಿಯಲಿದೆ. ಅದೇ ರೀತಿ ಅಲೋಕ್ ಮೋಹನ್ ಅವರ ನಿರ್ಗಮನ ಬಳಿಕ ಡಿಜಿಪಿ ಹುದ್ದೆಗೆ ಬೆಂಗಳೂರು ನಗರ ಪೊಲೀಸ್ ಆಯುಕ್ತ ದಯಾನಂದ್ ಮುಂಬಡ್ತಿ ಪಡೆಯಲಿದ್ದಾರೆ.

100% TEAK WOOD
FACTORY FINISH DOORS & FRAMES
@ FACTORY DEPOT RATES
10 YEARS WARRANTY*
9845426862
9901291267

COMMERCIAL SPACE FOR RENT
• 1st Floor : 2000 S.ft.,
• 2nd Floor : 5000 S.ft.,
• 3rd Floor : 5000 S.ft.,
• Rooftop : 4000 S.ft.,
Built to suit
Place: Vijayanagar 3rd Stage, Near Heritage Club, Mysore
Contact :
98459 27738 / 98456 42734

10 ಪಟ್ಟು ಸಂಪಾದನೆ
ರಫ್ತು ಉದ್ಯಮ
ಕನ್ನಡದಲ್ಲಿ ಕಲಿಯಿರಿ
8123289555

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

EXOTIC WATERFRONT PROPERTY FOR SALE in MEENAKSHIPURA, Mysore
• Attached to KRS backwaters.
• 20 mins drive from ring road.
• Suitable for private farmhouse, managed farmland project, Airbnb, Resort.
SLIGHTLY NEGOTIABLE
Extent | Price
3 acres 17 guntas ₹ 4.5cr
2 acres 10 guntas ₹ 2.8cr
IMMEDIATE SALE
Contact: 9886648008 / 6362328008

ಸಿ.ಟಿ.ರವಿ–ಲಕ್ಷ್ಮಿ ಹೆಬ್ಬಾಳ್ಕರ್ ಪ್ರಕರಣ: 'ಎಥಿಕ್ಸ್ ಕಮಿಟಿ'ಗೆ ಹಸ್ತಾಂತರ



ಬೆಂಗಳೂರು, ಮಾ.2– ವಿಧಾನಪರಿಷತ್ ಬಿಜೆಪಿ ಸದಸ್ಯ ಸಿ.ಟಿ.ರವಿ ಮತ್ತು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ನಡುವಿನ ಪ್ರಕರಣವನ್ನು ವಿಧಾನಪರಿಷತ್‌ನ ಎಥಿಕ್ಸ್ ಕಮಿಟಿಗೆ ಹಸ್ತಾಂತರಿಸಲಾಗಿದೆ ಎಂದು ಸಭಾಪತಿ ಬಸವರಾಜ್ ಹೊರಟ್ಟಿ ಅವರು ಹೇಳಿದ್ದಾರೆ.

ವಿಧಾನಸೌಧ'ದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿ.ಟಿ.ರವಿ ಮತ್ತು ಲಕ್ಷ್ಮಿ ಹೆಬ್ಬಾಳ್ಕರ್ ಪ್ರಕರಣ ಈಗಾಗಲೇ ಅಂತ್ಯ ಆಗಿದೆ. ಬೆಳಗಾವಿಯಲ್ಲೇ ನಾನು ಅದಕ್ಕೆ ರೂಲಿಂಗ್ ಕೊಟ್ಟಿದ್ದೆ. ಆದರೆ, ಇಬ್ಬರೂ ಮತ್ತೆ ದೂರು ಕೊಟ್ಟಿದ್ದಾರೆ. ಇದರ ಮಧ್ಯೆ ಇಬ್ಬರಿಗೂ ಸಂಧಾನ ಮಾಡುವ ಕೆಲಸಕ್ಕೆ ಮುಂದಾಗಿದ್ದೆ. ಆದರೆ, ಇದಕ್ಕೆ ಯಾರೂ ಒಪ್ಪಿಲ್ಲ.



ಹೀಗಾಗಿ ಪ್ರಕರಣವನ್ನು ಎಥಿಕ್ಸ್ ಕಮಿಟಿಗೆ ನೀಡಿದ್ದೇನೆಂದು ಹೇಳಿದರು.

ಎಥಿಕ್ಸ್ ಕಮಿಟಿ ವರದಿ ಕೊಟ್ಟ ಮೇಲೆ ಮುಂದಿನ ತೀರ್ಮಾನ ಮಾಡುತ್ತೇನೆ. 1 ತಿಂಗಳಲ್ಲಿ ವರದಿ ಕೊಡಲು ಹೇಳಿದ್ದೇನೆ. ಈ ವಿಷಯ ಸದನದಲ್ಲಿ ಚರ್ಚೆ ಆಗುವುದಿಲ್ಲ. ಎಥಿಕ್ಸ್ ಕಮಿಟಿಯಲ್ಲಿ ಸಿ.ಟಿ. ರವಿ ಇದ್ದರೂ, ಈಗ ಅವರದ್ದೇ ಕೇಸ್ ಬಂದಿರುವುದರಿಂದ ಅವರನ್ನು ಎಥಿಕ್ಸ್ ಕಮಿಟಿಯಿಂದ ಕೈ ಬಿಡಲಾಗಿದೆ ಎಂದು ತಿಳಿಸಿದರು.

ಸದನದಲ್ಲಿ ನಡೆದಿದ್ದನ್ನು ಅಲ್ಲೇ ಮುಗಿಸಬೇಕಿತ್ತು. ಸದನ ನಡೆದಾಗ ನಡೆದಿದ್ದರೆ ಹೀಗೆ ಆಗುತ್ತಿರಲಿಲ್ಲ. ಸದನ ನಡೆಯದೇ ಇದ್ದಾಗ ಇದು ನಡೆದಿರುವುದರಿಂದ ಇಷ್ಟು ದೊಡ್ಡದು ಆಗಿದೆ. ಹೀಗಾಗಿ ಎಥಿಕ್ಸ್ ಕಮಿಟಿಗೆ ಕೊಡಲಾಗಿದೆ. ಅವರು ವರದಿ ಕೊಡಲಿ ನೋಡೋಣ. ಕಮಿಟಿಯಲ್ಲಿಯೇ ಶೇ.99ರಷ್ಟು ಸಮಸ್ಯೆ ಪರಿಹಾರ ಆಗುವ ವಿಶ್ವಾಸ ಇದೆ. ಇಲ್ಲದೇ ಹೋದರೆ ವರದಿಯನ್ನು ಅಧಿವೇಶನದಲ್ಲಿ ಮಂಡಿಸುತ್ತೇವೆಂದರು.

PUBLIC NOTICE
It is hereby notified to the general public that I, S.B. Srinivas Gandhi, S/o Late S.V. Balakrishna, aged about 79 years, residing at #244/1, Sayyaji Rao Road, Mysore, have cancelled and revoked the General Power of Attorney executed in favor of Mr. Avinash, S/o Late Seetharam, R/a #663, 92/3-A, 1st Main, B.B. Garden Road, Mysore-570004 with respect to the below mentioned Schedule Properties.
Further, any other Power of Attorney issued to Mr. Avinash or his father Late Seetharam regarding any of my properties is also hereby revoked and stands cancelled.
Henceforth, Mr. Avinash S/o Seetharam are no longer authorized to act on my behalf or represent me in any capacity concerning the said properties. Any transaction, dealing, or act undertaken by them in relation to my properties shall be considered unauthorized, illegal, and invalid.
Public and concerned authorities are hereby cautioned not to entertain or engage in any transactions with the above-mentioned individuals on my behalf. Anyone dealing with them shall do so at their own risk and responsibility.
SCHEDULE PROPERTIES
1. All that piece and parcel of agricultural land measuring an extent of 7 acres and 14 gts. bearing Sy.Nos 22,24 & 28 (Block No 21 of old Sy.No.1) of Karohatti Hosakaval (Kurahatti Hosakaval) Village, of Chikkaiana Chats Hobli, Nanjangud Taluk, and bounded on
East by: remaining ext. in Sy.No 28 (Block No. 20 of old Sy.No.1)
West by: Kiralu Village Boundary (Mysore Taluk)
North by: Sy. No 28. (Block No. 19 of old Sy No. 1)
South by: Sy. No 23 and 24 (Block No.22 of old Sy. No. 1)
2. All that piece and parcel of agricultural land measuring an extent of 8 acres and 32 gts. bearing Sy.Nos 29,32 & 33 (Block No 18 of old Sy.No. 1) of Karohatti Hosakaval (Kurahatti Hosakaval) Village, of Chikkaiana Chatra Hobli, Nanjangud Taluk, and bounded on
East by: Sy.No 40 to 46 (Block No.98 of old Sy.No.1)
West by: Mosana Bayana Halli Village Boundary (Mysore Taluk)
North by: Sy. No 32. (Block No.17 of old Sy.No. 1) and palace lease hold lands
South by: Mysore to Hosakere Road,
3. All that piece and parcel of agricultural land measuring an extent of 31 acres and 31 gts. bearing Sy.Nos 1 & 2 (Block No. 38,39 and 40 of old Sy.No.1) of Karohatti Hosakaval (Kurahatti Hosakaval) Village, of Chikkaiana Chatra Hobli, Nanjangud Taluk, and bounded on.
East by: S. Inam Hoskote Village Boundary
West by: Palace lease hold lands
North by: Palace lease holds land and Sy.No 12 (Block No.41 of old Sy.No.1)
South by: Hadinaaru Village Boundary
4. All that piece and parcel of agricultural land measuring an extent of 4 acres and 20 gts. including Kharab of 2 acres 09 gts which is exclusively reserved for Sri. Basaveshwara temple and its Surroundings, bearingly. Sy. Nos. 12 & 14 (Block No 41/c and 48 of old Sy.No. 1) of Karohatti Hosakaval (Kurahatti Hosakaval) Village of Chikkaiana Chatra Nanjangud Taluk, and bounded on
East by: Road and palace lease hold lands
West by: Lease hold lands
North by: Palace lease hold lands
South by: Sy.No 11, 12 and 13 (Block No.41/B of old Sy.No.1)
For any further clarification, kindly contact :
Sd/- Adithya S.K.
Advocate for S B Srinivas Gandhi,
Mob : 94809 60424, Email : adityasklegal@gmail.com

ಕಂಪನಿ ಸೆಕ್ರೆಟರೀಸ್ ಕೋರ್ಸ್ ಮಾಡಿದವರಿಗೆ ಉದ್ಯೋಗವಕಾಶ

2030ರ ಅವಧಿಗೆ ದೇಶದಲ್ಲಿ 20 ಸಾವಿರ ಮಂದಿಗೆ ಉದ್ಯೋಗ



ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಸಿ.ಎಸ್.ಧನಂಜಯ್ ಶುಕ್ಲಾ ಮಾತನಾಡಿದರು.

ಮೈಸೂರು, ಮಾ.2(ಜಿಎ)–ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ (ಐಸಿಎಸ್‌ಐ) ದಲ್ಲಿ ಕಂಪನಿ ಸೆಕ್ರೆಟರೀಸ್ ಕೋರ್ಸ್ ಮಾಡಿದವರಿಗೆ ವಿಶ್ವದಾದ್ಯಂತ ಉದ್ಯೋಗವಕಾಶವಿದೆ ಎಂದು ಸಂಸ್ಥೆಯ ಅಧ್ಯಕ್ಷ ಸಿ.ಎಸ್. ಧನಂಜಯ್ ಶುಕ್ಲಾ ತಿಳಿಸಿದರು.

ಮೈಸೂರು–ಕೆಆರ್‌ಎಸ್ ರಸ್ತೆಯಲ್ಲಿರುವ ಐಸಿಎಸ್‌ಐ ಸಂಸ್ಥೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಐಸಿಎಸ್‌ಐ ಒಂದು ಪ್ರಮುಖ ವೃತ್ತಿಪರ ಸಂಸ್ಥೆಯಾಗಿದ್ದು, ಕಂಪನಿ ಕಾರ್ಯದರ್ಶಿಗಳ ವೃತ್ತಿಯನ್ನು ನಿಯಂತ್ರಿಸಲು ಮತ್ತು ಅಭಿವೃದ್ಧಿಪಡಿಸಲು ಸಂಸತ್ತಿನ ಕಾಯಿದೆಯಡಿ (ಕಂಪನಿ ಕಾರ್ಯದರ್ಶಿಗಳ ಕಾಯ್ದೆ, 1980) ಸ್ಥಾಪಿಸಲಾಗಿದೆ ಎಂದರು.

ಐಸಿಎಸ್‌ಐ ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಕಂಪನಿ ಕಾರ್ಯದರ್ಶಿಗಳ ಕೋರ್ಸ್‌ನ ವಿದ್ಯಾರ್ಥಿಗಳಿಗೆ ಸಂಸ್ಥೆಯು ಉನ್ನತ–ಗುಣಮಟ್ಟದ ಶಿಕ್ಷಣವನ್ನು ಮತ್ತು ಸದಸ್ಯರಿಗೆ ಉತ್ತಮ ಗುಣಮಟ್ಟದ ಮಾನದಂಡಗಳನ್ನು ಒದಗಿಸುವ ಜೊತೆಗೆ ಉತ್ತಮ ಉದ್ಯೋಗವಕಾಶವಿದ್ದು, 2030ರ ಅವಧಿಗೆ ಭಾರತಕ್ಕೆ 20 ಸಾವಿರ ಮಂದಿ ಕಂಪನಿ ಸೆಕ್ರೆಟರೀಸ್ ಅವಶ್ಯಕತೆ ಇದೆ ಎಂದರು.

ನವದೆಹಲಿಯಲ್ಲಿ ಐಸಿಎಸ್‌ಐ ಪ್ರಧಾನ ಕಚೇರಿ ಹೊಂದಿದ್ದು, ನವದೆಹಲಿ, ಚೆನ್ನೈ, ಕೋಲ್ಕತ್ತಾ ಮತ್ತು ಮುಂಬೈನಲ್ಲಿ ನಾಲ್ಕು ಪ್ರಾದೇಶಿಕ ಕಚೇರಿಗಳು, ದೇಶಾದ್ಯಂತ 73 ಅಧ್ಯಾಯ ಕಚೇರಿಗಳು ಮತ್ತು ಮುಂಬೈ, ಹೈದರಾಬಾದ್ ಮತ್ತು ಕೋಲ್ಕತ್ತಾದಲ್ಲಿ ಕಾರ್ಪೊರೇಟ್ ಆಡಳಿತ, ಸಂಶೋಧನೆ ಮತ್ತು ತರಬೇತಿ ಕೇಂದ್ರದೊಂದಿಗೆ ರಾಷ್ಟ್ರವ್ಯಾಪಿ ಉಪಸ್ಥಿತಿಯನ್ನು ಹೊಂದಿದೆ. ಸಂಸ್ಥೆಯು ಆಸ್ಟ್ರೇಲಿಯಾ, ಕೆನಡಾ, ಸಿಂಗಾಪುರ, ಯುಎಇ, ಯುಕೆ ಮತ್ತು ಯುಎಸ್‌ಎಗಳಲ್ಲಿ ಆರು ವಿದೇಶಿ ಕೇಂದ್ರಗಳನ್ನು ಸಹ ಹೊಂದಿದೆ. 75,000ಕ್ಕೂ ಹೆಚ್ಚು ಸದಸ್ಯರು ಮತ್ತು ಸುಮಾರು 200,000 ವಿದ್ಯಾರ್ಥಿಗಳೊಂದಿಗೆ, ವಿಶ್ವದ ಅತಿದೊಡ್ಡ ಸದಸ್ಯತ್ವ ಮತ್ತು ವಿದ್ಯಾರ್ಥಿ ನೆಲೆಯನ್ನು ಹೊಂದಿದೆ ಎಂದು ತಿಳಿಸಿದರು.

ಮೈಸೂರು ಚಾಪ್ಟರ್‌ನ ಅಧ್ಯಕ್ಷ ಸಿ.ಎಸ್.ಕೃಷ್ಣೇಗೌಡ ಮಾತನಾಡಿ, ಮೈಸೂರಿನಲ್ಲಿ ಈವರೆಗೂ 96 ಮಂದಿ ಕೋರ್ಸ್ ಪೂರ್ಣಗೊಳಿಸಿ, ಉತ್ತಮ ಸ್ಥಾನದಲ್ಲಿ ಉದ್ಯೋಗ ಪಡೆದುಕೊಂಡಿದ್ದಾರೆ. ಐಸಿಎಸ್‌ಐಯ ಕೋರ್ಸ್‌ಗೆ ಯಾವುದೇ ವಯೋಮಿತಿ ಇಲ್ಲ. ಎರಡು ವರ್ಷದ ಅವಧಿಯಲ್ಲಿ ಕೋರ್ಸ್ ಪೂರ್ಣಗೊಳಿಸಬಹುದಾಗಿದೆ. ಪ್ರಸ್ತುತ ಮೈಸೂರು, ಚಾಮರಾಜನಗರ, ಹಾಸನ ಮತ್ತು ಮಂಡ್ಯದಿಂದ 1,982 ವಿದ್ಯಾರ್ಥಿಗಳು ಕೋರ್ಸ್ ತೆಗೆದುಕೊಂಡಿದ್ದಾರೆ. ತರಬೇತಿ ನಂತರ ಪ್ರಾಕ್ಟಿಕಲ್ ಸಂದರ್ಭದಲ್ಲಿ ಸ್ಟೈಫಂಡ್ ನೀಡಲಾಗುತ್ತದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಎಂ.ಜಿ.ಅರುಣ್ ಕುಮಾರ್, ನಾಗೇಂದ್ರ ಡಿ.ರಾವ್, ಪವನ್ ಜಿ.ಚಂದಕ್, ಸಿ.ದ್ವಾರಕನಾಥ್ ಉಪಸ್ಥಿತರಿದ್ದರು.

ಯಶಸ್ವಿ
ಈಗ ಪರಿಚಯಿಸಲಾಗುತ್ತಿದೆ
ಚಿನ್ನದ ಜರಿ ಕ್ರೆಪ್ ರೇಷ್ಮೆ ಸೀರೆಗಳು
ಪ್ಯೂರ್ ಜರಿ ಕಾಂಚಿವರಂ ಸೀರೆಗಳು
ಸಹ ಲಭ್ಯವಿದೆ
ಫೋನ್ : 0821–2431830
Yashaswi_silks yashaswi Silks
#74, ಡಿ.ಡಿ. ಅರಸ್ ರಸ್ತೆ, ಮೈಸೂರು–570001.